ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 18
ಮೆ 05, 2013
ಪುಟ 16
ರೂ. 10/-








ಬಿಜೆಪಿ ಬದಲಿಗೆ
ಬೇಕೆ ಈ ಕಾಂಗ್ರೆಸ್




ಕೆ.ಆರ್.ಪುರಂ
ರಿಯಲ್ ಎಸ್ಟೇಟ್ ದಂಧೆಯೂ, ದುಡಿವ ಜನರ ಪಕ್ಷದ ಸ್ಪರ್ಧೆಯೂ



ಕಲ್ಲಿದ್ದಲು ಹಗರಣ : ಸಂಸತ್ತನ್ನು ನಿಷ್ಕ್ರಿಯಗೊಳಿಸಿದ ಯುಪಿಎ ಹಠಮಾರಿತನ



ಆನೇಕಲ್ : ಜಾತಿವಾದ-ಕೋಮುವಾದಕ್ಕೆ ಸಿಪಿಐ(ಎಂ) ಸವಾಲು




ಯುಗ ಪ್ರವರ್ತಕ ಲೆನಿನ್



ಅವಕಾಶ ಕಳೆದುಕೊಳ್ಳುತ್ತಿರುವ ಜೆಡಿ(ಎಸ್)

ಯುಗಪ್ರವರ್ತಕ ಲೆನಿನ್



ಲೆನಿನ್ ಅವರ 143 ನೇ ಜಯಂತಿ ಸಂದರ್ಭದಲ್ಲಿ ಅವರ ಕ್ರಾಂತಿಕಾರಿ ಬದುಕಿನ ಸಂಕ್ಷಿಪ್ತ ಸ್ಮರಣೆ

– ನಿತ್ಯಾನಂದಸ್ವಾಮಿ

ಲೆನಿನ್ ಹುಟ್ಟಿದ್ದು 1870 ಎಪ್ರಿಲ್ 22 ರಂದು. ರಶಿಯಾ ಆಗ ಝಾರ್ ಚಕ್ರವರ್ತಿಯ ನಿರಂಕುಶ ಆಳ್ವಿಕೆಯ ಅಡಿಯಲ್ಲಿ ನರಳುತಿತ್ತು. ಜಮಿನ್ದಾರರು ರೈತರ ಸುಲಿಗೆ ಮಾಡುತ್ತಿದ್ದರು. ಕಾರ್ಮಿಕರು ಬಂಡವಾಳಗಾರರ ತೀವ್ರ ಶೋಷಣೆಗೆ ಒಳಗಾಗಿದ್ದರು.


ಚಿಕ್ಕಂದಿನಿಂದಲೇ ಲೆನಿನ್ ಸಮಾಜಮುಖಿಯಾಗಿ ಬೆಳೆಯತೊಡಗಿದ್ದರು. ಶ್ರೀಮಂತರು ಯಾವ ದುಡಿಮೆಯನ್ನೂ ಮಾಡದೆಯೇ ಸುಖಜೀವನ ನಡೆಸುತ್ತಿದ್ದುದನ್ನೂ ಬಡಜನರು ದುಡಿದುಡಿದು ಕಂಗಾಲಾಗುತ್ತಿರುವುದನ್ನೂ ಗಮನಿಸುತ್ತಿದ್ದ ಲೆನಿನ್ ಈ ಅಸಮಾನತೆ ಬದಲಾಗುವುದಾದರೂ ಹೇಗೆ ಎಂಬುದನ್ನು ಕುರಿತು ಆಲೋಚಿಸುತ್ತಿದ್ದರು. 1887 ರಲ್ಲಿ ಚಕ್ರವರ್ತಿಯನ್ನು ಕೊಲ್ಲಲು ಕೆಲವು ಯುವಕರು ಮಾಡಿದ ಫಿತೂರಿಯಲ್ಲಿ ಭಾಗವಹಿಸಿದ ಆರೋಪದ ಮೇಲೆ ಲೆನಿನ್ನರ ಅಣ್ಣ ಅಲೆಗ್ಸಾಂಡರ್‌ನನ್ನು ಬಂಧಿಸಿ ಮರಣದಂಡನೆಗೆ ಗುರಿಪಡಿಸಲಾಯಿತು. ಈ ಘಟನೆ ಲೆನಿನ್‌ರ ಮೇಲೆ ಗಹನವಾದ ಪರಿಣಾಮ ಬೀರಿತ್ತು.

ವಿದ್ಯಾರ್ಥಿ ದೆಸೆಯಲ್ಲೇ ಲೆನಿನ್ ಕ್ರಾಂತಿಕಾರಿ ಸಾಹಿತ್ಯವನ್ನು ಓದುವುದರಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದರು. 1848ರಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸರು ಪ್ರಕಟಿಸಿದ 'ಕಮ್ಯೂನಿಸ್ಟ್ ಪ್ರಣಾಳಿಕೆ' ಯನ್ನು ಓದಿ ಯುವಕ ಲೆನಿನ್ ಪ್ರಭಾವಿತರಾದಾರು ಲೆನಿನ್ನರ ಅಣ್ಣ ಅಲೆಗ್ಸಾಂಡರ್ ಮನೆಯಲ್ಲಿ ತಂದು ಇಟ್ಟಿದ್ದ ಮಾರ್ಕ್ಸ್‌ರವರ ಮೇರು ಕೃತಿ 'ಬಂಡವಾಳ' ವನ್ನು ಲೆನಿನ್ 18 ವರ್ಷ ಪ್ರಾಯದವರಾಗಿದ್ದಾಗಲೇ ಓದಿ ಅದರ ಕುರಿತಾದ ಟಿಪ್ಪಣಿಗಳನ್ನು ಮಾಡಿಕೊಂಡಿದ್ದರು. 1891 ರಲ್ಲಿ ಅವರು ಕಾನೂನು ಪದವಿಯನ್ನು ಪಡೆದರು. 1892–93 ರ ಅವಧಿಯಲ್ಲಿ ಅವರು 15 ಸಲ ನ್ಯಾಯಾಲಯಕ್ಕೆ ಹಾಜರಾಗಿ ಬಡರೈತರ ಮತ್ತು ಕೂಲಿಯಾಳುಗಳ ಪರವಾಗಿ ವಾದಿಸಿದ್ದರು. 1892 ರಲ್ಲಿ ಅವರು ಸಮಾರಾದಲ್ಲಿ ಮೊದಲ ರಹಸ್ಯ ಮಾರ್ಕ್ಸ್‌ವಾದಿ ಕೂಟವನ್ನು ಸ್ಥಾಪಿಸಿದರು.

ರಾಜಕೀಯ ರಂಗ ಪ್ರವೇಶ :

1893 ರಲ್ಲಿ ಲೆನಿನ್ ಸೈಂಟ್ ಪೀಟರ್ಸ್ ಬರ್ಗ್ ನಗರಕ್ಕೆ ಆಗಮಿಸಿ ನಗರದ ಕಾರ್ಮಿಕರ ನಡುವೆ ಕೆಲಸ ಮಾಡಲು ಆರಂಭಿಸಿದರು. ಬೇರೆ ಬೇರೆ ಕಡೆಗಳಲ್ಲಿದ್ದ ಮಾರ್ಕ್ಸ್‌ವಾದಿ ರಹಸ್ಯ ಕೂಟಗಳನ್ನು ಒಂದುಗೂಡಿಸಿ ಅವರು 'ದುಡಿಯುವ ವರ್ಗದ ವಿಮೋಚನಾ ಹೋರಾಟ ಸಂಘವನ್ನು ಸ್ಥಾಪಿಸಿದರು. 1894 ರಲ್ಲಿ ಅವರು 'ಜನರ ಮಿತ್ರರು ಯಾರು?' ಎಂಬ ತಮ್ಮ ಪ್ರಸಿದ್ಧ ಕೃತಿಯನ್ನು ಹೊರತಂದರು. 1896 ರಲ್ಲಿ ಲೆನಿನ್ ಅವರನ್ನು ಬಂಧಿಸಿ 14 ತಿಂಗಳ ಕಾಲ ಜೈಲಿನಲ್ಲಿ ಇಡಲಾಯಿತು. ನಂತರ ಅವರನ್ನು ಸೈಬಿರಿಯಾಕ್ಕೆ ಗಡಿಪಾರು ಮಾಡಲಾಯಿತು. ಗಡಿಪಾರಾಗಿ ಸೈಬಿರಿಯಾದಲ್ಲಿ ಇರುವಾಗ ಲೆನಿನ್ 'ರಶಿಯಾದಲ್ಲಿ ಬಂಡವಾಳಶಾಹಿ ಬೆಳವಣಿಗೆ' ಎಂಬ ತಮ್ಮ ಬೃಹತ್ ಕೃತಿಯನ್ನು ಬರೆದರು. ಈ ಕೃತಿಯಲ್ಲಿ ಅವರು ಕೈಗಾರಿಕಾ ಉತ್ಪಾದನೆಯ ಬಂಡವಾಳಶಾಹಿ ಸ್ವರೂಪವನ್ನು ಆಧಾರಸಹಿತವಾಗಿ ವಿವರಿಸಿದರು. ಕಾರ್ಮಿಕರು ಮತ್ತು ರೈತರ ನಡುವಿನ ಕ್ರಾಂತಿಕಾರಿ ಮೈತ್ರಿಯ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಿದವರಲ್ಲಿ ಲೆನಿನ್ ಮೊದಲಿಗರು.

ಸೈಬಿರಿಯಾದಿಂದ ಬಿಡುಗಡೆಯಾಗಿ ಹಿಂತಿರುಗಿದ ಲೆನಿನ್ ಮಾರ್ಕ್ಸ್‌ವಾದಿ ಸಿದ್ಧಾಂತದ ಆಧಾರದಲ್ಲಿ ಕ್ರಾಂತಿಕಾರಿ ಶಕ್ತಿಗಳನ್ನು ಸೈದ್ಧಾಂತಿಕವಾಗಿ, ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಒಂದುಗೂಡಿಸಲು ಶ್ರಮಿಸತೊಡಗಿದರು. ಹೊಸ ಮಾದರಿಯ ಪಕ್ಷವೊಂದನ್ನು ಸ್ಥಾಪಿಸಬೇಕೆಂದೂ ಅದ–



ಕ್ಕೊಂದು ಮುಖಪತ್ರಿಕೆ ಇರಬೇಕೆಂದು ಯೋಚಿಸತೊಡಗಿದ್ದರು. ಪೊಲೀಸರ ಕಿರುಕುಳ ತಪ್ಪಿಸಿಕೊಳ್ಳಲು ಅವರು ಜರ್ಮನಿಗೆ ಹೋದರು. ಅಲ್ಲಿನ ಮಾರ್ಕ್ಸ್‌ವಾದಿ ಗುಂಪುಗಳ ಸಹಾಯ ಪಡೆದು ರಹಸ್ಯವಾಗಿ ಪತ್ರಿಕೆಯೊಂದನ್ನು ಆರಂಭಿಸಿದರು. ಅದಕ್ಕೆ 'ಕಿಡಿ' ಎಂದು ಹೆಸರಿಟ್ಟರು. ಮುದ್ರಣವಾದ ಪತ್ರಿಕೆಯ ಪ್ರತಿಗಳನ್ನು ರಹಸ್ಯವಾಗಿ ರಶಿಯಾಕ್ಕೆ ಕಳುಹಿಸಿ ಎಲ್ಲಾ ಕಡೆ ಹಂಚಲು ವ್ಯವಸ್ಥೆ ಮಾಡಿದರು. ಹೀಗೆ ಹೊರ ದೇಶದಲ್ಲಿ ಇದ್ದು–ಕೊಂಡೇ ಲೆನಿನ್ ರಶಿಯಾದಲ್ಲಿ ಕ್ರಾಂತಿಕಾರಿ ಹೋರಾಟಕ್ಕೆ ಮಾರ್ಗದರ್ಶನ ನೀಡಿದರು. ಹೊರದೇಶದಲ್ಲಿಯೂ ಅವರು ಒಂದೇ ಕಡೆ ಇರುತ್ತಿರಲಿಲ್ಲ ಏಕೆಂದರೆ ಅಲ್ಲಿಯೂ ರಶಿಯಾ ಪೊಲೀಸ್ ಬೇಹುಗಾರರು ಅವರ ಬೆನ್ನುಹತ್ತಿದ್ದರು.

ಲೆನಿನ್ನರು ತಮ್ಮ ಬರಹಗಳಲ್ಲಿ, ದುಡಿಯುವ ಜನಸಮೂಹಗಳನ್ನು ಕ್ರಾಂತಿಕಾರಿ ಹೋರಾಟದಲ್ಲಿ ಮುನ್ನಡೆಸುವ ಸಾಮರ್ಥ್ಯವುಳ್ಳ, ಹೊಸ ಮಾದರಿಯ ಕಾರ್ಮಿಕ ವರ್ಗದ ಪಕ್ಷವನ್ನು ಕಟ್ಟುವುದರ ಮಹತ್ವವನ್ನು ವಿವರಿಸಲು ವಿಶೇಷ ಗಮನ ನೀಡುತ್ತಿದ್ದರು. 1901 ರಿಂದ 1902 ರ ನಡುವೆ ಅವರು ಬರೆದು ಪೂರ್ಣಗೊಳಿಸಿದ "ಮಾಡಬೇಕಾದುದೇನು?" ಎಂಬ ಕೃತಿ ಹಾಗೂ 1904 ರಲ್ಲಿ ಬರೆದ "ಒಂದು ಹೆಜ್ಜೆ ಮುಂದೆ, ಎರಡು ಹೆಜ್ಜೆ ಹಿಂದೆ" ಎಂಬ ಕೃತಿಗಳು ಒಂದು ನೈಜ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವಲ್ಲಿ ಮಹತ್ವದ ಕೊಡುಗೆಯನ್ನು ನೀಡಿದವು.

ಬೊಲ್ಶೆವಿಕ್ ಪಕ್ಷದ ಸ್ಥಾಪನೆ.

ಶೋಷಣೆಯಿಂದ ಮುಕ್ತವಾದ ಹೊಸ ಸಮಾಜದ ರಚನೆಗೆ ಸಮಾಜವಾದಿ ಕ್ರಾಂತಿಯನ್ನು ಯಶಸ್ವಿಗೊಳಿಸಬೇಕು. ಕ್ರಾಂತಿಯನ್ನು ಯೋಜಿಸಲು ಮತ್ತು ಮುನ್ನಡೆಸಲು ಕ್ರಾಂತಿಕಾರಿ ಪಕ್ಷವೊಂದನ್ನು ಸ್ಥಾಪಿಸಬೇಕು. ಅದು ಕಾರ್ಮಿಕ ವರ್ಗದ ಪಕ್ಷವಾಗಿರಬೇಕು. ಪ್ಯಾರಿಸ್ ಕಮ್ಯೂನನ್ನು ಬಂಡವಾಳಗಾರರು ವಿಫಲಗೊಳಿಸಿದರು. ರಶಿಯಾ ಕ್ರಾಂತಿಯನ್ನು ವಿಫಲಗೊಳಿಸಲು ಬಿಡಬಾರದು. ರಹಸ್ಯವಾಗಿಯೂ ಬಹಿರಂಗವಾಗಿಯೂ ಕೆಲಸ ಮಾಡಬಲ್ಲ ಪಕ್ಷವೊಂದಿದ್ದರೆ ನಾವು ಜಯಶಾಲಿಗಳಾಗಬಹುದು ಎಂದು ಕ್ರಾಂತಿಕಾರಿಗಳೊಂದಿಗೆ ಲೆನಿನ್ ಚರ್ಚಿಸುತ್ತಿದ್ದರು. ಒಂದು ರಾಜಕೀಯ ಪಕ್ಷವನ್ನು ಸ್ಥಾಪಿಸುವ ಕುರಿತು ಚರ್ಚಿಸಲು 1903 ರಲ್ಲಿ ಲೆನಿನ್ ಜಿನೀವಾದಲ್ಲಿ ಒಂದು ಅಧಿವೇಶನವನ್ನು ಕರೆದರು. ಪೊಲೀಸರ ಅನುಮತಿ ಸಿಗಲಿಲ್ಲವಾದ್ದರಿಂದ ಅಧಿವೇಶನವನ್ನು ಮೊದಲು ಬೆಲ್ಜಿಯಂ ರಾಜಧಾನಿ ಬ್ರಸೆಲ್ಸ್‌ಗೆ ಮತ್ತೆ ಅಲ್ಲಿಂದ ಲಂಡನಿಗೆ ಸ್ಥಳಾಂತರಿಸಲಾಯಿತು. ಅಧಿವೇಶನದಲ್ಲಿ ಸಮಾಜವಾದಿ ಕ್ರಾಂತಿಯ ಕಾರ್ಯಕ್ರಮವನ್ನು ಒಪ್ಪುವ, ಪಾರ್ಟಿಗೆ ಚಂದಾ ಲೆವಿಯನ್ನು ಕೊಡುವ ಮತ್ತು ಪಾರ್ಟಿಯ ಒಂದು ಘಟಕದಲ್ಲಿದ್ದು ಪಕ್ಷದ ಶಿಸ್ತಿಗೆ ಒಳಪಡಲು ಸಿದ್ಧವಾಗಿರುವವರು ಮಾತ್ರ ಪಕ್ಷದ ಸದಸ್ಯರಾಗಬಹುದು ಎಂದು ಲೆನಿನ್ ಮಂಡಿಸಿದ ಸೂಚನೆಯನ್ನು ಬಹುಮತದಿಂದ ಅಂಗೀಕರಿಸಲಾಯಿತು. ಹೀಗಾಗಿ ಪಕ್ಷಕ್ಕೆ 'ಬೊಲ್ಶೆವಿಕ್ (ಬಹುಮತದ) ಪಕ್ಷ' ಎಂದು ಹೆಸರು ಬರುವಂತಾಯಿತು. ಲೆನಿನ್ ಸೂತ್ರವನ್ನು ಒಪ್ಪದವರು 'ಮೆನ್ಶೆವಿಕ್' (ಅಲ್ಪಮತದ) ಎಂದು ಕರೆಯಲ್ಪಟ್ಟರು. 1912 ರಲ್ಲಿ ಈ ಎರಡು ಗುಂಪುಗಳು ಪ್ರತ್ಯೇಕಗೊಂಡವು. 1917 ರ ರಶಿಯಾ ಕ್ರಾಂತಿಯ ನಂತರ ಬೊಲ್ಶೆವಿಕ್ ಪಕ್ಷ–ಕ್ಕೆ "ಕಮ್ಯೂನಿಸ್ಟ್ ಪಕ್ಷ" ಎಂಬ ಹೆಸರನ್ನು ಇಡಲಾಯಿತು.

ರಶಿಯಾದಲ್ಲಿ ಕ್ರಾಂತಿಕಾರಿ ಚಟುವಟಿಕೆಗಳು ಭರದಿಂದ ಸಾಗುತ್ತಿದ್ದವು. ಲೆನಿನ್ ಹೊರದೇಶದಲ್ಲಿ ಇದ್ದುಕೊಂಡೇ ಬೊಲ್ಶೆವಿಕ್ ಪಕ್ಷಕ್ಕೆ ಮಾರ್ಗದರ್ಶನ ನೀಡುತ್ತಿದ್ದರು. ರಶಿಯಾದಾದ್ಯಂತ ಅತೃಪ್ತಿ ತಾಂಡವಾಡುತಿತ್ತು. ರೈತರು ಅಲ್ಲಲ್ಲಿ ಸಾಮೂಹಿಕವಾಗಿ ಪಾಳೇಗಾರಿ ಒಡೆಯರ ವಿರುದ್ದ ದಂಗೆ ಏಳುತ್ತಿದ್ದರು. ಕಾರ್ಮಿಕರು ಬಂಡವಾಳಗಾರರ ವಿರುದ್ಧ ಮುಷ್ಕರಗಳನ್ನು ನಡೆಸುತ್ತಿದ್ದರು. ವಿದ್ಯಾರ್ಥಿಗಳು ಸಹ ಬೀದಿಗಿಳಿದು ಪ್ರತಿಭಟಿಸುತ್ತಿದ್ದರು. ಈ ಕ್ರಾಂತಿಕಾರಿ ಬೆಳವಣಿಗೆಗಳಿಗೆ ಕಾರ್ಮಿಕ ವರ್ಗ ನೇತೃತ್ವ ನೀಡಿ ಮುನ್ನಡೆಸಬೇಕೆಂದು ಲೆನಿನ್ ಕರೆನೀಡಿದರು. ಆದರೆ ಕಾರ್ಮಿಕ ವರ್ಗದ ಪಾತ್ರದ ಬಗ್ಗೆ ಬೊಲ್ಶೆವಿಕರ ಮತ್ತು ಮೆನ್ಶೆವಿಕರ ನಡುವೆ ತೀವ್ರ ಭಿನ್ನಾಭಿಪ್ರಾಯಗಳಿದ್ದವು. ಈ ಹಂತದಲ್ಲಿ (1904) ಲೆನಿನ್ "ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ಎರಡು ತಂತ್ರಗಳು" ಎಂಬ ತಮ್ಮ ಪ್ರಸಿದ್ಧ ಕೃತಿಯನ್ನು ಬರೆದರು.

ವಿಫಲವಾದ 1905ರ ಕ್ರಾಂತಿ :

1905ರ ಜನವರಿ 9ರಂದು ಕಾರ್ಖಾನೆಯೊಂದರ ಮುಷ್ಕರದ ಸಂದರ್ಭದಲ್ಲಿ ಪೀಟರ್ಸ್‌ಬರ್ಗ್‌ನ ಸಾವಿರಾರು ಕಾರ್ಮಿಕರು ಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ಅವರಲ್ಲಿ ಅನೇಕ ಮಂದಿ ಶಿಲುಬೆಗಳನ್ನು ಹೊತ್ತು 'ದೇವರು ಝಾರ್ ಚಕ್ರವರ್ತಿಯನ್ನು ರಕ್ಷಿಸಲಿ' ಎಂದು ಘೋಷಣೆಗಳನ್ನು ಕೂಗುತ್ತಾ ಸಾಗಿದ್ದರು. ಆದರೆ ಚಕ್ರವರ್ತಿಯನ್ನು ಭೇಟಿಯಾಗಲು ಅವಕಾಶ ನಿರಾಕರಿಸಿದ ಸೈನಿಕರು ನಿರಾಯುಧರಾಗಿದ್ದ ಕಾರ್ಮಿಕರ ಮೇಲೆ ಗುಂಡಿನ ಮಳೆಗರೆದರು. ನೂರಾರು ಜನ

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಅವಕಾಶ ಕಳೆದುಕೊಳ್ಳುತ್ತಿರುವ ಜೆಡಿಎಸ್

ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳಿಗೆ ಬೆಂಬಲ ನೀಡಬೇಕೆಂದು ವಿನಂತಿಸಿ ಅದರ ಜಿಲ್ಲಾ ಮಟ್ಟದ ನಾಯಕರು ಅಲ್ಲಲ್ಲಿ ಎಡಪಕ್ಷಗಳ ಮುಖಂಡರನ್ನು ಸಂಪರ್ಕಿಸುತ್ತಿರುವುದು ವರದಿಯಾಗುತ್ತಿದೆ. ಕಾಂಗ್ರೆಸನ್ನು ಮತ್ತು ಬಿಜೆಪಿಯನ್ನು ಸಮಾನ ದೂರದಲ್ಲಿ ಇಡುತ್ತಾ ಬಂದಿದ್ದ ಎಡಪಕ್ಷಗಳು ಜೆಡಿಎಸ್ ಪಕ್ಷವನ್ನು ನಿರಂತರವಾಗಿ ಬೆಂಬಲಿಸುತ್ತಾ ಬಂದಿದ್ದವು. ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಒಂದು ಎಡಪ್ರಜಾಸತ್ತಾತ್ಮಕ ಪರ್ಯಾಯವನ್ನು ಕಟ್ಟಬೇಕು ಎನ್ನುವ ಉದ್ದೇಶದಿಂದ ಎಡಪಕ್ಷಗಳು ಜೆಡಿಎಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿವೆ. ಜೆಡಿಎಸ್‌ಗೆ ಬೆಂಬಲ ನೀಡುವುದರಿಂದ ಎಡಪಕ್ಷಗಳಿಗೆ ಪ್ರಯೋಜನವೇನೂ ಆಗುತ್ತಿರಲಿಲ್ಲ. ಎಡಪಕ್ಷಗಳ ಕಾರ್ಯಕರ್ತರು ಜೆಡಿಎಸ್ ಅಭ್ಯರ್ಥಿಗಳ ಗೆಲುವಿಗಾಗಿ ಪ್ರಾಮಾಣಿಕವಾಗಿ ದುಡಿಯುತ್ತಿದ್ದರು. ತಮ್ಮ ಬೆಂಬಲಿಗರ ಓಟುಗಳನ್ನು ಜೆಡಿಎಸ್‌ಗೆ ತಪ್ಪದೆ ಹಾಕಿಸುತ್ತಿದ್ದರು. ಆದರೆ ಜೆಡಿಎಸ್ ಕಾರ್ಯಕರ್ತರು ಮಾತ್ರ ಎಡಪಕ್ಷಗಳ ಅಭ್ಯರ್ಥಿಗಳ ಗೆಲುವಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರಲಿಲ್ಲ. ಆದಾಗ್ಯೂ ಎಡಪಕ್ಷಗಳು ಇಲ್ಲಿಯವರೆಗೆ ಜೆಡಿಎಸ್‌ಗೆ ಬೆಂಬಲ ನೀಡುತ್ತಾ ಬಂದಿದ್ದವು.

ಜೆಡಿಎಸ್‌ನ ಸ್ಥಳೀಯ ಮುಖಂಡರು, ಕಾರ್ಯಕರ್ತರು ಎಂದಿನಂತೆ ಈ ಸಲವು ತಮಗೆ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಬೆಂಬಲ ಸಿಕ್ಕೇ ಸಿಗುತ್ತದೆ ಎಂದು ನಂಬಿದ್ದರು. ಆದರೆ ಈ ಸಲ ಜೆಡಿಎಸ್ ಮತ್ತು ಎಡಪಕ್ಷಗಳ ನಡುವೆ ಒಪ್ಪಂದ ಆಗಲಿಲ್ಲ. ಜೆಡಿಎಸ್ ರಾಜ್ಯ ಮುಖಂಡರಿಗೆ ಈ ಸಲ ಎಡಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಆಸಕ್ತಿ ಇರಲಿಲ್ಲ. ಎಡ ಪಕ್ಷಗಳಿಗೂ ಜೆಡಿಎಸ್ ಬಗ್ಗೆ ಹಿಂದೆ ಇದ್ದ ವಿಶ್ವಾಸ ಈಗ ಉಳಿದಿರಲಿಲ್ಲ. ರಾಜ್ಯದಲ್ಲಿ ಜೆಡಿಎಸ್ ಬಿಜೆಪಿಯೊಡನೆ ಅಧಿಕಾರ ಹಂಚಿಕೊಂಡ ದಿನದಿಂದಲೇ ಎಡಪಕ್ಷಗಳಿಗೆ ಜೆಡಿಎಸ್ ಬಗ್ಗೆ ಯಾವುದೇ ನೀರೀಕ್ಷೆ ಇಟ್ಟುಕೊಳ್ಳಲು ಸಾಧ್ಯವಾಗಲಿಲ್ಲ.

ರಾಜ್ಯದಲ್ಲಿ ಬಿಜೆಪಿಗೆ ಮತ್ತು ಕಾಂಗ್ರೆಸಿಗೆ ಪರ್ಯಾಯವಾಗಿ ಬೆಳೆಯುವ ಅವಕಾಶ ಇದ್ದದ್ದು ಜೆಡಿಎಸ್‌ಗೆ. ಆದರೆ ಆ ಅವಕಾಶವನ್ನು ಅದು ಕಳೆದುಕೊಳ್ಳುತ್ತಿದೆ. ಜನಪರವಾದ ಪರ್ಯಾಯ ಧೋರಣೆಗಳನ್ನು ಮೈಗೂಡಿಸಿಕೊಳ್ಳುವ ಆಸಕ್ತಿ ಅದಕ್ಕಿಲ್ಲ. ರೈತರು ಮತ್ತು ಇತರ ಜನ ವಿಭಾಗಗಳು ಅನುಭವಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಎತ್ತಿಕೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಹೋರಾಟ ಮಾಡಲು ಅದು ಮುಂದಾಗುತ್ತಿಲ್ಲ. ಉದಾಹರಣೆಗೆ ಕೇಂದ್ರ ಕಾಂಗ್ರೆಸ್ ಸರ್ಕಾರದ ಧೋರಣೆಯಿಂದಾಗಿ ರಸಗೊಬ್ಬರದ ಬೆಲೆಗಳು ಗಗನಕ್ಕೇರಿದಾಗ, ರಾಜ್ಯ ಸರ್ಕಾರವೂ ರೈತರ ನೆರವಿಗೆ ಬಾರದಿದ್ದಾಗ ರೈತರ ಸಮರಶೀಲ ಚಳುವಳಿಯನ್ನು ಸಂಘಟಿಸಲು ಸಾಧ್ಯವಾಗಿದ್ದರೆ ಜೆಡಿಎಸ್ ನಿಜವಾಗಿಯೂ ರೈತರ ಗಮನ ಸೆಳೆಯುತಿತ್ತು. ಇಂತಹ ನೂರಾರು ಅವಕಾಶಗಳು ಒದಗಿ ಬಂದಿದ್ದರೂ ಜೆಡಿಎಸ್ ಅವುಗಳನ್ನು ಬಳಸಿಕೊಳ್ಳಲಿಲ್ಲ. ಹೀಗಾಗಿ ಅದು ತನ್ನ ಜಾತಿ ಆಧಾರಿತ ನೆಲೆಯಿಂದ ವಿಸ್ತಾರಗೊಳ್ಳುತ್ತಿಲ್ಲ.

ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡ ತಪ್ಪಿಗೆ ಜೆಡಿಎಸ್ ಇದುವರೆಗೂ ಪಶ್ಚಾತ್ತಾಪ ವ್ಯಕ್ತಪಡಿಸಲಿಲ್ಲ. ಇನ್ನೊಮ್ಮೆ ಅಂತಹ ತಪ್ಪು ಅದು ಮಾಡುವುದಿಲ್ಲ ಎಂಬ ವಿಶ್ವಾಸ ಮತದಾರರಲ್ಲಿ ಇಲ್ಲ. ಕೇವಲ ತಂತ್ರಗಾರಿಕೆಯಿಂದ ಅಧಿಕಾರಕ್ಕೆ ಬರುವ ಲೆಕ್ಕಾಚಾರದಲ್ಲಿಯೇ ಇರುವ ಜೆಡಿಎಸ್ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲಾರದು. ಬೇರೆ ಪಕ್ಷದ ಶಾಸಕರನ್ನು ಸೆಳೆದು ತನ್ನ ಬಲವನ್ನು ಹೆಚ್ಚಿಸಿಕೊಳ್ಳುವ ಕ್ರಮ ದೀರ್ಘಕಾಲಿನ ಲಾಭ ದೊರಕಿಸದು.

ಕರ್ನಾಟಕದ ಜನತೆ ಕಾಂಗ್ರೆಸ್ ಮತ್ತು ಬಿಜೆಪಿಗೆ ಒಂದು ವಿಶ್ವಾಸಾರ್ಹ ಪರ್ಯಾಯವನ್ನು ಹುಡುಕುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿಯ ಆರ್ಥಿಕ ಧೋರಣೆಗಳಲ್ಲಿ ವ್ಯತ್ಯಾಸ ಇಲ್ಲದಿರುವುದರಿಂದ ಜನ ಪರ್ಯಾಯ ಧೋರಣೆಗಳಿಗೆ ಬದ್ಧವಾಗಿರುವ ಪರ್ಯಾಯ ರಾಜಕೀಯ ಶಕ್ತಿಯನ್ನು ನಿರೀಕ್ಷಿಸುತ್ತಿದ್ದಾರೆ. ಎಡಪಕ್ಷಗಳು ಮಾತ್ರ ನವ ಉದಾರೀಕರಣದ ಧೋರಣೆಗಳನ್ನು ದೃಢವಾಗಿ ವಿರೋಧಿಸುತ್ತಾ ಪರ್ಯಾಯ ಧೋರಣೆಗಳಿಗಾಗಿ ಹೋರಾಟ ಮಾಡುತ್ತಾ ಬಂದಿವೆ. ರಾಜ್ಯದ ಜನತೆ ಜೆಡಿಎಸ್ ಪಕ್ಷವನ್ನು ಬಿಜೆಪಿಗೂ ಕಾಂಗ್ರೆಸಿಗೂ ಒಂದು ವಿಶ್ವಾಸಾರ್ಹ ಪರ್ಯಾಯವಾಗಿ ಕಾಣುವಂತಾಗಬೇಕಾದರೆ ಜೆಡಿಎಸ್ ತನ್ನ ಸಮಯ ಸಾಧಕತನವನ್ನು ಬಿಟ್ಟು ಎಡಪಕ್ಷಗಳ ಜೊತೆಯಲ್ಲಿ ದೃಢವಾಗಿ ನಿಲ್ಲಲು ಸಾಧ್ಯವಾಗಬೇಕು. ನವ ಉದಾರೀಕರಣದ ಧೋರಣೆಗಳ ವಿರುದ್ಧ, ಭ್ರಷ್ಟಾಚಾರದ ವಿರುದ್ಧ, ಕೋಮುವಾದದ ವಿರುದ್ಧ ರಾಜಿ ಇಲ್ಲದ ಹೋರಾಟ ಮಾಡುವ ಬದ್ಧತೆಯನ್ನು ಅದು ವ್ಯಕ್ತಪಡಿಸಬೇಕು.

ಕಾಂಗ್ರೆಸಿಗೂ, ಬಿಜೆಪಿಗೂ ಒಂದು ಪರ್ಯಾಯ ಶಕ್ತಿಯಾಗಿ ಬೆಳೆಯುವ ಸಾಧ್ಯತೆ ಜೆಡಿಎಸ್ ಪಕ್ಷಕ್ಕೆ ಇದೆ ಎಂಬುದನ್ನು ಅರಿತಿರಿರುವ ಕಾಂಗ್ರೆಸ್, ಜೆಡಿಎಸ್ ಪಕ್ಷವನ್ನು ನಾಶಮಾಡುವ ಗುರಿಯಿಟ್ಟುಕೊಂಡಿದೆ. ಕಾಂಗ್ರೆಸ್ ಕುತಂತ್ರವನ್ನು ಎದುರಿಸಿ ಹಿಮ್ಮೆಟ್ಟಿಸಲು ಜೆಡಿಎಸ್ ಪಕ್ಷವು ಸೈದ್ಧಾಂತಿಕವಾಗಿ ಬಲಿಷ್ಠವಾಗಬೇಕು. ಎಡ ಮತ್ತು ಪ್ರಗತಿಪರ ಪಕ್ಷಗಳ ಜತೆಯಲ್ಲಿ ಸೇರಿ-ಕೊಂಡು ನಿರಂತರವಾಗಿ ಜನರ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಟಗಳನ್ನು ಮಾಡಬೇಕು. ಅಧಿಕಾರಕ್ಕಾಗಿ ಕೋಮುವಾದಿ ಬಿಜೆಪಿಯಂತಹ ಪಕ್ಷಗಳೊಂದಿಗೆ ಯಾವ ಕಾರಣಕ್ಕೂ ಕೈಜೋಡಿಸಬಾರದು. ಹಿಂದೆ ಮಾಡಿದ ತಪ್ಪಿಗೆ ಸರಿಯಾಗಿ ಪಶ್ಚಾತ್ತಾಪ ವ್ಯಕ್ತಪಡಿಸಬೇಕು. ಜೆಡಿಎಸ್‌ನಿಂದ ಇದೆಲ್ಲವನ್ನು ನಿರೀಕ್ಷಿಸುವುದು ಸಾಧ್ಯವೆ? ●

ಸಿಪಿಐ(ಎಂ) ಪಕ್ಷದ ಸದಸ್ಯರ ಚುನಾವಣಾ ಪ್ರಚಾರ ಸಭೆಗಳು

ಕಾಂ. ಪ್ರಕಾಶ್ ಕಾರಾಟ್	: ಏಪ್ರಿಲ್ 30	– ಗುಲ್ಬರ್ಗಾ
	ಮೇ 1	– ಬೆಂಗಳೂರು – ಕೆ.ಆರ್.ಪುರಂ
ಕಾಂ. ಸೀತಾರಾಂ ಯೆಚೂರಿ	: ಏಪ್ರಿಲ್ 26	– ಕೆ.ಜಿ.ಎಫ್ (ಮುಗಿದಿದೆ)
	ಏಪ್ರಿಲ್ 29	– ಬಾಗೇಪಲ್ಲಿ – ಗೌರಿಬಿದನೂರು
ಕಾಂ. ಬೃಂದಾ ಕಾರಾಟ್	: ಏಪ್ರಿಲ್ 28	– ಆನೇಕಲ್
	ಏಪ್ರಿಲ್ 29	– ಮಳವಳ್ಳಿ
	ಮೇ 1	– ಮಂಗಳೂರು
	ಮೇ 2	– ಬೆಂಗಳೂರು. ಕೆ.ಆರ್. ಪುರ
ಕಾಂ. ಎಂ.ಎ. ಬೇಬಿ	: ಏಪ್ರಿಲ್ 15	– ಬೆಳ್ತಂಗಡಿ (ಮುಗಿದಿದೆ)
	ಏಪ್ರಿಲ್ 21	– ಗುಲ್ಬರ್ಗಾ (ಮುಗಿದಿದೆ)
	ಏಪ್ರಿಲ್ 22	– ಬಾಗೇಪಲ್ಲಿ (ಮುಗಿದಿದೆ)
	ಏಪ್ರಿಲ್ 26	– ತೊಕ್ಕೋಟ್ಟು (ಮಂಗಳೂರು)
ಕಾಂ. ಬಸುದೇವ ಆಚಾರ್ಯ	: ಏಪ್ರಿಲ್ 20	– ಕೆ.ಜಿ.ಎಫ್. (ಮುಗಿದಿದೆ)

ಏನು ಫಲ

ಕವಿತೆ

ಸತ್ಯ ನ್ಯಾಯ ನೀತಿ ಇಲ್ಲದವ ಓಟಲಿ ಗೆದ್ದರೆ ಏನು ಫಲ
ಜನಮರುಳಲಿ ಅವನ ಹಿಂದೆ ಬಿದ್ದರೂ **ಜನರಿಗೆ ಅವನಿಂದೇನು ಫಲ !!**
ಶ್ರಮ ಸಂಸ್ಕೃತಿ ಶ್ರಮ ದೇವರುಗಳ ಮರೆತವರಿಂದೇನು ಫಲ
ಅಕ್ರಮ ಎಸಗಿ ತಿರುಪತಿಗ್ಹೋಗಿ ಕೋಟಿ ಸುರಿಯೋರಿಂದೇನು ಫಲ
ಹಸ್ತ – ಕಮಲ ಗೆದ್ದರೇನು ಫಲ? ಹಾವಿಗೆ ಹಾಲೆರೆದೇನು ಫಲ? !!

ಕಪ್ಪು ಹಣವನು ಎಲ್ಲೆಡೆ ಚೆಲ್ಲಿ ಓಟಲಿ ಗೆದ್ದರೆ ಏನು ಫಲ
ಸುಲಿಗೆಕೋರರ ಸೆರಗಿನಡಿಯಲಿ **ಕೂತವರಿಂದ ಏನು ಫಲ !!**
ಜನರ ಕಷ್ಟಕೆ ಒದಗದಿದ್ದವ ಪ್ರತಿನಿಧಿ ಆದರೆ ಏನು ಫಲ
ದುಡಿವ ಜನರಿಗೆ ಕಣ್ಣೀರಿಳಿಸಿ ಮೆರೆವವರಿಂದೇನು ಫಲ
ಹಸ್ತ – ಕಮಲ ಗೆದ್ದರೇನು ಫಲ? ಹಾವಿಗೆ ಹಾಲೆರೆದೇನು ಫಲ? !!

ರೈತ ಕಾರ್ಮಿಕರ ಮೌಲ್ಯ ಅರಿಯದವ ಓಟಲಿ ಗೆದ್ದರೆ ಏನು ಫಲ
ಸುಳ್ಳನು ನಂಬಿದ ರೈತ ಕಾರ್ಮಿಕರು **ನ್ಯಾಯ ಕೇಳಿದರೇನು ಫಲ !!**
ಕಾರ್ಮಿಕರನ್ನ ಗುಲಾಮಗಿರಿಗೆ ತಳ್ಳುವ ದೊರೆಗಳಿಂದೇನು ಫಲ
ರೈತರ ಬೆನ್ನಿನ ಮೂಳೆ ಮುರಿಯುವ ಸರ್ಕಾರವಿದ್ದರೆ ಏನು ಫಲ
ಹಸ್ತ – ಕಮಲ ಗೆದ್ದರೇನು ಫಲ? ಹಾವಿಗೆ ಹಾಲೆರೆದೇನು ಫಲ? !!

ಸಂವಿಧಾನಕೆ ಬದ್ದತೆ ಇಲ್ಲದೆ ಓಟಲಿ ಗೆದ್ದರೆ ಏನು ಫಲ
ಭೂಮಿ ವಸತಿ ಕರೆಂಟು ನೀಡದ **ಸರ್ಕಾರವಿದ್ದರೆ ಏನು ಫಲ !!**
ಜನರ ನೋವಿನ ಅರಿವಿಲ್ಲದವ ಜನನಾಯಕನಾದರೆ ಏನು ಫಲ
ಬಡವರಿಗಿನ್ನೂ ಬದುಕು ನೀಡದ ಸ್ವಾತಂತ್ರ್ಯ ಸಿಕ್ಕಿಯು ಏನು ಫಲ
ಹಸ್ತ – ಕಮಲ ಗೆದ್ದರೇನು ಫಲ? ಹಾವಿಗೆ ಹಾಲೆರೆದೇನು ಫಲ? !!

ನಂಬಿಸಿ ಕೊಯ್ದ ಪಕ್ಷಗಳಿನ್ನೂ ಓಟಲಿ ಗೆದ್ದರೆ ಏನು ಫಲ
ವಿಷವನೆ ಕುಡಿದರೆ ಸಾವೆ ನಿಶ್ಚಿತ **ಆಮೇಲೆ ಅತ್ತರೆ ಏನು ಫಲ !!**
ಸಿರಿವಂತರಿಗಾಗಿಯೆ ಇರುವ ಕಾಂಗ್ರೇಸ್ ಬಿಜೆಪಿಯಿಂದೇನು ಫಲ
ಅವರಿವರೆನ್ನುವ ಸುಳ್ಳನು ನಂಬಿ ಹಾವಿಗೆ ಹಾಲೆರೆದೇನು ಫಲ
ಹಸ್ತ – ಕಮಲ ಗೆದ್ದರೇನು ಫಲ? ಹಾವಿಗೆ ಹಾಲೆರೆದೇನು ಫಲ? !!

ಜನರ ಹಕ್ಕುಗಳು ಹಕ್ಕದಿದ್ದರೆ ಹಕ್ಕುಗಳಿದ್ದರು ಏನು ಫಲ
ಜನರಿಗೆ ನ್ಯಾಯ ಸಿಕ್ಕದಿದ್ದರೆ **ಕಾನೂನಿದ್ದರು ಏನು ಫಲ !!**
ಪುರಂದರ ದಾಸರ ಕೀರ್ತನೆ ಸಾರವ ಅರಿಯದಿದ್ದರೆ ಏನು ಫಲ
ಇನ್ನಾದರು ಕೆಂಬಾವುಟ ಹಿಡಿಯದೆ ಬದುಕಿದ್ದಾದರು ಏನು ಫಲ
ಹಸ್ತ – ಕಮಲ ಗೆದ್ದರೇನು ಫಲ? ಹಾವಿಗೆ ಹಾಲೆರೆದೇನು ಫಲ? !!

ಮೋಸ ವಂಚನೆ ಅನ್ಯಾಯದೆದುರು ಗೆಲ್ಲಬೇಕಿದೆ ನಮ್ಮ ಛಲ
ದುಡಿಯುವ ಜನರೇ ಎಚ್ಚರಗೊಳ್ಳಿ **ಪಡೆಯಬೇಕಿದೆ ನಮ್ಮ ನೆಲ !!**
ಹಣ ಸಂಪತ್ತು ನಮ್ಮಲ್ಲಿಲ್ಲ ಒಗ್ಗಟ್ಟೊಂದೇ ನಮ್ಮ ಬಲ

ಮೋಸ ಮಾಡೋರು ನಾವಲ್ಲ...

ಪುಟ 16 ರಿಂದ

ನಡೆಸುವವರಿಗೆ ರಕ್ಷಕನಾಗಿದ್ದಾರೆ. ಕಾಂಗ್ರೆಸ್-ಬಿಜೆಪಿ ಸೇರಿದಂತೆ ಬಲಾಢ್ಯರು ಪರಸ್ಪರ ಸಹಕರಿಸಿಕೊಂಡು ತಮ್ಮ ಲಾಭಕೋರ ದಂಧೆಯ ವಹಿವಾಟಿಗೆ ತೊಂದರೆ ಇಲ್ಲದಂತೆ ನಡೆದುಕೊಳ್ಳುತ್ತಿದ್ದಾರೆ. ಹೀಗೆ ಆನೇಕಲ್‌ನ್ನು "ಭವಿಷ್ಯದ ಬೆಂಗಳೂರು-ಅನೇಕಲ್" ಎಂದು ಬಿಕರಿಗೆ ಇಟ್ಟಿದ್ದಾರೆ. ಹೀಗಿದ್ದರೂ ಮತ್ತೊಮ್ಮೆ ಚುನಾವಣೆಯಲ್ಲಿ ಬಿಜೆಪಿ-ಕಾಂಗ್ರೆಸ್, ಜೆಡಿ(ಎಸ್), ಕೆಜೆಪಿ, ಬಿಎಸ್‌ಆರ್ ಕಾಂಗ್ರೆಸ್ ಪಕ್ಷಗಳು ನಾವು ಸಭ್ಯಸ್ತರೆಂದು ಜನತೆಯ ಎದುರು ಕೈಚಾಚಿ ನಿಲ್ಲುತ್ತಿದ್ದಾರೆ. ಚುನಾವಣಾ ನೀತಿ ಸಂಹಿತೆ-ಉಲ್ಲಂಘನೆ ವಿರುದ್ಧ ಕಠಿಣ ಕ್ರಮ ಎಂದು ಹೇಳುವ ಚುನಾವಣಾ ಆಧಿಕಾರಿಗಳ ಕಣ್ಣೆದುರೇ ರಾತ್ರಿ ಹಗಲೆನ್ನದೆ ಮತ ಭೇಟೆಗೆ ಹಣ ಸುರಿಯುತ್ತಿರುವ ಎ. ನಾರಾಯಣ ಸ್ವಾಮಿ ಹಿಂದಗಡೆ ಕನಿಷ್ಟ 30 ರಿಂದ 40 ಕಾರುಗಳು ತಿರುಗುತ್ತಿವೆ. ಇದೇ ಸ್ಥಿತಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಕೆಜೆಪಿಗಳದ್ದಾಗಿದೆ. ಇವರ್‍ಯಾರ್‍ಯಾರು ಚುನಾವಣಾ ಅಧಿಕಾರಿಗಳ ಹತ್ತಿರ ತಮ್ಮ ಕಾರುಗಳಿಗೆ ಅನುಮತಿ ಪಡೆದಿಲ್ಲ. ಅಧಿಕಾರಿಗಳು ಇದನ್ನು ಕಂಡೂ ಕಾಣದಂತೆ ಇರುವುದು ಶಾಮೀಲಾದಂತಲ್ಲವೇ? ಬಾರ್‌ನಲ್ಲಿ ಹಣ ಹಂಚುವ ಸಂದರ್ಭದಲ್ಲಿ ಸಿಕ್ಕಿಕೊಂಡರೂ ಪ್ರಚಾರವಾಗದಂತೆ ನೋಡಿಕೊಳ್ಳಲಾಗುತ್ತಿದೆ. ಯುವಕರನ್ನು ಒಂದು ರೀತಿಯಲ್ಲಿ ಕಟ್ಟಿಹಾಕಲಾಗಿದೆ. ದಿನಕ್ಕೆ 500-1000ದ ಜೊತೆಗೆ ಊಟ ಕೊಟ್ಟು' ನಿರಾಯುಧರನ್ನಾಗಿಸಲಾಗಿದೆ. ಇದು ಈ ಆಳುವ ವರ್ಗಗಳ ಪಕ್ಷಗಳ 'ಸಾಧನೆ'ಯಾಗಿದೆ.

ಜನ ಜಾಗೃತಿಯತ್ತ ಸಿಪಿಐ(ಎಂ):

ಇಂತಹ ಜನವಿರೋಧಿ ನೀತಿಗಳ ವಿರುದ್ಧ ಜನ ಸಾಮಾನ್ಯರ, ರೈತ ಕಾರ್ಮಿಕರ ಸಮಸ್ಯೆಗಳ ವಿರುದ್ಧ ಜನ ಚಳುವಳಿಯನ್ನು ಕಳೆದ ಹತ್ತಾರು ವರ್ಷಗಳಿಂದ ಸಿಪಿಐ(ಎಂ) ರೂಪಿಸಿಕೊಂಡು ಬರುತ್ತಿದೆ. ಆನೇಕಲ್ ಕ್ಷೇತ್ರದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಪೂರಕವಾಗಿ ನಾಗರೀಕ ಸೌಲಭ್ಯಗಳಾದ ಮನೆ, ನಿವೇಶನ, ರೇಷನ್ ಕಾರ್ಡ್, ಕುಡಿಯುವ ನೀರು, ಶಿಕ್ಷಣ, ಉದ್ಯೋಗ, ಅರೋಗ್ಯ-ಕ್ಕೆ ಸಂಬಂಧಿಸಿದ ಸಮಸ್ಯೆಗಳು ಸೇರಿದಂತೆ ಮೂಲಭೂತ ಸಮಸ್ಯೆಗಳ ವಿಷಯವನ್ನು ಜನ ಪ್ರತಿನಿಧಿಗಳು ಕೈಗೆತ್ತಿಕೊಳ್ಳಲಿಲ್ಲ. ಬದಲಿಗೆ ಇನ್ನಷ್ಟು ದಿವಾಳಿಯನ್ನಾಗಿಸಿದ್ದಾರೆ. ಇಂತಹ ಸಮಸ್ಯೆಗಳ ವಿರುದ್ಧ ಜನ ಜಾಗೃತಿಯನ್ನು ಉಂಟುಮಾಡಲು ಸಿ.ಪಿ.ಐ(ಎಂ) ತಾಲ್ಲೂಕಿನಾದ್ಯಂತ ಹಳ್ಳಿ ಹಳ್ಳಿಗೆ ಜಾಥಾ ಹಮ್ಮಿಕೊಂಡಿತ್ತು. ರೇಷನ್ ಕಾರ್ಡ್ ರೇಷನ್ ಅವ್ಯವಸ್ಥೆ ತುಂಬಾ ಇದೆ. ನಿವೇಶನಕ್ಕಾಗಿ ಸಾವಿರಾರು ಅರ್ಜಿಗಳನ್ನು ಹಾಕಿಸಿದ್ದರೂ, ಬಡವರ ಅನಧೀಕೃತ ಮನೆಗಳಿಗೆ ಹಕ್ಕು ಪತ್ರವಿಲ್ಲ. ಎಷ್ಟೋ ಜನರಿಗೆ ಸೈಟು ಇಲ್ಲ. ಮನೆಯೂ ಇಲ್ಲ. ಅನೇಕಲ್ ತಾಲ್ಲೂಕಿನಾದ್ಯಂತ 7200 ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳನ್ನು ಪರಿಶೀಲಿಸಿ ಇತ್ಯರ್ಥಗೊಳಿಸಬೇಕು. ಕಾರ್ಮಿಕರಿಗೆ ಕನಿಷ್ಠ 10,000 ವೇತನ ನಿಗದಿಯಾಗಬೇಕು. ತಾಲ್ಲೂಕಿನಾದ್ಯಂತ ಅಂತರ ಜಲ ಕುಸಿದಿದೆ. ಶಾಶ್ವತ ಕುಡಿಯುವ ನೀರಿಗಾಗಿ ಡಾ.ಪರಮಶಿವಯ್ಯನವರ ವರದಿಯನ್ನು ಅನುಷ್ಠಾನಗೊಳಿಸಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡ ಅಭಿವೃದ್ಧಿಗೆ ವಿಶೇಷ ಘಟಕ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಬೇಕು. ಬಿಜೆಪಿ-ಕಾಂಗ್ರೆಸ್ ಭ್ರಷ್ಟಾಚಾರವನ್ನು ಬಯಲಿಗೆಳೆದು ಕಾನೂನಾತ್ಮಕ ಕ್ರಮ ಕೈಗೊಳ್ಳಬೇಕು. ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ಜನತೆ ಜಾಗೃತಗೊಳ್ಳಬೇಕೆಂದು ಪ್ರಚಾರಾಂದೋಲನ ಜಾಥಾ ಮತ್ತು ಸಹಿ ಸಂಗ್ರಹ ಚಳವಳಿಯನ್ನು ನಡೆಸುತ್ತಾ ರೈತರ-ಕಾರ್ಮಿಕರ, ದಲಿತರ ಮಹಿಳೆಯರ ಮತ್ತು ಯುವಜನ-ವಿದ್ಯಾರ್ಥಿಗಳ ಪರವಾಗಿ ನಿರಂತರವಾಗಿ ಸಿಪಿಐ(ಎಂ) ಹೋರಾಡುತ್ತಿದೆ. ಇದು ಸಿಪಿಐ(ಎಂ) ಧ್ಯೇಯವಾಗಿದೆ.

ಮೋಸ ಮಾಡೊರು ನಾವಲ್ಲ- ಸುಳ್ಳು ಹೇಳೋರು ನಾವಲ್ಲ:


ಅದು ಸರ್ಜಾಪುರ ಹೋಬಳಿಯ ಕಾಡ ಅಗ್ರಹಾರಹಳ್ಳಿ. ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಡಿ. ಮಾದೇಶ್ ಅವರೊಂದಿಗೆ ಮನೆ ಮನೆ ಮತ ಯಾಚನೆಗೆ ಹೋಗಿದ್ದೆವು. ಅಲ್ಲೊಂದು ವಯೋವೃದ್ಧ ಅಜ್ಜಿಯನ್ನು ಮಾತಾಡಿಸಿ, ಅಮ್ಮಾ ಹೇಗಿದ್ದೀರಿ? ನಮಗೆ ಓಟು ಕೊಡಿ. ನಮ್ದು ರೈತ-ಕಾರ್ಮಿಕರ ಪಕ್ಷ. ಬಡವರ ಪರವಾಗಿ ಹೋರಾಡ್ತುತ್ತೀವಿ. ನಾವು ನೋಟು ಕೊಡಲ್ಲ. ಮೋಸ ಮಾಡೋರು ನಾವಲ್ಲ. ಅಮ್ಮಾ ನಿಮಗೆ ವೃದ್ಧಾಪ್ಯ ವೇತನ ಬರೋದಿಲ್ವಾ?

'ಆ ಏನಪ್ಪ? ಅಂಗದ್ರೆ ಏನು?, ನನಗೆ ವಾಸಕ್ಕೆ ಮನೆ ಇಲ್ಲ, ಈ ಗುಡಿಸಿಲಲ್ಲೇ ಇದ್ದೀನಿ. ನಮ್ಗೆ ಹಕ್ಕು ಪತ್ರ ಇಲ್ಲ. ಈ ಊರ್‍ನ ದೊಡ್ಡೊರು ಜೊತೆ ನಮ್ಮೊನೆ ನಾರಾಯಣಸ್ವಾಮಿ ಬರುತ್ತಾನೆ. ಕೈ ಮುಗಿತಾನೆ. ನಮ್ಮುಡಗರು ಇವರಿಗೆ ವೋಟು ಹಾಕು ಅಂತ ಹೇಳುತ್ತಾರೆ. ನಾವು ಹಾಕ್ತೀವಿ ಅಷ್ಟೇ'.

'ಅದರಿಂದಲೇ ಅಜ್ಜಿ ನಿಮಗೆ ಇನ್ನೂ ವೃದ್ಧಾಪ್ಯ ವೇತನ ಸಿಕ್ಕಿಲ್ಲ, ಅವರೆಲ್ಲಾ ಮೋಸ ಮಾಡುತ್ತಾರೆ', 'ಹೌದು, ಸ್ವಾಮಿ 500 ಕೋಟಿ ಮಾಡಿಕೊಂಡಾವ್ನಂತೆ; ಅವರಪ್ಪ ನಮಂಗಾ ಕೂಲಿ ಮಾಡಿಕೊಂಡಿದ್ದ, ನೀವು ಗೆದ್ದರೆ ಏನು ಮಾಡುತ್ತೀರಿ?' 'ನೀವು ಅಂಗೆ ತಾನೆ?'. ಅಲ್ಲೆ ಅದೇ ಊರಿನ ವಿದ್ಯಾವಂತ ಯುವಕನೊಬ್ಬ 'ಇಲ್ಲ ಅಜ್ಜಿ ಇವರು ಅಂಗಲ್ಲ, ಬಡವರ ಕಾರ್ಮಿಕರ ಪರ ಹೋರಾಡ್ತಾರೆ', ಭ್ರಷ್ಟಾಚಾರದ ವಿರುದ್ಧ ಹೋರಾಡ್ತಾರೆಂದ'. ಅದನ್ನ ಕೇಳಿದ ಆ ಅಜ್ಜಿ 'ಹೌದೇ ಒಳ್ಳೇದು ಮಾಡ್ರಪ್ಪ' ನಾವು ನಿಮ್ಮ ಜೊತೆಗೆ ಇರುತ್ತೀವೆಂದು ಬಾಗಿ ಹೋಗಿರುವ ನಡುವಿನಲ್ಲೇ ಎದ್ದು ನಿಂತು ಕೈಮುಗಿದು ಕಳಿಸಿದರು. ಹಾಗೆಯೇ ಮನೆ ಮನೆಗೆ ಓಟು ಕೇಳಲು ಹೋದರೆ 'ಸ್ವಾಮಿ ನಮಗೆ ಏನು ಕೊಡಲ್ವೆ?, ಎಲೆ ಅಡಿಕೆಗೆ ಕೊಡಿ ಸ್ವಾಮಿ' ಎಂದು ಸಾಲು ಸಾಲಾಗಿ ಹಣ ಕೇಳಲು ಮುಗಿ ಬಿದ್ದು ಬರುತ್ತಾರೆ ನಮ್ಮ ಗ್ರಾಮೀಣ ಬಡ ಮಹಿಳೆಯರು.

ಸಿ.ಪಿ.ಐ. (ಎಂ) ಅಭ್ಯರ್ಥಿಗಳ ಪಟ್ಟಿ


(11 ಅಭ್ಯರ್ಥಿಗಳ ಭಾವಚಿತ್ರವನ್ನು ಸಂಚಿಕೆ 17 ರಲ್ಲಿ ಪ್ರಕಟಿಸಲಾಗಿದೆ)



ಸಿ. ಗೋಪಿನಾಥ್: ಚಿಂತಾಮಣಿ



ಶಿವಶಂಕರ್ : ಕಂಪ್ಲಿ



ಎ. ಹುಲುಗಪ್ಪ : ಕನಕಗಿರಿ



ಕೆ. ಬಸವರಾಜು : ಮಳವಳ್ಳಿ



ಆರ್. ಚಂದ್ರತೇಜಸ್ವಿ : ಬೆಂಗಳೂರು ಗ್ರಾಮಾಂತರ

'ನೀವೆಲ್ಲಾ ಹಂಗೆ ಹಣ ಕೇಳಬಾರದು. ನಿಮ್ಮ ಮತವನ್ನು ಮಾರಿ ಕೊಳ್ಳಬೇಡಿಯಮ್ಮ' 'ಅಲ್ಲಣ್ಣ ನಮಗೆ ಬೇರೆ ಏನು ಸಿಗುತ್ತದ್ದೇಳಿ? ಇವಾಗ ಬಿಟ್ಟರೆ ಮಾತ್ಯಾವಾಗ ನಾವು ನಿಮ್ಮ ಹಣ ಕೇಳ್ಳೋದು? ನೀವು ದೊಡ್ಡೋರ್ಗೆ ಮಾತ್ರ ಹಣ ಕೊಡುತ್ತೀರಿ' ಎಂಬ ಆತಂಕದ ಅಂಬೋಣ ಅವರದ್ದು. ನಿಮ್ಮ ವೋಟು ನಿಮ್ಮ ಬದುಕಿಗೆ ಸಂಬಂಧಿಸಿದ್ದು. ಮೋಸ ಹೋಗಬೇಡಿ. ನಿಮಗೆ ಮನೆ, ಕುಡಿಯಲಿಕ್ಕೆ ನೀರು. ರೇಷನ್ ಎಲ್ಲವನ್ನು ಸರ್ಕಾರ ನಿಮಗೆ ತಲುಪಿಸಬೇಕು. ಮಕ್ಕಳಿಗೆ ಸ್ಕೂಲು, ಪ್ರಯಾಣಕ್ಕೆ ಬಸ್ಸು. ಓಡಾಡಕ್ಕೆ ರಸ್ತೆ ಹೀಗೆ ಜನರ ಕಷ್ಟಗಳ ನಿವಾರಣೆ ಮಾಡುವಂತಹ ಒಳ್ಳೆಯ ಪಕ್ಷಗಳಿಗೆ ನಿಮ್ಮ ಮತ ಹಾಕಬೇಕು. ನೀವು ಮತ ಹಾಕಲು ದುಡ್ಡು ಕೇಳಿದರೆ, ಅವರು ಗೆದ್ದ ಮೇಲೆ ನಿಮ್ಮ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ ಎಂದು ತಿಳಿ ಹೇಳಿದರೂ, ಇದೆಲ್ಲವನ್ನು ಕೇಳಿದಷ್ಟು ಕೇಳಿ ಕೊನೆಗೆ ಅಲ್ಲೇ ಇದ್ದ ಮಧ್ಯಮ ವಯಸ್ಸಿನ ಮಹಿಳೆಯೊಬ್ಬರು 'ನಮಗೆ ಯ್ಯಾರು ದುಡ್ಡು ಕೊಡುತ್ತಾರೋ ಅವರಿಗೆ ನಮ್ಮ ವೋಟು' ಎಂದು ಹೇಳಿದರು.

ಆಗ, "ಮೋಸ ಮಾಡೋರು ನಾವಲ್ಲ. ಸುಳ್ಳು ಹೇಳೋರು ನಾವಲ್ಲ. ನಾನಾ ವೇಶದಿ ಮೋಸ ಮಾಡುವ ಗೋಮುಖ ವ್ಯಾಘ್ರ್ಯರು ನಾವಲ್ಲ. ಕೋಟ್ಯಧೀಶರು ನಾವಲ್ಲ. ಹೆಂಡ ಸಾರಾಯಿ ಕೊಡೋರು ನಾವಲ್ಲ. ರೈತ-ಕಾರ್ಮಿಕರ, ದಲಿತ-ಮಹಿಳೆಯರ, ವಿದ್ಯಾರ್ಥಿ-ಯುವಜನರ ಪಕ್ಷವಣ್ಣ ನಮ್ಮದು ಸಿಪಿಐ(ಎಂ). ನಾಡ ರಕ್ಷಕರು ನಾವಣ್ಣ. ಕುಡಗೋಲು ಸುತ್ತಿಗೆ ನಕ್ಷತ್ರಕ್ಕೆ ಮತ ನೀಡಿರಣ್ಣ." ಎಂಬ ಹಾಡಿನ ಶಬ್ದದ ಧ್ವನಿ ಸುರುಳಿಯಿಂದ ಹೊರಹೊಮ್ಮುತ್ತಿತ್ತು. ಅದು ಆ ಮಹಿಳೆಯ ಕಿವಿಗೂ ಕೇಳುತ್ತಿತ್ತು. ಈ ಹಾಡಿನ ಧ್ವನಿ ಸುರುಳಿಯನ್ನೇ ಕೇಳುತ್ತಿದ್ದ ಅಲ್ಲೇ ಪಕ್ಕದಲ್ಲಿ ಸೇರಿದ್ದ ಏಳೆಂಟು ಮಹಿಳೆಯರ ಗುಂಪು 'ಅಣ್ಣ ನಮ್ಮೆಲ್ಲಾ ಒಟು ನಿಮಗೆ, ಒಳ್ಳೇದು ಮಾಡುತ್ತಾ ಇದ್ದೀರಿ' ಎಂದು ಹೆಮ್ಮೆಯಿಂದ ಹೇಳುತ್ತಾ 'ಅಣ್ಣ ನಿಮ್ಮ ಗುರುತು ತೋರಿಸಿ' ಎಂದು ನಮ್ಮ ಕರಪತ್ರಗಳನ್ನು ಬಾಚಿಕೊಂಡರು. ಬಿಸಿಲಿನಲ್ಲೇ ಬಳಲಿದ್ದ ನಮಗೆಲ್ಲಾ ಆ ತಾಯಂದಿರ ಬೆಂಬಲದಿಂದ ಸ್ಫೂರ್ತಿ ಉಕ್ಕಿ ಬಂತು. ಮನೆಗೆ ಕರೆದರು. ನೀರು ಕೊಟ್ಟರು. ಟೀ ಕೊಟ್ಟರು. 'ನೀವು ಯಾಕೆ ಇಷ್ಟು ತಡವಾಗಿ ಬರುತ್ತೀರಿ, ಇದು ಹೊಸ ಪಕ್ಷನಾ?' ಎಂದೆಲ್ಲಾ ಕೇಳುತ್ತಾ ಸಂಬಂಧಿಗಳಂತೆ ಸತ್ಕರಿಸಿದರು. 'ನಮ್ಮ ಸ್ತ್ರೀ ಸಂಘದ ವೋಟನ್ನು ನಿಮಗೆ ಹಾಕತೀವಿ ಹೋಗಿ ಬನ್ನಿ ಅಣ್ಣ' ಎಂದು ಬೀಳ್ಕೊಟ್ಟರು.

ಹೀಗೆ ನಾವು ಹಳ್ಳಿಗೆ ಹಳ್ಳಿಗೆ, ಮನೆ ಮನೆಗೆ ತೆರಳಿ ಮತ ಯಾಚಿಸುತ್ತಿರುವ ಸಿಪಿಐ(ಎಂ) ಅಭ್ಯರ್ಥಿ ಡಿ. ಮಹದೇಶ್‌ರವರು ನಮ್ಮ ತಾಲ್ಲೂಕಿನಲ್ಲಿ ಮನೆ-ನಿವೇಶನ, ಕುಡಿಯುವ ನೀರು, ರಸ್ತೆ ದುರಸ್ಥೀಕರಣಕ್ಕಾಗಿ ಹೋರಾಟಗಳನ್ನು ಮಾಡುತ್ತಿದ್ದೇವೆ. ರೈತರ ಬಗರ್ ಹುಕುಂ ಸಾಗುವಳಿದಾರರ ಜಮೀನುಗಳನ್ನು ಅಕ್ರಮ ಭೂಸ್ವಾಧೀನದ ಮೂಲಕ ಕಬಳಿಸುವುದರ ವಿರುದ್ಧ, ಪಂಪ್ ಸೆಟ್ ಮೀಟರೀಕರಣದ ವಿರುದ್ಧ ಹಾಗೂ ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ವೇತನಕ್ಕಾಗಿ ಮತ್ತು ದಲಿತರ ಸಬಲೀಕರಣಕ್ಕಾಗಿ ತಾಲ್ಲೂಕಿನಾದ್ಯಂತ ನಮ್ಮ ಪಕ್ಷದಿಂದ ಹೋರಾಡುತ್ತಿದ್ದೇವೆ. ಕಾಂಗ್ರೆಸ್-ಬಿಜೆಪಿಯ ಭ್ರಷ್ಟಾಚಾರ ವಿರುದ್ಧ ಜನಾಂದೋಲನವನ್ನು ರೂಪಿಸುತ್ತಿದ್ದೇವೆ. ಇಂತಹ ಜನಪರವಾದ ಚಳುವಳಿಯನ್ನು ಬೆಂಬಲಿಸಲು ಜನರಿಂದ ಮತವನ್ನು ಯಾಚಿಸುತ್ತಿದ್ದೇವೆಂದು ಹೇಳುತ್ತಾರೆ. ಬಿಜೆಪಿ ಮತ್ತು ಕಾಂಗ್ರೆಸ್ ಮತ್ತು ಸ್ವಾರ್ಥ ಮತ್ತು ಭ್ರಷ್ಟತೆಯಿಂದ ಹುಟ್ಟಿಕೊಂಡ 'ಪ್ರಾದೇಶಿಕ ಪಕ್ಷ'ಗಳೆಂಬ ಹೆಸರಿನ ಪಕ್ಷಗಳು ಜಾತಿ ಮತ್ತು ಹಣಬಲದಿಂದ ಗೆದ್ದು ಬರಲು ಹವಣಿಸುತ್ತಿವೆ. ಅವರು ಜನರನ್ನು ಭ್ರಷ್ಟರನ್ನಾಗಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯ ನಡುವೆ ಪ್ರಜಾಪ್ರಭುತ್ವದ ಆಶಯವನ್ನು ಎತ್ತಿ ಹಿಡಿಯಲು ಜನ ಚಳುವಳಿಯೇ ಮೂಲಾಧಾರ. ಪ್ರಸ್ತುತ ಸಂದರ್ಭದಲ್ಲಿ ಜನಪರ ನೀತಿಗಳನ್ನು ಜಾರಿಗೆ ತರಲ ಹೋರಾಡುತ್ತಿರುವ ಸಿಪಿಐ(ಎಂ) ಗೆ ಓಟು ನೀಡಬೇಕೆಂದು ತಾಲ್ಲೂಕಿನಾದ್ಯಂತ ಪ್ರಚಾರಾಂದೋಲನ ಬರದಿಂದ ನಡೆಯುತ್ತಿದೆ.

ಸಿ.ಪಿ.ಐ(ಎಂ) ಗೆ ಏಕೆ ಮತ?

25.4.2013ರಂದು ಆಕಾಶವಾಣಿಯಲ್ಲಿ ಪ್ರಸಾರಗೊಂಡ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದಸ್ವಾಮಿ ಅವರ ಭಾಷಣ

ಪ್ರಿಯ ಮತದಾರ ಬಂಧುಗಳೆ,

ಸಿಪಿಐ(ಎಂ) ಪಕ್ಷದ ಪರವಾಗಿ ತಮಗೆಲ್ಲರಿಗೆ ಶುಭಾಶಯಗಳನ್ನು ಕೋರುತ್ತೇನೆ.

ಚುನಾವಣೆಗಾಗಿ ಕಾಯುತ್ತಾ ಇರುವ ನಿಮಗೆ ನಿಮ್ಮ ಪರಮಾಧಿಕಾರವನ್ನು ಚಲಾಯಿಸುವ ಇನ್ನೊಂದು ಅವಕಾಶ ದೊರೆತಿದೆ. ಯಾವುದೇ ಆಮಿಷಗಳಿಗೆ ಬಲಿಯಾಗದೆ. ಸ್ವಜಾತಿ, ಸ್ವಧರ್ಮ ಎಂಬ ಮಮಕಾರಕ್ಕೆ ಒಳಗಾಗದೆ, ಬೆದರಿಕೆಗಳಿಗೆ ಜಗ್ಗದೆ, ಅಕ್ರಮಗಳಲ್ಲಿ ಭಾಗಿಯಾಗದೆ, ಯೋಗ್ಯ ಪ್ರತಿನಿಧಿಗಳನ್ನು ಆಯ್ಕೆಮಾಡುವ ನೈತಿಕ ಜವಾಬ್ದಾರಿ ಪ್ರತಿಯೊಬ್ಬ ಮತದಾರನ ಮೇಲಿದೆ. ಅನೇಕ ಇತಿಮಿತಿಗಳುಳ್ಳ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರು ನಿಜವಾದ ಪ್ರಭುಗಳು ಆಗುವುದು ಚುನಾವಣೆಯ ಸಂದರ್ಭದಲ್ಲಿ ಮಾತ್ರ. ಈ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳದೆ, ಆನಂತರ ಚುನಾಯಿತ ಪ್ರತಿನಿಧಿಗಳನ್ನು ದೂರುತ್ತಾ ಕೂರುವುದರಲ್ಲಿ ಅರ್ಥವಿಲ್ಲ. ಈಗ ತಮ್ಮ ಮನೆ ಬಾಗಿಲಿಗೆ ಬಂದಿರುವ ಅವಕಾಶವನ್ನು ಸರಿಯಾಗಿ ಬಳಕೆಮಾಡಿ ಒಂದು ಉತ್ತಮವಾದ ಸರ್ಕಾರವನ್ನು ಅಸ್ತಿತ್ವಕ್ಕೆ ತರುವ ನಿಮ್ಮ ಪ್ರಯತ್ನ ಯಶಸ್ವಿಯಾಗಲಿ ಎಂದು ಸಿಪಿಐ(ಎಂ) ಪರವಾಗಿ ಹಾರೈಸುತ್ತೇನೆ.


ಸಿಪಿಐ(ಎಂ) ಅಂದರೆ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ದುಡಿಯುವ ಜನವರ್ಗಗಳ ಪಕ್ಷಪಾತಿ ಯಾಗಿದೆ. ದುಡಿಯುವ ಜನರ ಹಿತವೇ ಅದರ ಆದ್ಯತೆಯಾಗಿದೆ. ಆರ್ಥಿಕ ಶೋಷಣೆ ಹಾಗೂ ಸಾಮಾಜಿಕ ದಮನದ ವಿರುದ್ಧ ಹೋರಾಡುವುದೇ ಅದರ ದಿನಚರಿಯಾಗಿದೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಖಚಿತಪಡಿಸುವ ಹೊಸ ಸಮಾಜದ ನಿರ್ಮಾಣ ಸಿಪಿಐ(ಎಂ)ನ ಅಂತಿಮ ಗುರಿಯಾಗಿದೆ. ಆದ್ದರಿಂದ ಸಿಪಿಐ(ಎಂ) ಕೇವಲ ಒಂದು ರಾಜಕೀಯ ಪಕ್ಷವಾಗಿರದೆ ಅದೊಂದು ಆರ್ಥಿಕ-ಸಾಮಾಜಿಕ ಆಂದೋಲನವಾಗಿದೆ.

ನಾವು "ಕೈ ಕೆಸರಾದರೆ ಬಾಯಿ ಮೊಸರು" ಎಂದು ನಂಬಿದ್ದೇವೆ. ಆದರೆ ನಮ್ಮ ಸಮಾಜದಲ್ಲಿ ಕೈ ಕೆಸರು ಮಾಡಿಕೊಳ್ಳುವ ಜನ ಕನಸ್ಸಿನಲ್ಲೂ ಮೊಸರನ್ನು ಕಾಣುತಿಲ್ಲ. ಯಾರ ಕೈಗೆ ಕೆಸರೋ ಯಾರ ಬಾಯ್ಗೆ ಮೊಸರೋ ಎನ್ನುವಂತಿದೆ ನಮ್ಮ ಸಮಾಜ.

"ದುಡಿಮೆಯೇ ದುಡ್ಡಿನ ತಾಯಿ" ಎಂಬ ಗಾದೆ ಮಾತಿದೆ. ಇದು ಸೂರ್ಯನಷ್ಟೇ ಸತ್ಯವಾದ ಮಾತು. ದುಡಿಮೆಯಿಂದ ಮಾತ್ರ ದುಡ್ಡು ಹುಟ್ಟುತ್ತದೆ. ಯಾವ ಮಾಟ ಮಂತ್ರದಿಂದ ದುಡ್ಡು ಹುಟ್ಟುವುದಿಲ್ಲ. ಆದರೆ ನಮ್ಮ ಈ ಸಮಾಜದಲ್ಲಿ ತಮ್ಮ ದುಡಿಮೆಯಿಂದ ದುಡ್ಡನ್ನು ಹುಟ್ಟಿಸುವವರು ಬಡವರಾಗಿಯೇ ಇದ್ದಾರೆ. ದುಡಿಯುವವರು ಬಡವರು! ಹೆಚ್ಚು ದುಡಿಯುವವರು ಹೆಚ್ಚು ಬಡವರು! ದುಡಿಯದೆ ಇರುವವರು ಶ್ರೀಮಂತರು. ಇನ್ನೊಬ್ಬರನ್ನು ದುಡಿಸುವವರು ಶ್ರೀಮಂತರು!

ಇದೆಂತಹ ಸಮಾಜ? ಇದೊಂದು ನ್ಯಾಯಬದ್ಧ ಸಮಾಜವಲ್ಲ. ಇದು ಅನ್ಯಾಯದ ನೆಲೆಯ ಮೇಲೆ ನಿಂತಿರುವ ಸಮಾಜ.

ನಮ್ಮ ಸಮಾಜದಲ್ಲಿ ಕೆಲವರು ಹುಟ್ಟಿನಿಂದಲೇ ಕೀಳು, ಇನ್ನುಳಿದವರು ಹುಟ್ಟಿನಿಂದಲೇ ಮೇಲು. ನಮ್ಮ ಮನೆಗಳಲ್ಲಿ



ನರಿ ನಾಯಿಗಳಿಗೂ ಪ್ರವೇಶವಿದೆ. ಆದರೆ ಅವರು ಆ ಜಾತಿಯವರು ಎನ್ನುವ ಕಾರಣಕ್ಕೆ ಅವರಿಗೆ ಪ್ರವೇಶವಿಲ್ಲ, ಯಾರೂ ಇಷ್ಟ ಪಡದ, ಅಸಹ್ಯವಾದ, ಅತ್ಯಂತ ಕಡಿಮೆ ಆದಾಯತರುವ ಉದ್ಯೋಗಗಳನ್ನು ಅವಲಂಭಿಸಿ ಅವರು ಪಶುಗಳಿಗಿಂತಲೂ ಕೀಳಾಗಿ ಬದುಕಬೇಕು. ಇದೆಂತಹ ಸಮಾಜ? ಇಂತಹ ಸಮಾಜವನ್ನು ಹೀಗೇ ಮುಂದುವರೆಸಬೇಕೆ?

ಈ ಸಮಾಜ ಬದಲಾಗಬೇಕು. ಈ ಸಮಾಜವನ್ನು ಬದಲಾಯಿಸಬೇಕು. ಮನುಷ್ಯರೊಳಗೆ ಯಾರೂ ಮೇಲಲ್ಲ, ಕೀಳಲ್ಲ, ಇಲ್ಲಿ ಎಲ್ಲವೂ ಎಲ್ಲರಿಗೆ ಸೇರಿದ್ದು. ಧನಿಕ-ಶ್ರಮಿಕ ಎಂಬ ಬೇದ ತೊಲಗಬೇಕು. ಎಲ್ಲರಿಗೂ ದುಡಿಯುವ ಅವಕಾಶ ಇರಬೇಕು. ಅವರ ದುಡಿಮೆಯಿಂದ ಉತ್ಪತ್ತಿಯಾಗುವ ಸಂಪತ್ತು ಅವರಿಗೇ ಧಕ್ಕಬೇಕು. ಹಲವರ ದುಡಿಮೆಯಿಂದ ಉತ್ಪತ್ತಿಯಾಗುವ ಸಂಪತ್ತನ್ನು ಅಪಹರಿಸಿ ಕೆಲವರೇ ಶ್ರೀಮಂತರಾಗುವ ವ್ಯವಸ್ಥೆ ಕೊನೆಗೊಳ್ಳಬೇಕು. ಸಮತಾ ಸಮಾಜ ನಿರ್ಮಾಣ ಮಾಡಬೇಕು. ಇದು ಸಿಪಿಐ(ಎಂ)ನ ಅಂತಿಮ ಗುರಿ.

ಇದು ಬುದ್ಧ, ಬಸವ, ಯೇಸು, ಪೈಗಂಬರ್ ಮುಂತಾದ ಮಹಾಪುರುಷರು ಪ್ರತಿಪಾದಿಸಿದ ಸಮಾಜ. ಇದುವೇ ಕಾರ್ಲ್‌ಮಾರ್ಕ್ಸ್, ಫೆಡ್ರಿಕ್ ಏಂಗೆಲ್ಸ್, ಲೆನಿನ್, ಸ್ಟಾಲಿನ್ ಮೊದಲಾದ ಕ್ರಾಂತಿಕಾರಿಗಳು ಕಂಡುಕೊಂಡ ವೈಜ್ಞಾನಿಕ ಸಮಾಜವಾದ.

ಇದೇ ಸಮಾಜವಾದಿ ಸಮಾಜಕ್ಕಾಗಿ ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳು ತಮ್ಮ ಅಮೂಲ್ಯ ಪ್ರಾಣವನ್ನೇ ಬಲಿದಾನ ಮಾಡಿ ಅಮರರಾದರು.

ಇದೇ ಸಮಾಜವಾದಿ ಸಮಾಜದ ಕನಸನ್ನು ನನಸು ಮಾಡಲು ಹೋರಾಡುತ್ತಿದೆ ಸಿಪಿಐ(ಎಂ). ಭಾರತದ ಸುಪುತ್ರ ಸುಪುತ್ರಿಯರಾದ ಪಿ. ಸುಂದರಯ್ಯ, ಎ.ಕೆ.ಗೋಪಾಲನ್. ಇ.ಎಂ.ಎಸ್. ನಂಬೂದರಿಪಾಡ್, ಜ್ಯೋತಿಬಸು, ಹರ್‌ಕಿಶನ್ ಸಿಂಗ್ ಸೂರ್ಜಿತ್, ಎಂ. ಬಸವಪುನ್ನಯ್ಯ, ಪಿ. ರಾಮಮೂರ್ತಿ, ಬಿ.ಟಿ. ರಣದಿವೆ, ಪ್ರಮೋದ್ ದಾಸ್ ಗುಪ್ತಾ, ಗೋದಾವರಿ ಪರುಳೇಕರ್, ಅಹಲ್ಯಾ ರಂಗ್ನೇಕರ್, ವಿಮಲಾ ರಣದಿವೆ, ಸುಶಿಲಾ ಗೋಪಾಲನ್, ಕ್ಯಾಪ್ಟನ್ ಲಕ್ಷ್ಮಿಸೇಗಲ್ ಇದೇ ದಾರಿಯಲ್ಲಿ ನಡೆದು ನೆಲದ ಮೇಲೆ ಸ್ಪಷ್ಟವಾದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಹೋರಾಟಗಳ ಮಹಾನ್ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ. ಕರ್ನಾಟಕದಲ್ಲಿ ಸಿಪಿಐ(ಎಂ) ಧ್ವಜವನ್ನು ನೆಟ್ಟವರು ಎನ್.ಎಲ್. ಉಪಾಧ್ಯಾಯರು, ಎನ್.ಕೆ.ಉಪಾಧ್ಯಾಯರು ಸೂರ್ಯನಾರಾಯಣರಾಯರು, ಪಿ. ರಾಮಚಂದ್ರರಾಯರು, ಮಹಮ್ಮದ್ ಹಸನ್‌ಖಾನ್ ಮೊದಲಾದವರು.

ಎಲ್ಲರೂ ಸುಖವನ್ನು ಬಯಸುತ್ತಾರೆ. ಅದರಲ್ಲಿ ತಪ್ಪೇನಿಲ್ಲ. ಆದರೆ ಕಷ್ಟಪಡದೆ ಸುಖಸಿಗುವುದಿಲ್ಲ ಎಂಬುದು ಸಾಮಾನ್ಯ ಅನುಭವ. ಎಲ್ಲರೂ ಸುಖವಾಗಿ ಇರುವ ಸಮಾಜವನ್ನು ನಿರ್ಮಾಣ ಮಾಡಲು ಕಷ್ಟ ಪಡಬೇಕಾಗುತ್ತದೆ. ಹೋರಾಟ ಮಾಡಬೇಕಾಗುತ್ತದೆ. ತ್ಯಾಗ ಬಲಿದಾನಕ್ಕೆ ಮುಂದಾಗಬೇಕಾಗುತ್ತದೆ.

ಸಿಪಿಐ(ಎಂ) ಸಮಾಜದ ಕ್ರಾಂತಿಕಾರಿ ಪುನರ್‌ರಚನೆಯ ಗುರಿಯನ್ನು ಇಟ್ಟುಕೊಂಡು ಶ್ರಮಿಕರು, ಶೋಷಿತರು, ಸಾಮಾಜಿಕವಾಗಿ ತುಳಿತಕ್ಕೆ ಒಳಗಾದವರನ್ನು ಸಂಘಟಿಸಿ ಅವರ ಹೋರಾಟಗಳನ್ನು ಸಂಘಟಿಸುವುದರಲ್ಲಿ ನಿರತವಾಗಿದೆ. ಶ್ರಮಿಕರು, ಶೋಷಿತರು ಇಂತಹ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಾ ಹೋದಂತೆ ಅವರಲ್ಲಿ ಕ್ರಾಂತಿಕಾರಿ ಪ್ರಜ್ಞೆ ಬೆಳೆದು ಬರುತ್ತದೆ. ಕ್ರಾಂತಿಕಾರಿ ಪ್ರಜ್ಞೆಯನ್ನು ಬೆಳೆಸಿಕೊಂಡ ಜನ ಸಮಾಜದ ಕ್ರಾಂತಿಕಾರಿ ಪುನರ್‌ರಚನೆಗೆ ಮುಂದಾಗುತ್ತಾರೆ. ಹೀಗೆ ಜನರಿಂದಲೇ ಇತಿಹಾಸ ನಿರ್ಮಾಣವಾಗುತ್ತದೆ.

ಜನಚಳುವಳಿಗಳನ್ನು ಕಟ್ಟಿಕೊಂಡು ಬರುವಾಗ ಚುನಾವಣೆಗಳು ಎದುರಾಗುತ್ತವೆ. ಜನಚಳುವಳಿಗಳನ್ನು ಬಲಪಡಿಸುವ ಅಂಗವಾಗಿ ಸಿಪಿಐ(ಎಂ) ಚುನಾವಣೆಗಳಲ್ಲೂ ಭಾಗವಹಿಸುತ್ತದೆ. ಜನಚಳುವಳಿಗಳ ಪ್ರತಿನಿಧಿಗಳನ್ನು ಶಾಸನಸಭೆಗಳ ಒಳಗೆ ಕೊಂಡೊಯ್ಯುವುದು ಸಿಪಿಐ(ಎಂ) ಉದ್ದೇಶವಾಗಿದೆ. ಜನಪರ ಹೋರಾಟಗಾರರು ಶಾಸಕರು, ಸಂಸತ್ ಸದಸ್ಯರೂ ಆಗಿ ಆಯ್ಕೆಯಾದರೆ ಶ್ರಮಿಕರ, ಶೋಷಿತರ ಧ್ವನಿ ಶಾಸನಸಭೆಗಳಲ್ಲೂ ಪ್ರತಿಧ್ವನಿಸುವಂತಾಗುತ್ತದೆ. ಅನ್ಯಾಯಕ್ಕೆ ಒಳಗಾಗುತ್ತಿರುವ ಸಮುದಾಯಗಳಿಗೆ ಸ್ವಲ್ಪಮಟ್ಟಿಗಾದರೂ ನ್ಯಾಯ ದೊರಕಿಸಲು ಸಾಧ್ಯವಾಗುತ್ತದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕಾಗಿ, ರೇಷನ್ ವ್ಯವಸ್ಥೆಯನ್ನು ಬಲಪಡಿಸುವುದಕ್ಕಾಗಿ, ಬೆಲೆ ಏರಿಕೆಗೆ ತಕ್ಕಂತೆ ಕಾರ್ಮಿಕರ ಸಂಬಳ ಸವಲತ್ತುಗಳನ್ನು ಹೆಚ್ಚಿಸುವುದಕ್ಕಾಗಿ, ರೈತರ ಫಸಲಿಗೆ ಲಾಭದಾಯಕ ಬೆಲೆ ದೊರಕಿಸುವುದಕ್ಕಾಗಿ, ರೈತರ ಭೂಮಿಯನ್ನು ಕಬಳಿಸುವುದನ್ನು ತಡೆಗಟ್ಟುವುದಕ್ಕಾಗಿ, ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗಗಳನ್ನು ಒದಗಿಸುವುದಕ್ಕಾಗಿ, ಶಿಕ್ಷಣ, ಆರೋಗ್ಯ, ದುಬಾರಿಯಾಗುವುದನ್ನು ತಡೆಗಟ್ಟುವುದಕ್ಕಾಗಿ, ಮಹಿಳೆಯರ ಮೇಲೆ, ದಲಿತರ ಮೇಲೆ, ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟುವುದಕ್ಕಾಗಿ, ಕೋಮು ಸೌಹಾರ್ದತೆಯನ್ನು ಕಾಪಾಡುವುದಕ್ಕಾಗಿ ನಡೆಯುವ ಜನಚಳುವಳಿಗಳ ನೇತೃತ್ವವನ್ನು ಚುನಾಯಿತ ಪ್ರತಿನಿಧಿಗಳೇ ವಹಿಸಿಕೊಳ್ಳುವಂತಾದರೆ ಚಳುವಳಿಗಳು ಹೆಚ್ಚು ಪರಿಣಾಮಕಾರಿಯಾಗುತ್ತವೆ. ಈ ಉದ್ದೇಶದಿಂದ ಸಿಪಿಐ(ಎಂ) ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತದೆ.

ಇಂದು ರಾಜಕಾರಣ ಎಂಬುದು "ದುಡ್ಡು ಮಾಡುವ ದಂಧೆ" ಆಗಿಬಿಟ್ಟಿದೆ. ಹಣವಂತರು ತಮ್ಮ ಬಳಿ ಇರುವ ಕಪ್ಪುಹಣವನ್ನು ಬಳಸಿಕೊಂಡು ಚುನಾವಣೆಗಳಲ್ಲಿ ಗೆಲ್ಲುತ್ತಾರೆ. ಆನಂತರ ಸಾರ್ವಜನಿಕ ಬೊಕ್ಕಸವನ್ನು ಮತ್ತು ರಾಜ್ಯದ ನಿಸರ್ಗ ಸಂಪತ್ತನ್ನು ಲೂಟಿಮಾಡುತ್ತಾರೆ. ಜನಸೇವೆ ಎಂಬುದು ಒಂದು ನೆಪ ಮಾತ್ರ. ಬೆಳೆಯುತ್ತಿರುವ ಈ ಅಪಾಯಕಾರಿ ಪ್ರವೃತ್ತಿಯ ವಿರುದ್ಧ ಹೋರಾಡುವ ಉದ್ದೇಶದಿಂದಲೂ ಸಿಪಿಐ(ಎಂ) ಈ ಚುನಾವಣೆಯಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಆಡಳಿತ ನಡೆಸಿದ ಬಿಜೆಪಿಯಾಗಲಿ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್

ಪುಟ 15 ಕ್ಕೆ

ಬೈಂದೂರು ಕ್ಷೇತ್ರದಲ್ಲಿ ಬಿರುಸಿನ ಪ್ರಚಾರ

ಚುನಾವಣೆಯ ಘೋಷಣೆಯಿಂದಾಗಿ ಕಳೆದ 5 ವರ್ಷಗಳ ದುರಾಡಳಿತಕ್ಕೆ ಕೊನೆಗೂ ತೆರೆ ಬಿದ್ದಿದೆ. ಜನಹಿತ ಮರೆತ ರಾಜಕಾರಣದಿಂದ ಬೇಸತ್ತ ಜನರಲ್ಲಿ ನಿರಾಳ ಭಾವ ಮೂಡಿದೆ. ಬಿ.ಜೆ.ಪಿ ಯ ಚೊಚ್ಚಲ ಆಳ್ವಿಕೆಯ ಅವಧಿಯಲ್ಲಿ ರಾಜ್ಯವು ಹಿಂದೆಂದೂ ಇಲ್ಲದಷ್ಟು ಕೆಟ್ಟ ಹೆಸರನ್ನು ಸಂಪಾದಿಸಿತು. ನಿಯಂತ್ರಣಕ್ಕೆ ನಿಲುಕದೆ ಹೋದ ಭ್ರಷ್ಟಾಚಾರವೇ ಇದ-ಕ್ಕೆ ಮುಖ್ಯ ಕಾರಣ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್. ನಾಗರಾಜ ಹೇಳಿದರು.

ಬೈಂದೂರು ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಕೆ. ಶಂಕರ ಪರವಾಗಿ ನಾಡ ಗ್ರಾಮ ಪಂಚಾಯತ್ ವ್ಯಾಪ್ತಿಯ ಸೇನಾಪುರದಲ್ಲಿ ಚುನಾವಣಾ ಪ್ರಚಾರ ಭಾಷಣದಲ್ಲಿ ಅವರು ಮಾತನಾಡಿದರು. ಅಧಿಕಾರ ಗಟ್ಟಿಗೊಳ್ಳುತ್ತಿದ್ದಂತೆ ದುಡ್ಡು ಮಾಡುವ ಧಂದೆ ರಾಜಾರೋಷವಾಗಿ ನಡೆ-ಯತೊಡಗಿತು. ಬಳ್ಳಾರಿಯ ರೆಡ್ಡಿ ಸಹೋದರರು ಬಿ.ಜೆ.ಪಿ ಹೈಕಮಾಂಡಿನ ಪೂರ್ಣ ಸಮ್ಮತಿಯೊಂದಿಗೆ ಗಣಿ ಸಂಪತ್ತನ್ನು ಲೂಟಿ ಮಾಡಿದರು. ಇತ್ತ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಕೃಷ್ಣಯ್ಯ ಶೆಟ್ಟಿ, ಆರ್. ಅಶೋಕ, ಮುರಗೇಶ್ ನಿರಾಣಿ, ಸೋಮಣ್ಣ, ರಾಮದಾಸ ಮೊದಲಾದ ಮಂತ್ರಿಮಂಡಲದ ಸದಸ್ಯರು ಜಮೀನು ಡಿನೋಟಿಫಿಕೇಶನ್ ಹಗರಣಗಳಿಂದ ಕೋಟಿಗಟ್ಟಲೆ ರೂಪಾಯಿಗಳನ್ನು ಜಮಾಯಿಸಿಕೊಂಡರು ಮತ್ತು ಸರಕಾರದ ಬೊಕ್ಕಸಕ್ಕೆ ಕೋಟಿಗಟ್ಟಲೆ ರೂಪಾಯಿಗಳ ನಷ್ಟ ಉಂಟುಮಾಡಿದರು ಎಂದು ಜಿ.ಎನ್. ನಾಗರಾಜ್ ಟೀಕಿಸಿದರು.



ಬೈಂದೂರು ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಕೆ. ಶಂಕರ ಸಾರ್ವಜನಿಕ ಸಭೆಯಲ್ಲಿ ಮತ ಯಾಚನೆ ಮಾಡಿದರು. ಸಿಪಿಐ(ಎಂ) ಪಕ್ಷದ ಬಾಲಕೃಷ್ಣ ಶೆಟ್ಟಿ, ರಾಜೀವ ಪಡು-ಕೋಣೆ, ವೆಂಕಟೇಶ ಕೋಣಿ, ಎಚ್. ವಿಠಲ ಪೂಜಾರಿ, ಲಯನ್ಸ್ ರೆಬೆಲ್ಲೊ, ಪರಮೇಶ್ವರ ಉಪಸ್ಥಿತರಿದ್ದರು. ನಾಡಾ ಗ್ರಾಮ ಪಂಚಾಯತ್ ಸದಸ್ಯ ಫಿಲಿಪ್ ಡಿಸಿಲ್ವ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಾಂಗ್ರೆಸ್, ಬಿಜೆಪಿ ಆಡಳಿತದಲ್ಲಿ ಕಾರ್ಮಿಕರಿಗಿಲ್ಲ ರಕ್ಷಣೆ – ಜಿ.ಎನ್. ನಾಗರಾಜ

ಕೊನೆಯವರೆಗೂ ಅಧಿಕಾರದ ಕಿತ್ತಾಟದಲ್ಲೇ ಕಾಲ ಕಳೆದ ಬಿ.ಜೆ.ಪಿ ಸರಕಾರ ಜನರ ಸಂಕಷ್ಟಗಳಿಗೆ ಸ್ಪಂದಿಸುವ ವ್ಯವಧಾನವನ್ನೇ ಕಳೆದುಕೊಂಡಿತ್ತು. ಬಿ.ಜೆ.ಪಿ. ಸರಕಾರ ಅಧಿಕಾರಕ್ಕೆ ಬಂದ ದಿನಂದಿದಲೂ ಭೀಕರ ಬರ ರಾಜ್ಯದ ಜನತೆಯನ್ನು ಕಾಡಿತ್ತು. ಬರಪೀಡಿತ ಜನತೆಗೆ ಸಹಾಯಹಸ್ತ ಚಾಚಲು ಈ ಸರಕಾರ ಮುಂದಾಗಲಿಲ್ಲ. 2009ರಲ್ಲಿ ಸಂಭವಿಸಿದ ಭೀಕರ ನೆರೆ ಹಾವಳಿಗೆ ತುತ್ತಾಗಿ ಮನೆ ಮಾರು ಕಳೆದುಕೊಂಡು ನಿರಾಶ್ರಿತರಾದವರಿಗೆ ಇದುವರೆಗೂ ಸರಿಯಾದ ಪುನರ್ವಸತಿ ಕಲ್ಪಿಸಲಿಲ್ಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್. ನಾಗರಾಜ ಸರಕಾರವನ್ನು ದೂರಿದರು.

ಬೈಂದೂರು ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಕೆ. ಶಂಕರ ರವರ ಪರ ತಲ್ಲೂರಿನಲ್ಲಿ ಜರುಗಿದ ಚುನಾವಣಾ ಪ್ರಚಾರದ ಸಾರ್ವಜನಿಕ ಸಭೆಯಲ್ಲಿ ಜಿ.ಎನ್. ನಾಗರಾಜ ಮಾತನಾಡಿದರು. ಹಿಂದೆಂದೂ ಕಂಡರಿಯದ ಬೆಲೆ ಏರಿಕೆ ದೇಶವನ್ನು ಇಂದು ಸುಡುತ್ತಿದೆ. ಸಹಿಸಲು ಅಸಾಧ್ಯವಾದ ಈ ಬೆಲೆ ಏರಿಕೆಗೆ ಕಾಂಗ್ರೆಸ್ ಸರಕಾರದ ಉದಾರೀಕರಣ ನೀತಿಗಳೇ ಕಾರಣ. ಕಾಂಗ್ರೆಸ್ ಸರಕಾರಗಳ ಚರಿತ್ರೆಯೇ ಕಾರ್ಮಿಕರ ಹಕ್ಕುಗಳ ದಮನದ ಚರಿತ್ರೆಯಾಗಿದೆ. ಕರ್ನಾಟಕದ ಕಾರ್ಮಿಕರು ಅದನ್ನು ಮರೆತಿರಲು ಸಾಧ್ಯವಿಲ್ಲ. ವಿಶ್ವದ ಆರ್ಥಿಕ ಬಿಕ್ಕಟ್ಟಿನ ಹೆಸರಿನಲ್ಲಿ ಕಾರ್ಪೋರೇಟ್ ಕಂಪೆನಿಗಳಿಗೆ ಸುಮಾರು 2 ಲಕ್ಷ ಕೋಟಿ ರೂಪಾಯಿಗಳ ಧನಸಹಾಯ ನೀಡಿದೆ. ಆದರೆ ಇದೇ ಬಿಕ್ಕಟ್ಟಿನಿಂದಾಗಿ ಕೆಲಸ ಕಳೆದುಕೊಂಡ 50 ಲಕ್ಷಕ್ಕೂ ಹೆಚ್ಚು ಕಾರ್ಮಿಕರಿಗೆ ಯಾವುದೇ ಪರಿಹಾರವೂ ಇಲ್ಲ. ಯಾವ ಪರ್ಯಾಯ ಉದ್ಯೋಗವನ್ನೂ ಒದಗಿಸಲಿಲ್ಲ ಎಂದು ಜಿ.ಎನ್. ನಾಗರಾಜ ಆಕ್ರೋಶ ವ್ಯಕ್ತಪಡಿಸಿದರು.

ಬೈಂದೂರು ಕ್ಷೇತ್ರದ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಕೆ. ಶಂಕರ ಮಾತನಾಡಿ, ರೈತ ಕಾರ್ಮಿಕ, ಕೃಷಿಕೂಲಿಕಾರರ ಪರವಾಗಿ ಹೋರಾಟ ಮಾಡುವ ಕಮ್ಯೂನಿಸ್ಟ್ ಪಕ್ಷ-ಕ್ಕೆ ಮತ ನೀಡಬೇಕೆಂದು ಮತದಾರರಲ್ಲಿ ವಿನಂತಿಸಿಕೊಂಡರು. ಸಿಪಿಐ(ಎಂ) ಬೈಂದೂರು ವಲಯ ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಮಿಕ ಮುಖಂಡ ನೆಲ್ಲಿಕಟ್ಟೆ ಲಕ್ಷ್ಮಣ ಅಧ್ಯಕ್ಷತೆ ವಹಿಸಿದ್ದರು. ಕಾರ್ಮಿಕ ಮುಖಂಡರಾದ ಎಚ್. ವಿಠಲ ಪೂಜಾರಿ, ಜೆ.ಬಿ. ಮಹಮ್ಮದ್, ಲಕ್ಷ್ಮಣ ಹೆಮ್ಮಾಡಿ, ವಿ. ನಾಗ ಉಪಸ್ಥಿತರಿದ್ದರು. ಗೋಪಾಲ ಕಾಗೇರಿ ವಂದಿಸಿದರು.

ಸಿ.ಪಿ.ಐ(ಎಂ) ಗೆ ಏಕೆ ಮತ?....

ಪುಟ 5 ರಿಂದ

ಪಕ್ಷವಾಗಲಿ ಭ್ರಷ್ಟಾಚಾರದ ಇದುವರೆಗಿನ ಎಲ್ಲಾ ದಾಖಲೆಗಳನ್ನು ಮೀರಿವೆ. ಜನ ಈ ರಾಜಕೀಯ ಪಕ್ಷಗಳಲ್ಲಿ ವಿಶ್ವಾಸವನ್ನೇ ಕಳೆದುಕೊಳ್ಳುವಂತಾಗಿದೆ. ಸಾರ್ವಜನಿಕ ಬೊಕ್ಕಸವನ್ನು, ನಾಡಿನ ನೈಸರ್ಗಿಕ ಸಂಪತ್ತನ್ನು ಲೂಟಿಮಾಡುವುದರಲ್ಲಿ ತಲ್ಲೀನರಾದ ಈ ಪಕ್ಷಗಳ ಸರ್ಕಾರಗಳಿಗೆ ರೈತರ, ಕಾರ್ಮಿಕರ, ಕೂಲಿಕಾರರ, ಇತರ ದುಡಿಯುವ ಜನರ ಸಂಕಷ್ಟಗಳಿಗೆ ಸ್ಪಂಧಿಸುವ ವ್ಯವಧಾನವೇ ಇರಲಿಲ್ಲ.ನಾವು ಬಿತ್ತಿದನ್ನೇ ಬೆಳೆಯಬೇಕಲ್ಲವೇ? ಬೇವು ಬಿತ್ತಿ ಮಾವು ಬೆಳೆಯಲು ಸಾಧ್ಯವೆ? ದುಡ್ಡು ಮಾಡುವ ಉದ್ದೇಶದಿಂದಲೇ ರಾಜಕಾರಣದಲ್ಲಿರುವವರನ್ನು ನಾವು ಚುನಾವಣೆಯಲ್ಲಿ ಬೆಂಬಲಿಸಿದರೆ ಭ್ರಷ್ಟಾಚಾರವನ್ನಲ್ಲದೆ ಬೇರೆ ಏನನ್ನೂ ಬೆಳೆಯಲು ಸಾಧ್ಯ?

ಸಿಪಿಐ(ಎಂ) ಚುನಾವಣೆಗಳಲ್ಲಿ ಸ್ಪರ್ಧಿಸಿ ಬಹುಮತ ಪಡೆದು ಪಶ್ಚಿಮ ಬಂಗಾಳ ರಾಜ್ಯದಲ್ಲಿ 34 ವರ್ಷ ಆಡಳಿತ ನಡೆಸಿದೆ. ಕೇರಳದಲ್ಲಿ ಅನೇಕ ಬಾರಿ ಅಧಿಕಾರಕ್ಕೆ ಬಂದಿದೆ. ತ್ರಿಪುರಾದಲ್ಲಿ ಕಳೆದ 20 ವರ್ಷಗಳಿಂದ ನಿರಂತರ ಅಧಿಕಾರದಲ್ಲಿದೆ. ಆದರೆ ಸಿಪಿಐ(ಎಂ) ಎಂದೂ ಮತದಾರರಿಗೆ ಹಣ, ಹೆಂಡ, ಸೀರೆ ಮೊದಲಾದವುಗಳನ್ನು ವಿತರಿಸಿಲ್ಲ. ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಹಣ ಬಲ, ಜಾತಿಬಲ ಇದ್ದವರನ್ನು ಹುಡುಕುವುದಿಲ್ಲ. ಟಿಕೆಟ್‌ಗಾಗಿ ಪಕ್ಷದೊಳಗೆ ಕಿತ್ತಾಟ–ಕಚ್ಚಾಟ ಇರುವುದಿಲ್ಲ. ಚುನಾವಣೆಯಲ್ಲಿ ಗೆದ್ದು ಶಾಸಕರು, ಮಂತ್ರಿಗಳು ಆದ ಬಳಿಕವೂ ಅವರ ವಿರುದ್ಧ ಭ್ರಷ್ಟಾಚಾರದ ಸಣ್ಣ ಆರೋಪ ಇದುವರೆಗೂ ಕೇಳಿ ಬರಲಲ್ಲ. ರಾಜ್ಯದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರವನ್ನು ತಡೆಗಟ್ಟುವ ದೃಷ್ಟಿಯಿಂದಲೂ ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸುವುದು ಅಗತ್ಯವಾಗಿದೆ.

ಧೋರಣೆಗಳ ವಿಷಯದಲ್ಲಿ ಸಿಪಿಐ(ಎಂ) ಕಾಂಗ್ರೆಸ್, ಬಿಜೆಪಿ ಮತ್ತಿತರ ಪಕ್ಷಗಳಿಗಿಂತ ಭಿನ್ನವಾಗಿದೆ. ಶ್ರೀಮಂತರನ್ನೇ ಶ್ರೀಮಂತರನ್ನಾಗಿಸುವ ಧೋರಣೆಗಳನ್ನು ಸಿಪಿಐ(ಎಂ) ವಿರೋಧಿಸುತ್ತದೆ. ಉದ್ಯೋಗ ಮೂಲಭೂತ ಹಕ್ಕಾಗಬೇಕೆಂದು ಸಿಪಿಐ(ಎಂ) ಪ್ರತಿಪಾದಿಸುತ್ತದೆ. ಎಲ್ಲರಿಗೂ ಉದ್ಯೋಗವನ್ನು ಒದಗಿಸುವುದು ಸರ್ಕಾರದ ಕಾನೂನುಬದ್ಧ ಜವಾಬ್ದಾರಿಯಾಗಬೇಕು.

ಹೆಚ್ಚೆಚ್ಚು ಯಾಂತ್ರೀಕೃತವಾದ ಕಂಪೆನಿ ಕೃಷಿ ಪದ್ಧತಿ ಅಳವಡಿಸಿ ರೈತ ಆ ಧಾರಿತ ಕೃಷಿ ಪದ್ಧತಿಯನ್ನು ನಾಶಮಾಡುವ ಧೋರಣೆಯನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸುತ್ತದೆ. ಅದರ ಬದಲಾಗಿ ಪ್ರಗತಿಪರ ಭೂಸುಧಾರಣೆಗಳನ್ನು ಜಾರಿಗೆ ತಂದು ಜಮೀನ್ದಾರರ ಹೆಚ್ಚುವರಿ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು ಭೂರಹಿತ ಬಡ ಕುಟುಂಬಗಳಿಗೆ ವಿತರಣೆ ಮಾಡಿ ಗ್ರಾಮೀಣ ಬಡತನ ಮತ್ತು ನಿರುದ್ಯೋಗಕ್ಕೆ ಪರಿಹಾರ ಕಂಡುಕೊಳ್ಳಬೇಕು. ಸಾರ್ವಜನಿಕ ರಂಗವನ್ನು ವಿಸ್ತರಿಸಿ ಬಲಪಡಿಸುವ ಮೂಲಕ ಹೆಚ್ಚೆಚ್ಚು ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಬೇಕು. ಕಾರ್ಮಿಕರಿಗೆ ಮುಖ್ಯವಾಗಿ ಅಸಂಘಟಿತ ವಲಯದ ಕಾರ್ಮಿಕರಿಗೆ ಜೀವನಾವಶ್ಯಕ ವೇತನ ಸಿಗುವುದನ್ನು ಸರ್ಕಾರ ಖಚಿತ ಪಡಿಸಬೇಕು ಮತ್ತು ಆ ಮೂಲಕ ಅವರ ಕೊಂಡುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಕಾರ್ಪೋರೇಟ್ ಕಂಪನಿಗಳಿಗೆ ಲೆಕ್ಕವಿಲ್ಲದಷ್ಟು ತೆರಿಗೆ ರಿಯಾಯ್ತಿ ನೀಡುವುದನ್ನು ಒಟ್ಟಿ ಅವರಿಂದ ಸರ್ಕಾರಕ್ಕೆ ಸಲ್ಲಬೇಕಾದ ತೆರಿಗೆಯನ್ನು ಸರಿಯಾಗಿ ವಸೂಲಿಮಾಡಿ ಆ ಹಣವನ್ನು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಖರ್ಚು ಮಾಡಬೇಕು. ದೇಶದ ಹೊರಗೆ ಮತ್ತು ಒಳಗೆ ಬಚ್ಚಿಡಲಾದ ಕಪ್ಪು ಹಣವನ್ನು ಬಯಲಿಗೆಳೆದು ಅದನ್ನು ಅಭಿವೃದ್ಧಿ ಯೋಜನೆಗೆ ಬಳಸಿಕೊಳ್ಳಬೇಕು.

ನಮ್ಮ ಸಮಾಜದಲ್ಲಿ ಇನ್ನೂ ಜೀವಂತವಾಗಿರುವ ಅಸ್ಪೃಶ್ಯತಾ ಆಚರಣೆಗಳನ್ನು, ಪಂಕ್ತಿಬೇದ, ಮಡೆಸ್ನಾನದಂತಹ ಅನಿಷ್ಟ ಪದ್ಧತಿಗಳನ್ನು ಯಾವುದೇ ಮೂಲಾಜ್ ಇಲ್ಲದೆ ನಿಷೇದಿಸಬೇಕು. ಕೋಮುಗಲಭೆಗಳಿಗೆ ಪ್ರಚೋಧನೆ ನೀಡುತ್ತಿರುವ ಶಕ್ತಿಗಳನ್ನು ನಿಯಂತ್ರಿಸಲು ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು. ಇಂತಹ ಪರ್ಯಾಯ ಧೋರಣೆಗಳನ್ನು ಜನರ ಮುಂದಿಡಲು, ಶಾಸನ ಸಭೆಗಳಲ್ಲಿ ಅವುಗಳ ಬಗ್ಗೆ ಚರ್ಚೆಯಾಗುವಂತೆ ಮಾಡಲು ಸಿಪಿಐ(ಎಂ) ತನ್ನ ಪ್ರತಿನಿಧಿಗಳನ್ನು ರಾಜ್ಯ ವಿಧಾನಸಭೆಗೆ ಚುನಾಯಿಸಿ ಕಳುಹಿಸಲು ಬಯಸಿದೆ.

ಸಿಪಿಐ(ಎಂ) ಅಭ್ಯರ್ಥಿಗಳನ್ನು ಈ ಹಿಂದೆಯೂ ಗೆಲ್ಲಿಸಿ ವಿಧಾನಸಭೆಯೊಳಗೆ ದುಡಿಯುವ ಜನರ ಧ್ವನಿಯನ್ನು ಮೊಳಗಿಸಿದ ಚರಿತ್ರೆ ಇದೆ. ಈ ಸಲವೂ ಅಂತಹ ಚರಿತ್ರಾರ್ಹ ತೀರ್ಮಾನವನ್ನು ನೀಡಬೇಕೆಂದು ಮತ್ತೊಮ್ಮೆ ಮನವಿ ಮಾಡುತ್ತೇನೆ. ಭ್ರಷ್ಟ ಬಿಜೆಪಿ ಮತ್ತು ಭ್ರಷ್ಟ ಕಾಂಗ್ರೆಸ್ ಪಕ್ಷಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕೆಂದು ಮನವಿ ಮಾಡುತ್ತೇನೆ. ಸಿಪಿಐ(ಎಂ) ಪಕ್ಷದ ಚುನಾವಣಾ ಚಿನ್ನೆ "ಕುಡುಗೋಲು, ಸುತ್ತಿಗೆ ಮತ್ತು ನಕ್ಷತ್ರ"

ಸಿಪಿಐ(ಎಂ) ಸ್ಪರ್ಧಿಸದೆ ಇರುವ ಇತರ ಕ್ಷೇತ್ರಗಳಲ್ಲಿ ಸಿಪಿಐ, ಫಾರ್ವರ್ಡ್ ಬ್ಲಾಕ್. ಸರ್ವೋದಯ ಕರ್ನಾಟಕ ಮತ್ತು ಲೋಕಸತ್ತಾ ಪಕ್ಷಗಳ ಅಭ್ಯರ್ಥಿಗಳಿಗೆ ಮತ ನೀಡಬೇಕೆಂದು ಮತ್ತು ಆ ಮೂಲಕ ರಾಜ್ಯದಲ್ಲಿ ಒಂದು ಜನಪರ ಪರ್ಯಾಯ ರಾಜಕೀಯ ಶಕ್ತಿಯನ್ನು ಕಟ್ಟಿ ಬೆಳೆಸಲು ನೆರವಾಗಬೇಕೆಂದು ವಿನಂತಿಸುತ್ತೇನೆ.

ನಮಸ್ಕಾರ

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುಪಿಎ ಸರಕಾರದ ಹಠಮಾರಿತನ: ಸಂಸತ್ತು ನಿಷ್ಕ್ರಿಯ


ಯುಪಿಎ-2 ಸರಕಾರ ಸಂಸತ್ತಿಗೆ ತನ್ನ ಜವಾಬುದಾರಿಕೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದೆ ಎಂಬುದು ಈಗ ಕಲ್ಲಿದ್ದಲು ಹಗರಣದ ತನಿಖೆಯಲ್ಲಿ ಹಸ್ತಕ್ಷೇಪ ಮತ್ತು 2ಜಿ ಹಗರಣದ ಏಕಪಕ್ಷೀಯ ಜೆಪಿಸಿ ವರದಿಯಲ್ಲಿ ಪ್ರದರ್ಶನಗೊಂಡಿದೆ. ಇನ್ನೊಂದೆಡೆ, ಇದರಿಂದ ಸಂಸತ್ತಿನ ಕಲಾಪಗಳು ಅಸ್ತವ್ಯಸ್ತಗೊಂಡಿರುವ ಸನ್ನಿವೇಶವನ್ನು ಬಳಸಿ ಸಂಸತ್ತಿನ ಮುಂದೆ ಪರೀಕ್ಷಣೆಗಾಗಿ ಇರುವ ಎಲ್ಲ ನವ-ಉದಾರವಾದಿ ಸುಧಾರಣೆಗಳಿಗೆ ಸಂಬಂಧಪಟ್ಟ ಧೋರಣೆಯ ನಿರ್ಧಾರಗಳನ್ನು ಕಾರ್ಯಾಂಗದ ನಿರ್ಣಯಗಳೆಂದು ಕಳ್ಳತನದಿಂದ ಮಾಡಿ ಬಿಡುವ ಪ್ರಯತ್ನವನ್ನೂ ಅದು ನಡೆಸಬಹುದು. ಸಂಸದೀಯ ವೇದಿಕೆಯನ್ನು ಹೀಗೆ ನಿಷ್ಕ್ರಿಯಗೊಳಿಸಿರುವಾಗ ಇದನ್ನು ತಡೆದು ನಿಲ್ಲಿಸಲು ಉಳಿಯುವ ಮಾರ್ಗವೆಂದರೆ ಜನತೆಯ ಹೋರಾಟಗಳ ಸಂಸದೀಯೇತರ ವಿಧಾನ ಮಾತ್ರ, ಅದು ಸರಕಾರವನ್ನು ತಡೆದು ನಿಲ್ಲಿಸಬಲ್ಲ ಶಕ್ತಿ ಪಡೆದುಕೊಳ್ಳಬೇಕು.

ಸೀತಾರಾಂ ಯೆಚೂರಿ

ಸಂಸತ್ತಿನ ಬಜೆಟ್ ಅಧಿವೇಶನದ ಉಳಿದ ಭಾಗ ಅಸ್ತವ್ಯಸ್ತಗೊಳ್ಳುವುದು ಸುಮಾರಾಗಿ ಖಚಿತವೆನ್ನುವಂತೆ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಕಾಣುತ್ತಿದೆ. ಈ ಯುಪಿಎ-2 ಸರಕಾರ ಇತ್ತೀಚೆಗೆ ಕೆಲವು ಸಮಯದಿಂದ ಸಂಸತ್ತಿಗೆ ತನ್ನ ಸಂವಿಧಾನಿಕ ಜವಾಬುದಾರಿಕೆಯಿಂದ ತಪ್ಪಿಸಿಕೊಳ್ಳುತ್ತಿದೆ. ಜನತೆಯ ಸರ್ವೋಚ್ಚ ಸಾರ್ವಭೌಮತೆ ನಮ್ಮ ಗಣತಂತ್ರದ ಕೇಂದ್ರಬಿಂದು ಎಂದು ಭಾರತೀಯ ಸಂವಿಧಾನ ವಿಧಿಸುತ್ತದೆ. ಇದನ್ನು ಸಂಸತ್ತಿಗೆ ಜನತೆ ಚುನಾಯಿಸಿ ಕಳಿಸಿರುವ ಪ್ರತಿನಿಧಿಗಳ ಮೂಲಕ ಚಲಾಯಿಸಲಾಗುತ್ತದೆ. ಸರಕಾರ ಸಂಸತ್ತಿಗೆ ಉತ್ತರದಾಯಿಯಾಗಿದೆ, ಮತ್ತು ಸಂಸತ್ತು ಜನತೆಗೆ. ಇದು ನಮ್ಮ ಸಂವಿಧಾನಿಕ ವ್ಯವಸ್ಥೆಯಲ್ಲಿ ಜನತೆಯ ಸಾರ್ವಭೌಮತೆಯನ್ನು ಚಲಾಯಿಸುವ ವ್ಯವಸ್ಥೆ.

ಈ ಸರಪಣಿಯ ಕೊಂಡಿಯನ್ನು ಎಲ್ಲಾದರೂ ಮುರಿದರೆ ಸಂವಿಧಾನವನ್ನೇ ಉಲ್ಲಂಘಿಸಿದಂತಾಗುತ್ತದೆ. ಈಗ ಸಂಸತ್ತನ್ನು ಅಸ್ತವ್ಯಸ್ತಗೊಳಿಸಿ ಮಾಡಲಾಗುತ್ತಿರುವುದು ಆದನ್ನೇ-ಆಮೂಲಕ ಸರಕಾರ ತನ್ನ ಜವಾಬುದಾರಿಕೆಯಿಂದ ಜಾರಿಕೊಳ್ಳಲು ಅವಕಾಶವಾಗುತ್ತಿದೆ. ಸದ್ಯಕ್ಕೆ ಎದ್ದಿರುವ ಪ್ರಶ್ನೆ ಕಲ್ಲಿದ್ದಲು ಬ್ಲಾಕುಗಳ ಹಂಚಿಕೆಯ ಹಗರಣದ್ದು. ಈ ಆಪಾದನೆಗಳ ತನಿಖೆ ನಡೆಸುವಂತೆ ಸುಪ್ರಿಂ ಕೋರ್ಟ್ ಆದೇಶದಂತೆ ನಡೆಯುತ್ತಿರುವ ಸಿಬಿಐ ತನಿಖೆಯ ಮೇಲೆ ಪ್ರಭಾವ ಬೀರಲು ಕೇಂದ್ರ ಕಾನೂನು ಮಂತ್ರಿಗಳು ಪ್ರಯತ್ನಿಸಿದ್ದಾರೆಂಬ ಮಾಧ್ಯಮ ವರದಿಗಳನ್ನು ಅನುಸರಿಸಿ ಪ್ರತಿಪಕ್ಷಗಳಿಗೆ ಸರಕಾರದಿಂದ ವಿವರಣೆ ಕೇಳುವ ಹಕ್ಕು ಇದೆ. ಸರಕಾರ ಇದುವರೆಗೆ ಇದರಿಂದ ತಪ್ಪಿಸಿಕೊಂಡಿದೆ. ಪ್ರಧಾನ ಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಸಂಸತ್ತಿನ ಎರಡೂ ಸದನಗಳಲ್ಲಿ ತಮ್ಮ ನಿಲುವು ಕುರಿತಂತೆ ಹೇಳಿಕೆಗಳನ್ನು ಹೇಳಬೇಕು, ಅದನ್ನು ಅನುಸರಿಸಿ ಚರ್ಚೆಗಳು ನಡೆಯುವ ಮೂಲಕ ಸರಕಾರ ಉತ್ತರದಾಯಿಯಾಗಬೇಕು ಎಂಬುದು ಎಡಪಕ್ಷಗಳು ಮಾಡುತ್ತಿರುವ ಆಗ್ರಹ. ಪ್ರಧಾನ ಪ್ರತಿಪಕ್ಷ ಬಿಜೆಪಿ ಆರಂಭದಲ್ಲಿ ಈ ನಿಲುವನ್ನು ಒಪ್ಪಿದ್ದರೂ, ನಂತರ, ಅವರಿಬ್ಬರೂ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ತನ್ನ ಪಣವನ್ನು ಹೆಚ್ಚಿಸಿತು. ಇದು ಮತ್ತು ಸರಕಾರದ ಹಟಮಾರಿತನ ಸೇರಿಕೊಂಡು ಪ್ರಸಕ್ತ ಇಕ್ಕಟ್ಟು ಉಂಟಾಗಿದೆ.

ಇದರಲ್ಲಿ ಸ್ವಲ್ಪ ಮಟ್ಟಿನ 'ಮ್ಯಾಚ್ ಫಿಕ್ಸಿಂಗ್' ಕೂಡಾ ಇರಬಹುದು. ಏಕೆಂದರೆ ಕಲ್ಲಿದ್ದಲು ಬ್ಲಾಕುಗಳ ಹಂಚಿಕೆಯ ಕೆಲವು ಭಾಗ ಎನ್‌ಡಿಎ ಸರಕಾರದ ಅವಧಿಗೂ ವ್ಯಾಪಿಸಿದೆ.



ಇದು ಕೇವಲ ಸಂದೇಹವಲ್ಲ ಎಂಬುದಕ್ಕೆ ಈ ವಾರ ಕಲ್ಲಿದ್ದಲು ಇಲಾಖೆ ಕುರಿತ ಸಂಸತ್ತಿನ ಸ್ಥಾಯೀ ಸಮಿತಿ ಸಲ್ಲಿಸಿದ ವರದಿಯಲ್ಲಿ ಅನುಮೋದನೆ ಕಾಣ ಬಂದಿದೆ. ಒಬ್ಬ ಪ್ರಮುಖ ತೃಣಮೂಲ ಕಾಂಗ್ರೆಸ್ ಸಂಸತ್ ಸದಸ್ಯರ ಅಧ್ಯಕ್ಷತೆಯ ಈ ಸ್ಥಾಯೀ ಸಮಿತಿಯ ವರದಿ ಕಲ್ಲಿದ್ದಲು ಬ್ಲಾಕುಗಳ ಹಂಚಿಕೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಅವಧಿಯಲ್ಲೂ ಸೇರಿದಂತೆ ನಡೆಸಿರುವ ಎಲ್ಲ ವ್ಯವಹಾರಗಳು-ಅವ್ಯವಹಾರಗಳ ವಿವರವಾದ ದಾಖಲೆಗಳನ್ನು ಕೊಟ್ಟಿದೆ. ಪ್ರಾಸಂಗಿಕವಾಗಿ ಹೇಳುವುದಾದರೆ, ವಾಜಪೇಯಿ ಸರಕಾರದಲ್ಲಿ ಸ್ವಲ್ಪ ಕಾಲ ತೃಣಮೂಲ ಕಾಂಗ್ರೆಸಿನ ಮುಖ್ಯಸ್ಥರೇ ಕಲ್ಲಿದ್ದಲು ಮಂತ್ರಿಯಾಗಿದ್ದರು. ಹೀಗೆ ತೃಣಮೂಲ ಕಾಂಗ್ರೆಸಿನ ಎಂ.ಪಿ.ಯ ಅಧ್ಯಕ್ಷತೆಯ ಸಮಿತಿಯೊಂದು ಪಕ್ಷದ ಮುಖ್ಯಸ್ಥರನ್ನೇ ಆಪಾದಿತರಾಗಿಸಿದೆ! ಅದೇನೇ ಇರಲಿ, ಸರಕಾರ ಈ ಪ್ರಶ್ನೆಯ ಮೇಲಿನ ತನಿಖೆಗಳಲ್ಲಿ ಸಿಬಿಐ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ ಎಂಬ ಬಗ್ಗೆ ಸ್ಪಷ್ಟೀಕರಿಸುವಂತೆ ಬಲವಂತ ಮಾಡಬೇಕಾಗಿದೆ. ಸರಕಾರ ತನ್ನ ರಾಜಕೀಯ ಗುರಿಗಳನ್ನು ಈಡೇರಿಸಿಕೊಳ್ಳಲು, ಅದರಲ್ಲೂ ತನ್ನ ಅಲ್ಪಮತದ ಸರಕಾರವನ್ನು ಉಳಿಸಿಕೊಳ್ಳಲು ಸಿಬಿಐ ಯನ್ನು ಬಳಸಿರುವ ಬಹಳಷ್ಟು ಆಪಾದನೆಗಳಿರುವಾಗ ಇದು ಇನ್ನಷ್ಟು ಅಗತ್ಯ.

ಜವಾಬುದಾರಿಕೆಯಿಂದ ಜಾರಿಕೊಳ್ಳಲು

ಆದರೆ ಈ ಸರಕಾರ ತನ್ನ ಜವಾಬುದಾರಿಕೆಯಿಂದ ತಪ್ಪಿಸಿಕೊಳ್ಳುತ್ತಿದೆ ಎಂಬುದನ್ನು 2ಜಿ ತರಂಗಾಂತರ ಹಂಚಿಕೆಯ ಹಗರಣ ಕುರಿತ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯ ಅಧ್ಯಕ್ಷರು ಅದರ ವರದಿಯನ್ನು ಏಕಪಕ್ಷೀಯವಾಗಿ ತಯಾರಿಸಿ ಹಂಚಿರುವ ರೀತಿ ಮತ್ತೊಮ್ಮೆ ಪ್ರದರ್ಶಿಸಿದೆ. ಈ ವರದಿ ಸಂಪೂರ್ಣವಾಗಿ ಒಂದು ಮುಚ್ಚಿ ಹಾಕುವ ಕಾರ್ಯಾಚರಣೆಯಾಗಿದೆ, ಹಗರಣ ಅನಾವರಣಗೊಳ್ಳುತ್ತಿದ್ದಾಗಿನ ವಿಷಯಗಳಲ್ಲಿ ಯಾವುದರಲ್ಲೂ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳ ಪಾತ್ರ ಏನೇನೂ ಇಲ್ಲ ಎಂದು ಅವರಿಬ್ಬರನ್ನೂ ಸಂಪೂರ್ಣವಾಗಿ ಹೊಣೆಮುಕ್ತಗೊಳಿಸಿದೆ. ಮಾಜಿ ದೂರಸಂಪರ್ಕ ಮಂತ್ರಿ ಎ.ರಾಜ ಅವರು ಮಾತ್ರವೇ, ದೇಶದ ಖಜಾನೆಗೆ 1.76ಲಕ್ಷ ಕೋಟಿ ರೂ.ಗಳಷ್ಟು ನಷ್ಟ ಉಂಟು ಮಾಡಿರಬೇಕು ಎಂದು ಮಹಾಲೆಕ್ಕಪರಿಶೋಧಕರು(ಸಿಎಜಿ) ಅಂದಾಜಿಸಿರುವ ಎಲ್ಲ ಅವ್ಯವಹಾರಗಳನ್ನು ನಡೆಸಿರುವುದು ಎಂದು ಅದು ಆಪಾದಿಸಿದೆ. ಡಿಎಂಕೆ ಈ ಸರಕಾರದಿಂದ ಹೊರಬಂದಿರುವುದರಿಂದ ಮತ್ತು ಮೈತ್ರಿಕೂಟದಿಂದಲೂ ಹೊರಬಂದಿರುವುದರಿಂದ ಧೈರ್ಯ ತುಂಬಿಕೊಂಡ ಕಾಂಗ್ರೆಸ್ ಪಕ್ಷ ತಮ್ಮನ್ನು ರಕ್ಷಿಸಿಕೊಳ್ಳಲು ಡಿಎಂಕೆ ಯ ರಾಜ ಅವರನ್ನು ಬಳಸಿಕೊಂಡಿರುವಂತೆ, ಅದಕ್ಕಾಗಿ ಅವರೊಬ್ಬರೇ ಅಪರಾಧಿ ಎಂದು ತೋರಿಸಿರುವಂತೆ ಕಾಣುತ್ತದೆ.

ಈ ಹಗರಣ ಪ್ರಧಾನ ಮಂತ್ರಿಗಳು, ಹಣಕಾಸು ಮಂತ್ರಿಗಳು ಮತ್ತು ಆಗಿನ ದೂರಸಂಪರ್ಕ ಮಂತ್ರಿಗಳ ಒಂದು ಸಾಮೂಹಿಕ ನಿರ್ಣಯದ ಫಲಿತಾಂಶ ಎಂಬುದು ಜೆಪಿಸಿಯ ಕಲಾಪಗಳಿಂದ ಸ್ಪಷ್ಟವಾಗುತ್ತದೆ. ಹೀಗೆ ಈ ಮಹಾ ಹಗರಣಕ್ಕೆ ಯುಪಿಎ-2 ಸರಕಾರ ಸಾಮೂಹಿಕವಾಗಿ ಹೊಣೆಯಾಗಿದೆ.

ಸಂಸದೀಯೇತರ ಹೋರಾಟ

ಅಲ್ಲದೆ ಈ ವರದಿಯನ್ನು ಅದು ಜೆಪಿಸಿ ಸದಸ್ಯರಿಗೆ ತಲುಪುವ ಮೊದಲೇ ಮಾಧ್ಯಮಗಳಿಗೆ ಸೋರಿ ಹೋಗಲು ಬಿಡಲಾಗಿದೆ. ಇದು ಸಂಸದೀಯ ವಿಶೇಷಾಧಿಕಾರಗಳ ಉಲ್ಲಂಘನೆಯಾಗಿ ಪರಿಗಣಿಸಬೇಕಾದ ಗಂಭೀರ ಸಂಗತಿ. ಯಾವುದೇ ಸಂಸದೀಯ ಸಮಿತಿಯ ಚರ್ಚೆಗಳ ಅಥವ ವರದಿಯ ಅಂಶಗಳನ್ನು ಸಂಸತ್ತಿನಲ್ಲಿ ಮಂಡಿಸುವ ಮೊದಲು ಹೊರಗೆ ತಿಳಿಸುವಂತಿಲ್ಲ. ಇಲ್ಲಿ ಈ ಸಂಪ್ರದಾಯವನ್ನು ಉಲ್ಲಂಘಿಸಲಾಗಿದೆ. ಇದು ಕೂಡ ಎರಡೂ ಸದನಗಳಲ್ಲಿ ವಿವಾದದ ಇನ್ನೊಂದು ಪ್ರಶ್ನೆಯಾಗಲಿದೆ.

ಸಂಸತ್ತಿನ ಕಲಾಪಗಳು ಈ ರೀತಿ ಅಸ್ತವ್ಯಸ್ತಗೊಳ್ಳುತ್ತಿರುವುದು ಅತ್ಯಂತ ದುರದೃಷ್ಟಕರ. ದೇಶದ ಬಹುಪಾಲು ಜನರ ಬದುಕನ್ನು ಬಾಧಿಸುತ್ತಿರುವ ಹಲವಾರು ಪ್ರಶ್ನೆಗಳನ್ನು ಸಂಸತ್ತಿನಲ್ಲಿ ಎತ್ತಿಕೊಳ್ಳಬೇಕಾಗಿದೆ ಮತ್ತು ಸರಕಾರವನ್ನು ಹೊಣೆ ಮಾಡಬೇಕಾಗಿದೆ ಹಾಗೂ ಜನಗಳಿಗೆ ಪರಿಹಾರ ಒದಗಿಸಲು ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಡ ತರಬೇಕಾಗಿದೆ.

ಸಾರ್ವಜನಿಕ ಮಹತ್ವದ ಮತ್ತು ಜನಗಳ ಬದುಕಿನ ಪ್ರಶ್ನೆಗಳತ್ತ ದೇಶದ ಮತ್ತು ಸರಕಾರದ ಗಮನವನ್ನು ಸೆಳೆಯುವ ಸಂಸದೀಯ ವೇದಿಕೆ ಅಸ್ತವ್ಯಸ್ತಗೊಂಡಾಗ, ಜನತಾ ಹೋರಾಟಗಳ ಸಂಸದೀಯೇತರ ಸ್ವರೂಪಗಳು ಮಾತ್ರವೇ ಸರಕಾರ ನಮ್ಮ ದೇಶದ ಬಹುಪಾಲು ಜನಗಳ ಹಿತಗಳನ್ನು ರಕ್ಷಿಸಲು ಸರಕಾರ ಕ್ರಿಯೆಗಿಳಿಯುವಂತೆ ಬಲವಂತ ಮಾಡಲು ಉಳಿಯುತ್ತವೆ. ಇವನ್ನು ಮುಂಬರುವ ದಿನಗಳಲ್ಲಿ ಬಲಪಡಿಸಬೇಕಷ್ಟೇ ಅಲ್ಲ, ಇನ್ನೊಂದು ವಿಧದಲ್ಲೂ ಜನತೆಯ ಜಾಗರೂಕತೆಯನ್ನು ಎತ್ತರಿಸುವ ಅಗತ್ಯವಿದೆ.

ಕಟ್ಟೆಚ್ಚರ ಅಗತ್ಯ

ಸಂಸತ್ತು ಈ ರೀತಿ ಕ್ರಿಯಾಹೀನವಾಗಿ ಉಳಿದಿರುವಾಗ ಸರಕಾರ ಜವಾಬುದಾರಿಕೆಯಿಂದ ತಪ್ಪಿಸಿಕೊಳ್ಳಬಹುದಷ್ಟೇ ಅಲ್ಲ, ಸಂಸತ್ತಿನ ಪರೀಕ್ಷಣೆ ಇಲ್ಲದೆಯೇ ಹತ್ತು ಹಲವು ಧೋರಣೆಯ ನಿರ್ಧಾರಗಳನ್ನು ಜಾರಿಗೊಳಿಸಲು ಅದು ಪ್ರಯತ್ನಿಸುತ್ತದೆ. ಇದು ಕೂಡ ಬಹಳ ಅಪಾಯಕಾರಿ. ಸಂಸತ್ತಿನ ಮುಂದೆ ಪರೀಕ್ಷಣೆಗಾಗಿ ಇರುವ ಎಲ್ಲ ನವ-ಉದಾರವಾದಿ ಸುಧಾರಣೆಗಳಿಗೆ ಸಂಬಂಧಪಟ್ಟ ಧೋರಣೆಯ ನಿರ್ಧಾರಗಳನ್ನು ಕಾರ್ಯಾಂಗದ ನಿರ್ಣಯಗಳೆಂದು ಕಳ್ಳತನದಿಂದ ಮಾಡಿ ಬಿಡುವ ಪ್ರಯತ್ನ ನಡೆಸಲೂ ಬಹುದು. ಇದಕ್ಕೆ ಕೂಡ ಅವಕಾಶ ಕೊಡಬಾರದು. ಈ ಸರಕಾರ ಹಣಕಾಸು ವಲಯದಲ್ಲಿ ಇನ್ನಷ್ಟು ನವ-ಉದಾರವಾದಿ ಸುಧಾರಣೆಗಳನ್ನು ನುಗ್ಗಿಸಲು ತಯಾರಾಗಿ ಕೂತಿದೆ; ವಿದೇಶಿ ನೇರ ಹೂಡಿಕೆಗಳಿಗೆ ಹೊಸ-ಹೊಸ ಕ್ಷೇತ್ರಗಳನ್ನು ಒದಗಿಸಲು ಯುರೋಪಿಯನ್ ಒಕ್ಕೂಟದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ) ದಂತಹ ಸಾಧನಗಳನ್ನು ನಿರ್ಮಿಸುತ್ತಿದೆ ಮತ್ತು ಈಗಾಗಲೇ ಅಲ್ಪ ಪ್ರಮಾಣದಲ್ಲಿರುವ ಬಡವರಿಗೆ ಕೊಡುವ ಸಬ್ಸಿಡಿಗಳಲ್ಲಿ ಇನ್ನಷ್ಟು ಕಡಿತ ತರುವ ಯೋಚನೆಯಲ್ಲಿದೆ. ಇಂತಹ ಎಲ್ಲ ಪ್ರಶ್ನೆಗಳ ಬಗ್ಗೆ ಅತ್ಯಂತ ಜಾಗರೂಕರಾಗಿರಬೇಕು.

ಇಂತಹ ಸನ್ನಿವೇಶದಲ್ಲಿ ನಮ್ಮ ದೇಶದಲ್ಲಿ

ಪುಟ 10 ಕ್ಕೆ

ಬಿಜೆಪಿಯ ಬದಲಿಗೆ ಬೇಕೇ ಇಂತಹ ಕಾಂಗ್ರೆಸ್ ಸರಕಾರ?

-ಎಸ್.ವೈ.ಗುರುಶಾಂತ್

ಚುನಾವಣೆಗೆ ಇಳಿದಿರುವ ಬಹುತೇಕ ಪಕ್ಷಗಳು ಬೇಕೋ ಬೇಡವೋ ಅಂತೂ ತಮ್ಮದೂ ಅಂತಾ ಒಂದು ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡೋದು ರೂಢಿಯಾಗಿದೆ. ಪ್ರಮುಖ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಬಿಡುಗಡೆ ಮಾಡಿರುವ ಪ್ರಣಾಳಿಕೆಗಳನ್ನೇ ಗಮನಿಸಬಹುದು. ಅವು ತಾವೇ ಹೇಳಿಕೊಂಡಂತೆ ಒಬ್ಬರಿಗೆ ಇನ್ನೊಬ್ಬರು ಪರ್ಯಾಯವೆಂದೇ ಬಾಯಿ ಮಾತಿನಲ್ಲಿ ಹೇಳುತ್ತವೆ. ಆದರೆ ಅವುಗಳ ಪ್ರಣಾಳಿಕೆಗಳನ್ನು ಪರಿಶೀಲಿಸಿದರೆ ಹಾಗೆನ್ನಿಸುವುದೇ ಇಲ್ಲ. ಕೆಲವು ಸ್ಕೀಮು, ಜಾರಿಗೆ ಬದ್ಧತೆ ಇಲ್ಲದ ಕೆಲ ಭರವಸೆಗಳನ್ನು ಬಿಟ್ಟರೆ ಹೇಳಿಕೊಳ್ಳುವ ಅಂಶಗಳೇನೂ ಇಲ್ಲ. ಇಬ್ಬರಲ್ಲಿ ಕಂಡು ಬರುವ ಸಮಾನ ಅಂಶಗಳೆಂದರೆ ಉದಾರೀಕರಣದ ಹಾದಿಯನ್ನು ಎಳ್ಳಷ್ಟೂ ಬಿಡಲಾರೆವು ಎಂಬುದು. ಮತ್ತೊಂದೆಂದರೆ ತಾವೇ ಅಧಿಕಾರಕ್ಕೆ ಬರುವುದಾಗಿ ಭ್ರಮೆ ಇರಿಸಿಕೊಂಡೇ ಉದ್ದುದ್ದ ಮಾತನಾಡುತ್ತಿರುವುದು.

ರಾಜ್ಯದಲ್ಲಿ ಹಾಲೀ ಅಧಿಕಾರ ನಡೆಸಿದ ಬಿಜೆಪಿಯ ದುರಾಡಳಿತದ ವಿರುದ್ಧ ಜನತೆಯಲ್ಲಿ ತೀವ್ರ ಅತೃಪ್ತಿ ಕಾಣುತ್ತಿದೆ. ಅದನ್ನು ನಿಭಾಯಿಸಲು ಹಲವು ಕಸರತ್ತುಗಳೂ ನಡೆದಿವೆ. ಆದರೆ ಪರ್ಯಾಯವೇನು? ಇಲ್ಲಿ ಬಿಜೆಪಿಗೆ ಕಾಂಗ್ರೆಸ್ಸೇ ಪರ್ಯಾಯವೆಂಬ ನಂಬಿಕೆಯಲ್ಲಿ ನಮ್ಮ ಕನ್ನಡ ನಾಡಿನ ಹಲವಾರು ಪ್ರಗತಿಪರ ಚಿಂತಕರು ಅದರ ವೇದಿಕೆಯನ್ನೇರಿದ್ದಾರೆ. ಕೊರಳಿಗೆ 'ಕೈ ಮಾಲೆ' ಹಾಕಿ ಕುಳಿತಿರುವುದಂತೂ ಅಭಾಸಕಾರಿಯಾಗಿ ಎದ್ದು ಕಾಣುತ್ತದೆ. ಬಿಜೆಪಿ -ಸಂಘಪರಿವಾರದ ಕೋಮುವಾದದ ವಿರುದ್ಧ ಸತತ ಪ್ರತಿರೋಧ, ಪ್ರತಿಭಟನೆ ಮಾಡುತ್ತಲೇ ಬಂದ ಚಿಂತಕರಾದ ಪ್ರೊ.ಜಿ.ಕೆ.ಗೋವಿಂದ ರಾವ್‌ರು, ಡಾ.ಕೆ.ಮರುಳಸಿದ್ಧಪ್ಪನವರು, ಪ್ರೊ. ಹೆಚ್..ಜಿ.ಸಿದ್ಧರಾಮಯ್ಯ ಮುಂತಾದವರು ಕಾಂಗ್ರೆಸ್ ಪಕ್ಷವೇ ಕೋಮುವಾದದ ವಿರುದ್ಧ ಧೃಡವಾಗಿ ಮಾತೇ ಆಡದಿರುವಾಗ ಅದಕ್ಕೆ ಮಾನ ತರುವ ಆ ಒಂದು ಅಜೆಂಡಾಕ್ಕಾಗಿ ಪ್ರಚಾರಕ್ಕಿಳಿದಿದ್ದಾರೆ. ಬಿಜೆಪಿಯನ್ನೆದುರಿಸಲು ಪ್ರಾದೇಶಿಕ ಶಕ್ತಿಯೊಂದರ ಹುಟ್ಟಿನ ನಿರೀಕ್ಷೆಯಲ್ಲಿ ಪ್ರೊ.ಚಂಪಾರವರದ್ದು ಇನ್ನೊಂದು ಬಗೆಯ ಹೋರಾಟ.

ಕೋಮುವಾದದ ವಿರೋದಿಯೆ?

ಬಿಜೆಪಿಯ ಒಟ್ಟು ದುರಾಡಳಿತ, ಫ್ಯಾಶಿಸ್ಟ್ ಮಾದರಿಯ ಕೋಮುವಾದೀ ಆಕ್ರಮಣಗಳಿಂದ ಪಾರಾಗಲು ತತಕ್ಷಣದಲ್ಲಿ ಒಂದು ಹಾದಿ ಬೇಕೆನ್ನಿಸುವುದು ಅಸಹಜವೇನಲ್ಲ. ಆದರೆ ಇದು ನಿಜಕ್ಕೂ ಕಾಂಗ್ರೆಸ್ನಿಂದ ಸಾಧಿಸಲಾದೀತೆ? ಈ ಸರಕಾರ ಮತ್ತು ಪರಿವಾರ ಮಾಡಿದ ವಿಧ್ವಂಸಕತನವನ್ನು ಕೋಮುವಾದೀ ವಿಷವನ್ನು ತೆಗೆದು, ನಿಜಕ್ಕೂ ಸೆಕ್ಯುಲರ್ ಮೌಲ್ಯಗಳನ್ನು ಪುನರ್ ಸ್ಥಾಪಿಸಬಲ್ಲುದೇ? ಅದೂ ಕಳೆದ ಐದು ವರುಷಗಳಲ್ಲಿ ಏನೊಂದೂ ಪ್ರಬಲ ಧ್ವನಿಯನ್ನೇ ಎತ್ತದ ಮೌನ ಸಮ್ಮತಿ ತೋರಿದ ಕಾಂಗ್ರೆಸ್ ಹಾಗೆ ಮಾಡೀತೇ? ಇದು ಮುಂದಿನ ಪ್ರಶ್ನೆ ಎಂದು ಹೇಳಿದರೂ ಹಿಂದೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಮಾಡಿದ್ದ ಅನಾಹುತಗಳನ್ನು, ಕೋಮುವಾದದ ವಿಷವನ್ನು ಕನಿಷ್ಠ ಪಠ್ಯ ಪುಸ್ತಕಗಳಿಂದಲಾದರೂ ತೆಗೆಯುವ ಕನಿಷ್ಟ ಒಂದೇ ಪ್ರಯತ್ನವನ್ನು ನಂತರ ಬಂದ ಯು.ಪಿ.ಎ.-1 ಮತ್ತು 2 ಸರಕಾರಗಳು ಮಾಡಲೇ ಇಲ್ಲ. ಅದರಲ್ಲೂ ಬಾಹ್ಯ ಬೆಂಬಲ ನೀಡಿ ಯು.ಪಿ.ಎ.-1 ಸರಕಾರ ರಚನೆಗೆ ಕಾರಣವಾಗಿದ್ದ ಎಡ ಪಕ್ಷಗಳ ಸತತ ಒತ್ತಾಯ, ಆಗ್ರಹಗಳು, ಒತ್ತಡಗಳು ಇದ್ದಾಗ್ಯೂ ದರ್ಕಾರವನ್ನೇ ಮಾಡಲಿಲ್ಲ. ಅದು ಜನಾದೇಶದಂತೆ ಕೋಮುವಾದವನ್ನೆದುರಿಸಲು ಮುಖಾಮುಖಿಯಾಗಲೇ ಇಲ್ಲ. ಅಂದರೆ ಅನುಭವ ತೋರಿಸುವುದು ಕಾಂಗ್ರೆಸ್ ಪಕ್ಷವು ಈ ಕಾಲಮಾನದಲ್ಲಿ ಕೋಮುವಾದದ ವಿರೋಧಿಯಾಗಿರುತ್ತದೆ ಎಂಬುದೇ ದೊಡ್ಡ ಭ್ರಮೆ.



ಉದಾರೀಕರಣದ ನೀತಿಗಳ ಪರಿಣಾಮ ರೈತ ಕುಟುಂಬದ ಆತ್ಮಹತ್ಯೆ ಮಾಲೂರು -2004

ಇನ್ನು ಜ್ಞಾನಪೀಠ ಪುರಸ್ಕೃತರಾದ ಡಾ. ಯು.ಆರ್.ಅನಂತಮೂರ್ತಿಯವರಂತೂ ಒಂದು ಹೆಜ್ಜೆ ಮುಂದೆ ಹೋಗಿ ಸುಭದ್ರ ಸರಕಾರವನ್ನು, ಅಭಿವೃದ್ಧಿ ಸಾಧಿಸಲು ಅಗತ್ಯವೆಂದೂ ನುಡಿದಿದ್ದಾರೆ. ಇದರಲ್ಲಿ ಹೊಸತೇನಿಲ್ಲ. ಸಮಿಶ್ರ ಸರಕಾರ ಅಭಿವೃದ್ಧಿಗೆ ಅಡ್ಡಿಯೆಂದೂ, ಕಾಂಗ್ರೆಸ್ ಪೂರ್ಣ ಬಹುಮತ ಪಡೆದರೆ ಅಭಿವೃದ್ಧಿ ಸಾಧ್ಯವೆಂಬ ಆಕರ್ಷಕ ವಾದಗಳು ಸುಲಭವಾಗಿ ಜನರನ್ನು ಬಲಿ ಹಾಕುತ್ತಿರುವುದೂ ವಾಸ್ತವವೇ!

ಹೈಟೆಕ್ ಆಡಳಿತದ ಉರುಳಿನಲ್ಲಿ ನರಳಿದ್ದ ಕರ್ನಾಟಕ

ಇಂತಹ ಸನ್ನಿವೇಶದಲ್ಲಿ ಬಿಜೆಪಿಗೆ ಕಾಂಗ್ರೆಸ್ ಪಕ್ಷವು ಪರ್ಯಾಯವೇ ಎನ್ನುವುದರತ್ತ ನಮ್ಮ ಜನತೆಯ ಅನುಭವಗಳು ಏನು ಎಂಬುದನ್ನು ಪರಿಶೀಲಿಸುವುದು ಅತ್ಯಗತ್ಯ. ಇದಕ್ಕಾಗಿ ನಾವು ಬಹು ದೂರ ಹೋಗಬೇಕಿಲ್ಲ. ಇಂದಿನ ಬಿಜೆಪಿ ಅಧಿಕಾರಕ್ಕೆ ಬಂದ ಒಟ್ಟು ರಾಜಕೀಯ, ಆರ್ಥಿಕ ಪ್ರಕ್ರಿಯೆಗಳನ್ನು ಗಮನಿಸಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಎಸ್.ಎಂ.ಕೃಷ್ಣರ ಹೈಟೆಕ್ ಆಡಳಿತವೇ ಮಾದರಿಯೆಂದೆಲ್ಲಾ ಪ್ರಚಾರಿಸಲಾಗುತ್ತಿದೆ.



ಹಿಂದೆ 1999 ರ ಅವಧಿಯಲ್ಲಿ ರಾಜ್ಯದಲ್ಲಿದ್ದ ಜನತಾದಳದ ಸರಕಾರದ ಉದಾರೀಕರಣದ ಆರ್ಥಿಕ ನೀತಿಗಳ ಜಾರಿ, ಇದರಿಂದ ಜನರಲ್ಲಿ ಬೆಳೆದ ಅತೃಪ್ತಿ, ದಳದೊಳಗಾದ ಕಿತ್ತಾಟ ವಿಭಜನೆಗಳು ಅಂತಿಮವಾಗಿ ಸಮಾಜವಾದೀ ಜೆ.ಹೆಚ್.ಪಟೇಲ್ ನೇತೃತ್ವದ ಬಣ ಬಿಜೆಪಿಯನ್ನು ಕ್ಯಾನ್ಸರ್ ಎಂದು ಕರೆದ ಮರು ದಿನವೇ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡದ್ದು ಮುಂದೆ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಲ್ಲಿ ಸಹಾಯಕವಾಗಿತ್ತು.

ಆದರೆ ರಾಜ್ಯದಲ್ಲಿ ಸನ್ನಿವೇಶ ಬಳಸಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು. ಆಡಳಿತದ ಚುಕ್ಕಾಣಿ ಹಿಡಿದ ಕೃಷ್ಣರ ಸರಕಾರ ಇಡೀ ಅವಧಿಯ ಉದ್ದಕ್ಕೂ ನಾಡನ್ನು ದಿವಾಳಿಯೆಬ್ಬಿಸಿದ ಉದಾರೀಕರಣ ಜಾಗತೀಕರಣದ ಆರ್ಥಿಕ ನೀತಿಗಳನ್ನು ಅತ್ಯಂತ ಭರದಲ್ಲಿ ಜಾರಿಗೊಳಿಸಿದರು. ತನ್ನದು ಹೈಟೆಕ್ ಆಡಳಿತವೆಂದು ಫೋಜು ಕೊಡಲು ಕೃಷ್ಣ ಹೆಣಗುತ್ತಲೇ ಇದ್ದರು. ಅಂತಹುದೇ ನೀತಿಗಳನ್ನು ಅನುಸರಿಸುತ್ತಿದ್ದ ತೆಲುಗು ದೇಶಂ ನ ಚಂದ್ರಬಾಬು ನಾಯ್ಡುವನ್ನು ಸ್ಪರ್ಧಿಯನ್ನಾಗಿ ಪರಿಗಣಿಸಿ ವಿದೇಶಿ-ಸ್ವದೇಶಿ ಬಂಡವಾಳಗಾರರನ್ನು ಕರ್ನಾಟಕದತ್ತ ಸೆಳೆಯಲು ಹಲವಾರು ಕಸರತ್ತುಗಳನ್ನು ಮಾಡಿದರು. ಅಭಿವೃದ್ಧಿಯ ಹೆಸರಿನಲ್ಲಿ ಕಾಂಗ್ರೆಸ್ ಸರಕಾರ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಾದ ವಿಶ್ವ ಬ್ಯಾಂಕ್, ಐ.ಎಂ.ಎಫ್, ಏಶಿಯನ್ ಡೆವೆಲಪ್‌ಮೆಂಟ್ ಬ್ಯಾಂಕ್ ಅಲ್ಲದೇ ಹಲವಾರು ಯುರೋಪ್ ಸಂಸ್ಥೆಗಳಿಂದ ಅಪಾರ ಪ್ರಮಾಣದಲ್ಲಿ ಶರತ್ತುಗಳ ಸಾಲವನ್ನು ಎತ್ತಿದರು. ರಸ್ತೆ, ಕೆರೆ, ಗ್ರಾಮೀಣ ನೀರು, ನೀರಾವರಿ, ವಿದ್ಯುತ್ ಮುಂತಾದ ರಂಗಗಳ ಅಭಿವೃದ್ಧಿಗೆಂದು ಕೇವಲ ಮೂರು ವರುಷದಲ್ಲೇ 25000 ಕೋಟಿ ರೂಪಾಯಿಗಳಿಗೂ ಅಧಿಕ ಸಾಲವನ್ನು ಪಡೆದುಕೊಂಡರು. ಈ ಸಾಲ ನೀಡಿದ ಈ ಸಂಸ್ಥೆಗಳು ವಿಧಿಸಿದ ಕಠಿಣ ಶರತ್ತುಗಳ ಜಾರಿಯಿಂದಾಗಿ ಪ್ರತಿಯೊಂದು ನಾಗರೀಕ ಸೌಲಭ್ಯಗಳ ಧರಗಳು ವಿಪರೀತ ಹೆಚ್ಚಿದವು. ಕುಡಿಯುವ ನೀರು, ರಸ್ತೆಗಳ ನಿರ್ವಹಣೆ, ವಿಶೇಷವಾಗಿ ಇಡೀ ವಿದ್ಯುತ್ ಕ್ಷೇತ್ರ, ಆರೋಗ್ಯ, ಶಿಕ್ಷಣ ರಂಗಗಳ ಖಾಸಗೀಕರಣದತ್ತ ತೀವ್ರ ಕ್ರಮಗಳನ್ನು ಕೈಗೊಳ್ಳಲಾಯಿತು. ಧರಗಳೂ ಹೆಚ್ಚಿದವು. ಪಡಿತರ ವ್ಯವಸ್ಥೆ ನಾಶಕ್ಕೆ ನಾಂದಿ ಹಾಡಲಾಯಿತು. ವಿದ್ಯುತ್ ಕ್ಷೇತ್ರದಲ್ಲಿ ಉತ್ಪಾದನೆ, ವಿತರಣೆಯನ್ನೂ ಸರಕಾರದ ಸಂಸ್ಥೆಗಳಿಂದ ಖಾಸಗಿ ರಂಗ-ಕ್ಕೆ ವರ್ಗಾಯಿಸುವ ದಿಶೆಯಲ್ಲಿ ನಡೆದ ಪ್ರಕ್ರಿಯೆಗಳು ರಾಜ್ಯದಾದ್ಯಂತ ತೀವ್ರ ತಲ್ಲಣಗಳನ್ನು ಹುಟ್ಟು ಹಾಕಿದ್ದು ಮರೆಯಲು ಅಸಾಧ್ಯ. ಸಂಸ್ಥೆಯನ್ನು ವಿಭಜಿಸಲಾಯಿತು, ರೈತರ ಪಂಪ್ ಸೆಟ್ಗಳ ಮೀಟರೀಕರಣ, ವಿದ್ಯುತ್ ಧರಗಳ ಹೆಚ್ಚಳ, ಉತ್ಪಾದನಾ ಹೂಡಿಕೆಗೆ ನಿರಾಕರಣೆ , ಅದರ ಲಕ್ಷಾಂತರ ಕೋಟಿ ರೂ.ಗಳ ಆಸ್ತಿಯಿದ್ದ ಇಡೀ ರಂಗವನ್ನ ಕೇವಲ 2800 ಕೋಟಿರೂ.ಗಳಷ್ಟಕ್ಕೆ ಹರಾಜಿಗಿಟ್ಟಿದ್ದರು. ದೇಶದಲ್ಲಿಯೂ ರಾಜ್ಯದಲ್ಲಿಯೂ ತೀವ್ರಗೊಂಡ ಕಾರ್ಷಿಕ ಬ ಬಿಕ್ಕಟ್ಟಿನಿಂದಾಗಿ ರೈತರು, ಕೃಷಿ ಕೂಲಿಕಾರರು ನಿತ್ಯವೂ ಆತ್ಮಹತ್ಯೆಯ ದಾರಿ ಹಿಡಿದಿರುವಾಗಲೇ ಬರೆ ಎಳೆಯುತ್ತಿದ್ದರೂ ಇವೆಲ್ಲಾವುಗಳನ್ನು ನಿರ್ಲಕ್ಷಿಸಿ ಪರಿಹಾರಕ್ಕಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂಬ ಅಮಾನವೀಯ ಹೇಳಿಕೆ ನೀಡಿದರಲ್ಲದೇ ಅಂತಹುದೇ ಪ್ರೊ.ವೀರೇಶ್ ವರದಿಯನ್ನು ಅಂಗೀಕರಿಸಿ ಅವಮಾನಿಸಿದರು. ವಿಶ್ವ ಬ್ಯಾಂಕ್ ನ ಅಣ-ತಿಯಂತೆ ಹಾರ್ನಳ್ಳಿ ಆಯೋಗ, ಮೊಯ್ಲಿ ಆಯೋಗಗಳ ಮೂಲಕ ಆಡಳಿತದ ಸುಧ-ಾರಣೆ ಹೆಸರಿನಲ್ಲಿ ಇಲಾಖೆಗಳನ್ನು ಮುಚ್ಚಲು ನಿರ್ಧರಿಸಿದರು. ಅಧಿಕೃತವಾಗಿ ಉದ್ಯೋಗ ನೇಮಕಾತಿಯನ್ನು ನಿರ್ಭಂಧಿಸಲಾಯಿತು, ಖಾಲಿ ಇದ್ದ ಹುದ್ದೆಗಳನ್ನು ರದ್ದು ಪಡಿಸಿ ಇಲಾಖೆಗಳನ್ನೇ ಶಾಶ್ವತವಾಗಿ ಮುಚ್ಚಲಾಯಿತು.

ಕಾರ್ಪೋರೇಟ್ ಕಂಪನಿಗಳು ಮತ್ತು ಗಣಿ -ಭೂ ಮಾಫಿಯಾಗಳು

ಬಹಳ ಮುಖ್ಯವಾದ ಸಂಗತಿಯೆಂದರೆ ಇಡೀ ನಾಗರೀಕ ಸರಕಾರವನ್ನು , ಅದರ ಪಾತ್ರವನ್ನು ಮೂಲೆಗೆ ತಳ್ಳಿ ಕಾರ್ಪೋರೇಟ್ ಮಾದರಿಯಲ್ಲಿ ಪುನರ್ ಸಂಘಟಿಸಲು, ತಾನು ಜನರಿಂದ ಚುನಾಯಿತನಾದ ಮುಖ್ಯಮಂತ್ರಿಯೆಂಬುದನ್ನೇ ಕಡೆಗಣಿಸಿ ಸರಕಾರವನ್ನು ಒಂದು ಕಾರ್ಪೋರೇಟ್ ಕಂಪನಿಯೆಂದೂ ತಾನು ಅದರ ಕಾರ್ಯನಿರ್ವಾಹಕ ಅಧಿಕಾರಿಯೆಂದೂ (ಸಿ.ಇ.ಓ) ಬೀಗುತ್ತಿದ್ದರು. ಅಲ್ಲದೇ ಸಂವಿಧಾನ ಬದ್ಧ ಸಚಿವ ಸಂಪುಟದ ಅಧಿಕಾರವನ್ನೂ ಕಡೆಗಣಿಸಿ ಉದ್ಯಮಿಗಳ ನೇತೃತ್ವದ ಟಾಸ್ಕ್ ಫೋರ್ಸ್(ಕಾರ್ಯಪಡೆ)ಗಳ ಮೂಲಕವೇ ಅಧಿಕಾರ ಚಲಾಯಿಸಿದರು.

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೆ.ಆರ್.ಪುರಂ: ರಿಯಲ್ ಎಸ್ಟೇಟ್ ಲಾಬಿಗಳ ನಡುವೆ ದುಡಿಯುವ ಜನರ ಹೋರಾಟ

ಆರ್. ರಾಮಕೃಷ್ಣ

ಏಪ್ರಿಲ್ 23, 2013. ಸಂಜೆ. ಜಾಗ, ಕೆ.ಆರ್. ಪುರಂ ಸಮೀಪದ ಟಿನ್ ಫ್ಯಾಕ್ಟರಿ ಬಸ್ ನಿಲ್ದಾಣ. ಹೆಬ್ಬಾಳದ ಕಡೆಗೆ ಬರಲು ಬಸ್ ಕಾಯುತ್ತಾ ನಿಂತಿದ್ದೆ. ಹತ್ತು ಬಸ್‌ಗಳು ಒಟ್ಟಿಗೆ ಬಂದರೂ ಮುತ್ತಿಗೆ ಹಾಕಿ ಹತ್ತಿಕೊಳ್ಳುವಷ್ಟು ಜನ. ಒಂದು ಎರಡು ಮೂರು ನಾಲ್ಕು ಐದು... ಓಹೋ ಎಷ್ಟೊಂದು ಬಸ್ಸುಗಳು... ಒಹ್ ಇಲ್ಲ. ಅವು ಯಾವುವು ನಮಗಲ್ಲ. ಅವು ಆ ಭಾಗದ ಸಾಫ್ಟ್‌ವೇರ್ ಕಂಪನಿಗಳ ನೌಕರರರನ್ನು ಹೊತ್ತೊಯ್ಯುವ ಐಷಾರಾಮಿ ಬಸ್ಸುಗಳು. ಅರೆ ಇದೇನು ? ಬಸ್ ನಿಲ್ದಾಣಕ್ಕೆ ಬಂದು ನಿಲ್ಲುವ ಬಸ್ಸುಗಳೂ ಅಂಥವೇ. ಎ.ಸಿ. ಬಸ್ಸುಗಳು. 825. ರೂಗಳ ತಿಂಗಳ ಪಾಸಿನವರಿಗೆ ಒಳಗೆ ಜಾಗವಿಲ್ಲ. ಇದು ನಮ್ಮ ಬಸ್ಸುಗಳು ಬೇರೆ ಇವೆ. ಅಗೋ ಅವೂ ಕೊನೆಗೆ ಬರುತ್ತಿವೆ. ಒಂದು ಎರಡು ಮೂರು...ಉಹುಂ. ಆಗಲಿಲ್ಲ. ಅಷ್ಟು ಸುಲಭವಲ್ಲ. ರಟ್ಟೆ ಗಟ್ಟಿ ಇರಬೇಕು. ನುಗ್ಗಿ ಬರುವವರನ್ನು ದಬ್ಬಿ ಮೆಟ್ಟಲ ಮೇಲೆ ಕಾಲೂರಿ ಗಾಳಿಯಲ್ಲಿ ಜೋಲಾಡುತ್ತಾ ತೇಲಾಡುತ್ತಾ...ಆಹಾ ಏನು ಮಜಾ. ಇದೂ ಒಂಥರ ಏಸಿ ಬಸ್ಸೆ.

ಕೆ.ಆರ್.ಪುರ ಹತ್ತು ಹದಿನೈದು ವರ್ಷದ ಹಿಂದೆ ಇದ್ದಂತಿಲ್ಲ. ಬೆಂಗಳೂರು ಕೂಡ ಹಾಗೇ ಅಲ್ಲವೇ ?.

ಈ ಭಾಗದಲ್ಲಿ ಸಣ್ಣ ದೊಡ್ಡ ಮಧ್ಯಮ ಕೈಗಾರಿಕೆಗಳು ಹತ್ತಾರು. ಬೆವರು ಸುರಿಸಿ ದುಡಿಯುವ ಜನ ಸಂಖ್ಯೆ ಜೋರು. ಮನೆ ಬಾಡಿಗೆ ರೇಷನ್ನು ಬಿಲ್ಲು, ಕರೆಂಟ್ ಬಿಲ್ಲು, ಮಕ್ಕಳ ಸ್ಕೂಲು ಫೀಸು ಕಟ್ಟಿಕೊಂಡು ಹೇಗೋ ಉಸಿರಾಡಿಕೊಂಡಿರಲು ಬೇಕಾದದ್ದಕ್ಕೆ ಕಾರ್ಮಿಕರಿಗೆ ತಿಂಗಳಿಗೆ ಹತ್ತು ಸಾವಿರವಾದರೂ ವೇತನ ಕೊಡಿ ಅಂತ ಸಿಐಟಿಯು ಇಲ್ಲಿಯೂ ರಾಜ್ಯಾದ್ಯಂತ ಹೋರಾಟ... ದಶದುದ್ದಗಲ ಚಳುವಳಿ ನಡೆಸಿದ್ದು ಎಲ್ಲರಿಗೂ ಗೊತ್ತಿರುವುದೇ. ಇಂದಿಗೂ ಈ ಭಾಗದಲ್ಲಿ ಸರ್ಕಾರವೇ ನಿಗದಿ ಮಾಡಿದ ಕನಿಷ್ಠ ಕೂಲಿ ಕೊಡದ ಕಾರ್ಖಾನೆಗಳೂ ಇವೆ.

ಒಂದು ಕಾಲಕ್ಕೆ ಸಾವಿರಾರು ಕಾರ್ಮಿಕರ ಕಲರವದ ಕೇಂದ್ರವಾಗಿದ್ದದ್ದು ಈ ಭಾಗದ ಸಾರ್ವಜನಿಕ ಕಾರ್ಖಾನೆ ಐಟಿಐ. ಆಳುವವರ ಜನದ್ರೋಹಿ ನೀತಿಯಿಂದ ಬಹುತೇಕ ಕೊನೆಯುಸಿರೆಳೆಯುತ್ತಿದೆ. ಬಿಇಎಂಎಲ್ ಉಸಿರಾಡುತ್ತಿದೆ. ಎಚ್.ಎ.ಎಲ್. ಹೊಸ ಹೂಡಿಕೆ ಪಡೆದು ಬೆಳೆದಿದೆ. ಆದರೆ ಕಾರ್ಖಾನೆಗಳೊಳಗೆ ಖಾಯಂ ಕೆಲಸಗಾರರಿಗಿಂತ ಗುತ್ತಿಗೆ ಕೆಲಸಗಾರರರೇ ಹೆಚ್ಚು. ಏಜೆಂಟರಿಗೆ ದೊಡ್ಡವರಿಗೆ ಬದುಕೇ ಇಲ್ಲಿ ಗುತ್ತಿಗೆ.

ಇಲ್ಲಿ ಉದ್ದಿಮೆ ನಡೆಸುವ ಎಷ್ಟೋ ಖಾಸಗಿ ಮಾಲೀಕರಲ್ಲಿ ಗೊಂದಲ. ಕಾರ್ಖಾನೆ ನಡೆಸುವುದೋ. ಕಾರ್ಖಾನೆಯ ಕದ ಮುಚ್ಚಿ ಚಿನ್ನದ ಬೆಲೆಯ ನೆಲದ ಮೇಲೆ ರಿಯಲ್ ಎಸ್ಟೇಟು ಕಛೇರಿ ತೆರೆಯುವುದೋ.

ಇಲ್ಲಿಯ ಆಳುವ ವರ್ಗದ ರಾಜಕಾರಣಿಗಳಲ್ಲಿ ಮಾತ್ರ ಯಾವ ಗೊದಲವೂ ಇಲ್ಲ. ಅವರೆಲ್ಲ ಎಂದೋ ಅಪ್ಪಟ 'ಮಣ್ಣಿನ ಮಕ್ಕಳೇ' ಆಗಿ ಬಿಟ್ಟಿದ್ದಾರೆ.

ಇನ್ನೂ ಇಲ್ಲಿ ಕಾರ್ಮಿಕರು ದೊಡ್ಡ ಶಕ್ತಿ. ಆದರೆ ಆಳುವ ವರ್ಗದ ರಾಜಕಾರಣಿಗಳಿಗೆ ಕಾರ್ಮಿಕರು 'ಓಟ್ ಬ್ಯಾಂಕ್' ಆಗಿ ಕೂಡ ಕಾಣಿಸುತ್ತಿಲ್ಲ. ಅವರ ಲೆಕ್ಕದಲ್ಲಿ ಒಂದು ಸ್ತ್ರೀ ಶಕ್ತಿ ಸಂಘಕ್ಕೆ ಇರುವ ಕಿಮ್ಮತ್ತು ಕೂಡ ಒಂದು ಕಾರ್ಮಿಕ ಸಂಘಕ್ಕಿಲ್ಲ. ಹಾಲು ಹಾಕುವ ಹುಡುಗರು, ಪೇಪರ್ ಹಾಕುವ ಹುಡುಗರ ಹಿಂಡು ಸೇರಿಸಿ 'ಮಾತನಾಡು'ವವರು, ವಕೀಲರ ಸಂಘಕ್ಕೆ ಸೈಟು ಬೇಕಾ, ಆಫೀಸ್ ಬೇಕಾ ಅನ್ನುವವರು, ಅಪಾರ್ಟ್ ಮೆಂಟ್ಸ್ ನಿವಾಸಿಗಳ ಸಭೆ ಕರೆಯಿರಿ, ಕಟ್ಟಡಕ್ಕೆ ಪೈಂಟೋ ಮತ್ತೇನೋ ಎಲ್ಲರಿಗೂ ಸಲ್ಲುವಂತದ್ದು ಏನಾದರೂ ಮಾಡೋಣ... ಅಂತ ಕಾಳು ಚೆಲ್ಲುವುವವರು ಕಾರ್ಮಿಕರನ್ನು 'ಕಾರ್ಮಿಕರ'ನ್ನಾಗಿ ಗುರುತಿಸಲು ಯಾಕೆ ತಯಾರಿಲ್ಲ ಅಂತ ಜನರು ಯೋಚಿಸಬೇಕಿದೆ. ಕಾರ್ಮಿಕರೂ ಈ ಪ್ರಶ್ನೆಯನ್ನು ಒಂದು ಸವಾಲಾಗಿಯೇ ತೆಗೆದುಕೊಂಡು ಸೆಣೆಸಬೇಕಿದೆ.



ಕೆ.ಆರ್. ಪುರಂನಲ್ಲಿ ಚುನಾವಣ ಪ್ರಚಾರದಲ್ಲಿ ಗೌರಮ್ಮನವರು

ಕಾಂಗ್ರೆಸ್‌ನವರಿಗೆ ಕ್ಷೇತ್ರದ ಮಹಿಳೆಯರು 'ಓಂ ಶಕ್ತಿ'ಯ ಭಕ್ತೆಯರಂತೆ ಕಾಣಿಸುತ್ತಾರೆ. ಕಾಂಗ್ರೆಸ್ ಪಕ್ಷ ಎಲ್ಲರಿಗಿಂತ 'ಜಾತ್ಯತೀತ'. ಹಿಂದೂಗಳಿಗೆ ಧರ್ಮಸ್ಥಳ ಪ್ರವಾಸ ಯೋಗ. ಕ್ರಿಸ್ಚಿಯನ್ನರಿಗೆ ತಮಿಳುನಾಡಿನ ವೇಲಾಂಗಣಿ ಚರ್ಚು ಸಂದರ್ಶನ ಯೋಗ, ಮುಸ್ಲೀಮರಿಗೆ ಮುರುಗಮಲ್ಲ, ಮುಳಬಾಗಲಿನ ದರ್ಗಾ ನೋಡುವ ಯೋಗ. ಹುಡುಕಿ ಹುಡುಕಿದ ಕೆಲವರಿಗೆ ಹಾವೇರಿಯ 'ಕಾಗಿನೆಲೆ' ಕಾಣುವ ಸುಯೋಗ. ಚುನಾವಣೆಯೆಂದರೆ ಸುಮ್ಮನೆಯೇ? ವರ್ಷ ವರ್ಷಗಳಿಂದ ಬಲೆ ನೇಯುವ ಉದ್ಯೋಗ.

ಈ ಚುನಾವಣಾ ಕ್ಷೇತ್ರದಿಂದ ಮೇಲ್ಮರತ್ತೂರು ಓಂ ಶಕ್ತಿ ದೇವಿಯ ಪುಣ್ಯಕ್ಷೇತ್ರಕ್ಕೆ ಈ ವರ್ಷ ಸು. 100 ಕ್ಕಿಂತ ಹೆಚ್ಚು ಬಸ್ಸುಗಳು ಹೋಗಿ ಬಂದಿವೆ ಎಂದರೆ ಕ್ಷೇತ್ರದ ಶಾಸಕರಾಗಲು ಬಯಸಿದ ನೇತಾರರ ದೈವಭಕ್ತಿ ಎಷ್ಟು ಅಗಾಧವಾದದ್ದು ಅಂತ ಲೆಕ್ಕ ಹಾಕಬೇಕು ಎನ್ನುತ್ತಾರೆ ಜನ. ಬೈರತಿ ಬಸವರಾಜು ಅವರು ಇಲ್ಲಿ ಕಾಂಗ್ರೆಸ್ ಕೈ ಹಿಡಿದ ಅಭ್ಯರ್ಥಿ. ಮತ್ತೊಬ್ಬ ಟಿಕೆಟ್ ಆಕಾಂಕ್ಷಿ ಎ. ಕೃಷ್ಣಪ್ಪನವರಿಗೆ ಟಿಕೆಟ್ ತಪ್ಪಿದೆ.

ಇಲ್ಲಿ ಚುನಾವಣಾ ಆಯೋಗಕ್ಕೆ ಹೂವಿನ ಪಕ್ಷದವರು ಕೊಂಚ ಬೆಚ್ಚಿದಂತಿದೆ. ಸರಿಯಾಗಿ ಕಾಸು ಬಿಚ್ಚುತ್ತಿಲ್ಲ ಅಂತ ಕೊರಗಿದರು ಎ. ನಾರಾಯಣಪುರದಲ್ಲಿ ಸಿಕ್ಕ ಒಬ್ಬರು. ಎಲೆಕ್ಷನ್ ಕಮೀಷನ್ ಕಾಟ. ಈಗ ಏನೂ ಮಾಡಕಾಗಲ್ಲ ಅಂದಿದಾರೆ. ಆಮೇಲೆ ಏನಾದರೂ ಮಾಡೇ ಮಾಡ್ತಾರೆ ಅಂತ ಭರವಸೆಯನ್ನು ಅವರು ಚೆಲ್ಲಿದರು.

ಆರು ತಿಂಗಳ ಹಿಂದೆಯೇ ಅಚ್ಚುಕಟ್ಟಾಗಿ ಕೆಲಸ ಮುಗಿದಿದೆ. ರೇಷಿಮೆ ಸೀರೆ ಕಲರೋ ಕಲರು ಅಂತ ಹೇಳಿದವರು ನೇತ್ರಾವತಿ ನಗರದಲ್ಲಿ ಸಿಕ್ಕವರು. ನಂದೀಶ ರೆಡ್ಡಿ ಇಲ್ಲಿ 'ವಿಕಾಸ ಪುರುಷ'ನ ವೇಷದಲ್ಲಿ ನಿಂತಿರುವ ಬಿಜೆಪಿ ಅಭ್ಯರ್ಥಿ.

ಅಲ್ಲೆಲ್ಲೂ ಪಾದಯಾತ್ರೆಯಲ್ಲಿ ಪುರುಷರು. ಅದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು. ಎಷ್ಟೋ ಜನರ ಕಂಕುಳಲ್ಲಿ, ಹೆಗಲಲ್ಲಿ ಎಚ್ಚರವಿಲ್ಲದೆ ಮಲಗಿ ನಿದ್ರಿಸುವ ಹಸುಗೂಸುಗಳು. ನೆತ್ತಿ ಸುಡುವ ಬಿಸಿಲು ಹೇಗೋ ಸಹಿಸಿಕೊಂಡಿವೆ ಹೆಂಗರುಳು. ಮಂದೆಯಲಿ ಹಿಂದೆ ಮುಂದೆ ಅಲೆದಾಟ. ಹುಚ್ಚಿ ಮದುವೆಯಲ್ಲಿ ಉಂಡವನೇ ಜಾಣ.

ಹೆಂಗಸರಿಗೆ ಐದು ನೂರು. ಹೈಸ್ಕೂಲು, ಪಿಯುಸಿ ಹುಡುಗರಾದರೂ ಸರಿ. 'ಗಂಡಸರಿಗೆ' ಏಳು-ಎಂಟು ನೂರು. ದೊಡ್ಡವರಿಗೆ ಸಿಗುವುದು ಸಾವಿರ ರೂ. ಬರೊಬ್ಬರಿ.

ಪಕ್ಕದ ಸಿ.ವಿ. ರಾಮನ್ ನಗರದದಲ್ಲಿ ಮಾವಿನ ತಳಿಯೊಂದರ ಹೆಸರಿನ ಗೃಹಿಣಿಯೊಬ್ಬರಿಗೆ ಈಗ ಎರಡೆರಡು ಕಡೆ ಸಂಪಾದನೆಯಂತೆ. ಈ ಬೀದಿಯಲಿ ಕಾಂಗ್ರೆಸು. ಆ ಹಾದಿಯಲಿ ಬಿಜೆಪಿ. ಮೊದಲಿನಂತೆ ಈಗ ಕೂಲಿಗೆ ಜನ ಸಿಗುತ್ತಿಲ್ಲ ಗೊಣಗುತ್ತಾರೆ ಅಂತ ಕೂಲಿ ಜನ ಬೇಕಾದವರು.

ವಾಜಪೇಯಿ-ಮೋದಿ

ಕ್ಷೇತ್ರದ ಬಿಜೆಪಿ ಶಾಸಕರು ಮುದ್ರಿಸಿ ಹಂಚುತ್ತಿರುವ ಬಣ್ಣ ಬಣ್ಣದ ಕಿರು ಪುಸ್ತಕದ ಮುಖಪುಟದಲ್ಲಿ ಒಂದು ಕಡೆ ಮೋದಿ ಮತ್ತೊಂದು ಕಡೆ ವಾಜಪೇಯಿ. ಒಳಗೆ ನಾನಾ ಅಭಿವೃದ್ಧಿ ಕಾರ್ಯಗಳ ಚಿತ್ರಗಳು. ರಸ್ತೆಗೆ ಕಾಂಕ್ರೀಟು ಬಿದ್ದಿರುವುದು ನಿಜ. ಸೀಮೇಂಟ್ ಗೋಡೆಗಳ ಮೋರಿ ಬಂದಿದೆ. ಜನಗಳು, ಬಿಜೆಪಿ ಕಾರ್ಯಕರ್ತರು ಅದನ್ನು ತೋರಿಸಿದರೆ ಕೆಲವು ಜನ ಆರು ತಿಂಗಳಿಗೂ ಮುಂಚೆಯೇ ಮುರಿದುಬಿದ್ದಿರುವ ಮೋರಿಯ ಮೇಲಿನ ಮುಚ್ಚಳಗಳನ್ನು ಎಣಿಸಿ ತೋರುವರು.

ನೀರು ಕ್ಷೇತ್ರದ ಒಂದು ಬಲುದೊಡ್ಡ ಸಮಸ್ಯೆ. ಕಾವೇರಿಯನ್ನೇ ಇಲ್ಲಿಗೆ ಹರಿಸಿದ್ದೀವಿ ಅನ್ನುತ್ತಾರೆ ಆವರು. ಇನ್ನೂ ಸರಿಯಾಗಿ ನೀರು ಸಿಗುತ್ತಿಲ್ಲ ಅನ್ನುತ್ತಾರೆ ಇವರು.

ಹೇಗೆ ಬಂತು ನೀರು?

ಹೇಗೆ ಬಂತು ನೀರು? ಶುಲ್ಕದ ಹೆಸರಲ್ಲಿ ನಿವೇಶನದಾರರ ಬೆವರ ಗಳಿಕೆಯ ಪಣ ಹಿಂಡಿ ಹಿಂಡಿ ಅಲ್ಲವೇ ಕಾವೇರಿಯನ್ನು ಇಲ್ಲಿಗೆ ಹರಿಸಿದ್ದು ? ಕೆಂಬಾವುಟ ಅಲ್ಲವೇ, ಕೆಂಬಾವುಟ ಮಾತ್ರವೇ ಅಲ್ಲವೇ ಆಗ ಜನರ ಜೀವ ಹಿಂಡ ಬೇಡಿರಿ ಅಂತ ಅಡ್ಡ ನಿಂತದ್ದು. ಜನರ ಜೊತೆಗೆ ನಿಂತದ್ದು. ಕೆಲವು ಜನರಿಗೆ ಏನೋ ನೆನಪು.. ಕೊಂಚ ಮಂಪರು ಮಂಪರು.

ಬಾಯಾರಿದ ಗಂಟಲಿಗೆ ಅನುದಿನವೂ ಉಚಿತ ನೀರು ಹರಿಸುವ ಪುಣ್ಯಾತ್ಮರೂ ಇಲ್ಲಿಹರು. ಎಲ್ಲಿಂದ ತರುತ್ತಾರೆ ಸಂಪನ್ಮೂಲ ಇದಕ್ಕೆಲ್ಲ ? ಹೇಳುವವರು ಯಾರು.

ಮಾಯಾಬಜಾರು

ನಗರೇಶ್ವರ ನಾಗನಹಳ್ಳಿಯಲ್ಲಿ 13 ಎಕರೆ ಕೆರೆ ಅಂಗಳದಲ್ಲಿ ಈಗ ಉಳಿದಿರುವುದು 8 ಎಕರೆ ಮಾತ್ರ, ಉಳಿದ 5 ಎಕರೆ ಮಾಯ ಅಂತಾರೆ ಬಲ್ಲವರು. ಡಿ.ಕೆ. ಶಿವಕುಮಾರ ಹೆಸರಿನ ಥಳುಕು ಹಾಕಿಕೊಂಡಿರುವ 'ಶೋಭಾ ಡೆವಲಪರ್ಸ್'ನವರು ಅಭಿವೃದ್ಧಿಗಾಗಿ ಈ ಭಾಗದಲ್ಲಿ ಬಾರಿ ಶ್ರಮಿಸುತ್ತಿದ್ದಾರೆ. ಮಂತ್ರಿ ಡೆವಲಪರ್ಸ್‌ನವರೇನು ಕಡಿಮೆ ಶ್ರಮಿಸುತ್ತಿಲ್ಲವಂತೆ. ಸುಮ್ಮನೆ ಅಂದಾಜಿನ ಮೇಲೆ ಜನ ಹೇಳಿದ್ದು-ಹೊರಮಾವು ಕೆರೆಯ ಅಂಗಳದಲ್ಲಿ ಶೇ. 60 ಈಗಾಗಲೇ 'ಅಭಿವೃದ್ಧಿ'ಯಾಗಿ ಹೋಗಿದೆಯಂತೆ. ಉಳಿದದ್ದು ಇನ್ನು ಬರೀ. ಶೇ. 40 ಮಾತ್ರವಂತೆ.

ಕಾಗದ ಪತ್ರ ದಾಖಲೆಗಳಲ್ಲಿ ಏನೋ ಐಬು ಇರುವ ಬಡ ರೈತರ ಜಮೀನಿನ ಬುಡಕ್ಕೆ ತಂದಿಡುವುದು. ಇಲ್ಲದ 'ಡಿಸೂಟ್'

ಪುಟ 12 ಕ್ಕೆ

ಬದಲಿಗೆ ಬೇಕೇ ಕಾಂಗ್ರೆಸ್...

ಪುಟ 8 ರಿಂದ

ಮಾತ್ರವಲ್ಲ ಉದ್ಯಮಿಗಳ ಇಂಗಿತವೇ ತಮಗೆ ಆದೇಶವೆಂದದ್ದು ಉದಾರೀಕರಣದ ನೀತಿಗಳ ಜಾರಿಯ ಭರದಲ್ಲಿನ ಕಾರ್ಪೋರೇಟ್ ಕಂಪನಿಗಳ ಗುಲಾಮತನವನ್ನು ತೋರಿಸಿತು. ಐ.ಟಿ, ಬಿ.ಟಿ. ಗಳೆ ಅಭಿವೃದ್ಧಿ ಸಾಧನಗಳೆಂದೂ,ಅದೇ ಆರ್ಥಿಕ ಬೆಳವಣಿಗೆಯೆಂಬ ಸೇವಾಕ್ಷೇತ್ರದ ನೀರ ಮೇಲಿನ ಗುಳ್ಳೆಯನ್ನೇ ಅವಲಂಬಿಸುವಂತೆ ಮಾಡಿದರು. ಕೈಗಾರಿಕೆ, ಕೃಷಿ ಇದೇ ಅವಧಿಯಲ್ಲಿ ಅವರ ಬೆಂಗಳೂರನ್ನು ಸಿಂಗಾಪುರವನ್ನಾಗಿಸುವ, ಬಂಡವಾಳ ಹೂಡಿಕೆದಾರರ ಸ್ನೇಹಿಯನ್ನಾಗಿಸುವ ಪ್ರಕ್ರಿಯೆಯಲ್ಲಿ ಅತ್ಯಂತ ವ್ಯಾಪಕವಾಗಿ ರಿಯಲ್ ಎಸ್ಟೇಟ್ ನ ದಂಧೆ ಬೆಳೆದು ಅದು ಹಲವು ಅಕ್ರಮಗಳು, ಕ್ರಿಮಿನಲ್ ಕೃತ್ಯಗಳ ಸ್ವರೂಪದಲ್ಲಿ ದೈತ್ಯಾಕಾರ ತಾಳಿತು. ಮುಖ್ಯಮಂತ್ರಿ ಮತ್ತು ಮಂತ್ರಿ , ಶಾಸಕರೂ ಒಳಗೊಂಡು ಈ ವ್ಯವಹಾರದಲ್ಲಿ ಕೈ ಇಟ್ಟರಲ್ಲದೇ ಎಲ್ಲೆಡೆ ಭೂ ಮಾಫಿಯಾಗಳು ತಲೆ ಎತ್ತಿದವು. ರೈತರ ಭೂ ಸ್ವಾಧೀನ, ಅಕ್ರಮಗಳಿಂದ ಬೆಂಗಳೂರು ಕ್ರಿಮಿನಲ್ ಸಿಟಿಯಾಗಿ ರೂಪುಗೊಂಡಿರುವುದು ಇಂದಿನ ವಾಸ್ತವ.

ಇದು ರಾಜಕೀಯ ಕ್ಷೇತ್ರವನ್ನೂ ಪ್ರವೇಶಿಸಿತು. ಹಲವಾರು ಉದ್ಯಮಿಗಳು ನೇರವಾಗಿ ರಾಜಕೀಯ ಪ್ರವೇಶಿಸಿ ರಾಜಕೀಯ ಉದ್ಯಮವನ್ನು ವಿಸ್ತರಿಸಿದ್ದು ಇದೇ ಉದಾರೀಕರಣದ ಭಾಷೆಯಾಗಿದೆ. ಮುಂದೆ ಈ ಪ್ರಕ್ರಿಯೆಯೇ ಭೂ ಹಾಗೂ ಗಣಿ ಮಾಫಿಯಾಗಳು ಬೆಳೆದು ನಿಲ್ಲಲು ಮತ್ತು ಪಕ್ಷಗಳನ್ನು ಅಧಿಕಾರಕ್ಕೆ ತರುವಲ್ಲಿ, ಮುಂದಿನ ಸರಕಾರಗಳನ್ನು ರಚಿಸುವಲ್ಲಿ ಹಾಗೂ ಪತನಗೊಳಿಸುವಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸಿದವು. ಇವೇ ಶಕ್ತಿಗಳು ಕಾಂಗ್ರೆಸ್, ಬಿಜೆಪಿ, ಜೆಡಿ ಎಸ್ ಪಕ್ಷಗಳಲ್ಲಿನ ವಿವಿಧ ಗುಂಪುಗಳ ಸ್ವರೂಪದಲ್ಲಿಯೂ ತೀವ್ರ ಕಾದಾಟಕ್ಕಿಳಿದಿದ್ದು, ಈಗಲೂ ಇರುವುದು ಇಂದಿನ ವಾಸ್ತವ.

ಹಗರಣ ಲಕ್ಷಣ

ಕೃಷ್ಣ ಆಡಳಿತದಲ್ಲಿ ಹತ್ತಾರು ಭ್ರಷ್ಟಾಚಾರ ಹಗರಣಗಳು ಮತ್ತು ಭ್ರಷ್ಟರಿಗೆ ಮಣೆ ಹಾಕಿದ, ರಕ್ಷಣೆ ನೀಡಿದ ಪ್ರಕರಣಗಳು ಹೊರಬಂದವು. 300ಕೋಟಿ ರೂ.ಗಳ ಔಷಧಿ ಹಗರಣ, 250 ಕೋ.ಗಳ ಬೆಂಗಳೂರಿನ ಪುರ ಸಭೆ ಹಗರಣ, ಹತ್ತಾರು ಸಾವಿರ ಕೋಟಿಗಳ ಖೋಟಾ ಸ್ಟಾಂಪ್ ಪೇಪರ್ ನ ಹಗರಣ, ಕಳಪೆ ಗೊಬ್ಬರ ಹಗರಣ, ಲೋಕಾಯುಕ್ತರೇ ತನಿಖೆ ನಡೆಸಿ ಕ್ರಮಕ್ಕೆ ಸೂಚಿಸಿ ಅಮಾನತುಗೊಂಡಿದ್ದ 9 ಕೆ.ಎ.ಎಸ್.ಅಧಿಕಾರಿಗಳನ್ನು ಏಕಾಏಕಿ ಪುನರ್ ನೇಮಕ ಮಾಡಿದ ಪ್ರಕರಣ ಹೀಗೆ ಸಾಗುತ್ತದೆ ಕೃಷ್ಣರು ಉದಾರೀಕರಣದ ಕೊಳಲು ಊದಿದ ಪರಿಣಾಮ!

ಇಂತಹ ಆರ್ಥಿಕ ದಿವಾಳಿಖೋರ ನೀತಿಗಳ ಪರಿಣಾಮದಿಂದ ತತ್ತರಿಸಿದ ಜನತೆ ಒಂದೆಡೆ ಆತ್ಮಹತ್ಯೆಯ ಹಾದಿ ಹಿಡಿದಿರುವಾಗಲೇ ನೂರಾರು ಕಡೆ ಸಂಘಟಿತ ಮತ್ತು ಸ್ವಯಂ ಪ್ರೇರಿತರಾಗಿಯೂ ಹೋರಾಟಗಳು ನಡೆದವು.ತೊಗರಿ, ಭತ್ತ, ರೇಷ್ಮೆ ಮುಂತಾದ ಬೆಳೆಗಾರರು ಬೀದಿಗಿಳಿದರು. ಕಾರ್ಮಿಕರು ಚಳುವಳಿಗಿಳಿದರು. ಜನತೆಯ ಅಹವಾಲನ್ನು ಸಹಾನುಭೂತಿಯಿಂದ ಪರಿಶಿಲಿಸಲು ನಿರಾಕರಿಸಿದ ಕಾಂಗ್ರೆಸ್ ಸರಕಾರ ದಮನಕಾರೀ ಕ್ರಮಗಳನ್ನು ಬಳಸಿತು. 'ದಾವೋಸ್' ಹಾಗೂ ಇಂಡಿಯಾದ ಬಂಡವಾಳಗಾರರನ್ನು ಮೆಚ್ಚಿಸಲು 'ಕೋಕಾ' ದಂತಹ ಪ್ರಜಾಪ್ರಭುತ್ವ ವಿರೋದೀಯಾದ ಅತೀ ಕ್ರೂರ ಮರ್ಧನಕಾರೀ ಕಾಯ್ದೆಯನ್ನು ಅಂಗಿಕರಿಸಿತು. ಮಾತ್ರವಲ್ಲ ಜಗತ್ತಿನಲ್ಲೇ ಅತೀ ಕ್ರೂರ ಜನಾಂಗೀಯ ಹತ್ಯೆಯ ನೀತಿ ಅನುಸರಿಸುವ, ಕುಖ್ಯಾತ ಇಸ್ರೇಲ್ ನ ಪೋಲೀಸರಿಂದ ನಮ್ಮ ಪೋಲೀಸರಿಗೆ ತರಬೇತಿ ಕೊಡಿಸಲಾಯಿತು, ತರಬೇತಿಗೆ ಅಲ್ಲಿಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಲಾಯಿತು.

ಕೋಮುವಾದದದೊಂದಿಗೆ ರಾಜಿ-ಕುಮ್ಮಕ್ಕು

ಇಲ್ಲಿ ಕಾಂಗ್ರೆಸ್ ನ ಕೃಷ್ಣರ ಸರಕಾರ ರಾಜ್ಯದಲ್ಲಿರುವಾಗ ಕೇಂದ್ರದಲ್ಲಿದ್ದದ್ದು ವಾಜಪೇಯಿ ಯವರ ಬಿಜೆಪಿ ಸರಕಾರ. ಇಬ್ಬರೂ ಹೇಳುತ್ತಿದ್ದುದು ಅಭಿವೃದ್ಧಿಯ ವಿಷಯದಲ್ಲಿ ರಾಜಕೀಯವಿಲ್ಲ ಎನ್ನುವುದು! ಅಂದರೆ ಪಕ್ಷಗಳು ಬೇರಾದರೂ ಪರಸ್ಪರ ವಿರೋಧಿಗಳೆಂದು ಹೇಳಿಕೊಂಡರೂ ಅವರ ಆರ್ಥಿಕ, ರಾಜಕೀಯ ಬಾಷೆ ಒಂದೇ. ರಾಜ್ಯದ ಹಾಗೂ ಕೇಂದ್ರದ ನಾಯಕರು ಹಲವಾರು ಸ್ವ-ಅಭಿವೃದ್ಧಿ ಯೋಜನೆಗಳಲ್ಲಿ ಪಾರ್ಟನರ್ ಗಳಾಗಿದ್ದದ್ದು ಗುಟ್ಟೇನಲ್ಲ. ಇಂತಹ ಸನ್ನಿವೇಶದಲ್ಲಿ ಜನತೆಯ ಅತೃಪ್ತಿಯನ್ನು ದುರ್ಬಳಕೆ ಮಾಡಿಕೊಳ್ಳಲು ಹೊಂಚು ಹಾಕಿ ಕುಳಿತಿದ್ದ ಆರೆಸ್ಸೆಸ್-ಬಿಜೆಪಿಗಳು ಕೋಮುವಾದದ ಅಜೆಂಡಾ ಜಾರಿಗೆ ವ್ಯಾಪಕವಾಗಿ ಇಳಿದವು. ಆ ಅವಧಿಯಲ್ಲಿ ರಾಜ್ಯದ ಹತ್ತಾರು ಕಡೆ ಅತ್ಯಂತ ಯೋಜಿತವಾದ ಕೋಮು ಗಲಭೆಗಳಾದವು, ಅಲ್ಪಸಂಖ್ಯಾತರ ಮೇಲೆ ಧಾಳಿಗಳಾದವು. ಇಲ್ಲೆಲ್ಲಾ ಸೆಕ್ಯುಲರ್ ಕಾಂಗ್ರೆಸ್ ಸರಕಾರ ಕೋಮುವಾದಿಗಳನ್ನು, ಗಲಭೆಯುಂಟು ಮಾಡಿದವರನ್ನು ದಮನಿಸಲು ನಿಷ್ಠುರ ಕ್ರಮಗಳನ್ನೇ ತೆಗೆದುಕೊಳ್ಳಲಿಲ್ಲ. ಒಂದು ರೀತಿಯಲ್ಲಿ ಧಾಳಿಖೋರರಿಗೆ ಸಮ್ಮತಿಯನ್ನೂ ನೀಡಲಾಗಿತ್ತು. ರಾಜಕೀಯವಾಗಿ ಮತ್ತು ಆಡಳಿತಾತ್ಮಕವಾಗಿ ನಿಷ್ಕ್ರಿಯತೆ ವಹಿಸಲಾಗಿತ್ತು . ಕೊಡಗಿನಲ್ಲಿ ವಾರಗಟ್ಟಲೇ ಸಂಘಪರಿವಾರ ನಿತ್ಯವೂ ಅಲ್ಪಸಂಖ್ಯಾರ ಮೇಲೆ ಧಾಳಿ ನಡೆಸಿದರೂ ತಡೆಯಲು ಹೋಗಲೇ ಇಲ್ಲ. ಇಂತಹುಗಳ ಬಗ್ಗೆ ಹಲವಾರು ನಿಯೋಗಗಳ ಮೂಲಕ ಮುಖ್ಯಮಂತ್ರಿಯನ್ನೇ ಒತ್ತಾಯಿಸಿದಾಗ್ಯೂ ಬಾಯಿ ಮಾತಿನ ಸಾಂತ್ವನ ಬಿಟ್ಟರೆ ಯಾವುದೇ ಧೃಡ ಕ್ರಮ ವಹಿಸಲೇ ಇಲ್ಲ. ಇನ್ನು ಬಾಬಾ ಬುಡನ್ ಗಿರಿಯ ವಿವಾದದಲ್ಲಂತೂ ಕೃಷ್ಣ ಸರಕಾರ ಹಿಂದಿನವರಂತೆ ಸಂಘಪರಿವಾರದ ಅಜೆಂಡಾ ಜಾರಿಗೆ ಅವಕಾಶ ಕಲ್ಪಿಸಿತೇ ಹೊರತು ಕನಿಷ್ಠ ಸುಪ್ರಿಂಕೋರ್ಟನ ನಿದೇಶನವನ್ನೂ ಪಾಲಿಸಲಿಲ್ಲ. ಈ ಆಂದೋಲನದಲ್ಲಿ ನಾಡಿನ ಚಿಂತಕರು(ಪ್ರೊ.ಜಿಕೆಜಿ. ಗಿರೀಶ್ ಕಾರ್ನಾಡ್ ಮುಂತಾದವರನ್ನು), ಸಂಘಟನೆಗಳ ಮುಖಂಡರು, ಎಡ ಪಕ್ಷಗಳ ನಾಯರನ್ನು, ಚಳುವಳಿಗಾರರನ್ನು ಜೈಲಿಗೆ ತಳ್ಳಿದ ಉದ್ದೇಶಗಳತ್ತ ಹೊರಳಿ ನೋಡಲೇಬೇಕು.

ದುಷ್ಟ ರಾಜಕೀಯ ಹುನ್ನಾರಗಳು

ಇವೆಲ್ಲಾ ಸಂಗತಿಗಳು ಉದಾರೀಕರಣ ಮತ್ತು ಕೋಮುವಾದಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬುದನ್ನು ಮತ್ತೇ ಸಾಬೀತು ಪಡಿಸಿದವು. ಕೋಮುವಾದವನ್ನು ಎದುರಿಸುವಲ್ಲಿ ಕಾಂಗ್ರೆಸ್ ಸತತವಾಗಿ ಚಂಚಲತೆ , ಕೆಲವಾರು ಸನ್ನಿವೇಶದಲ್ಲಿ ರಾಜೀ ಮಾಡಿಕೊಂಡ ಇತಿಹಾಸ ಮರೆಯಲಾಗದು. ಮುಂದೆ ಇದೇ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಸೆಕುಲರ್ ಮೂರನೆಯ ಪರ್ಯಾಯ ಬೆಳೆಯಬಾರದೆಂದು, ಅದೇನಿದ್ದರೂ ಬಿಜೆಪಿ ಕಾಂಗ್ರೆಸ್ ನೊಳಗೇ ರಾಜಕೀಯ ದ್ರುವಿಕರಣ ಸಾಧಿಸಬೇಕೆಂದು ಪರಸ್ಪರ ನಡೆಸಿದ ಕುತಂತ್ರಗಳನ್ನು ಕನಿಷ್ಠ ಪ್ರಗತಿಪರರೂ ಮರೆಯುವುದಾದರೂ ಹೇಗೆ? ಇದು ಮುಂದೆ ಕೋಮುವಾದೀ ಬಿಜೆಪಿಯನ್ನು ತಿರಸ್ಕರಿಸಿದ ಜನತೆ ನೀಡಿದ ಜನಾದೇಶ ಒಡಕಿನಿಂದ ಕೂಡುವಂತಾಗಿ ಕಾಂಗ್ರೆಸ್ ಸಹ ಸೋತು ಅನಿವಾರ್ಯವಾಗಿ ಕಾಂಗ್ರೆಸ್ ಮತ್ತು ಜೆಡಿ ಎಸ್ ಮೈತ್ರಿ ಕೂಟದ ಸರಕಾರ ರಚಿತವಾಗಿದ್ದು, ಪತನವಾಗಿದ್ದು ಮತ್ತು ಸಂಧರ್ಭಸಾಧಕ ಮೈತ್ರಿಗಳು ಏರ್ಪಟ್ಟು ಅಂತಿಮವಾಗಿ ಬಿಜೆಪಿ ಅಧಿಕಾರ ಹಿಡಿಯುವಂತಾಗಿದ್ದು ಇತ್ತೀಚಿನ ವಿದ್ಯಾಮಾನಗಳು.

ಪರ್ಯಾಯವೇ ಅಲ್ಲ

ಅಂದರೆ ಕಾಂಗ್ರೆಸ್‌ನಂತೆ ಉದಾರೀಕರಣದ ಆರಾಧಕನಾಗಿರುವ ಬಿಜೆಪಿ ಹಿಂದಿನ ನೀತಿಗಳನ್ನೇ ಜಾರಿಗೆ ತಂದಿತು. ಮುಂದೆ ಒಂದು ವೇಳೆ ಕಾಂಗ್ರೆಸ್ ಹೇಳಿಕೊಂಡಂತೆ (ಅದು ಅಷ್ಟು ಸುಲಭವಲ್ಲವೆಂಬುದು ಕೆಲವರಿಗಾದರೂ ಗೊತ್ತು) ಸರಕಾರ ರಚಿಸಿದರೂ ಅದು ಇನ್ನಷ್ಟೂ ಅತೀ ವೇಗದಿಂದ ಜಾರಿಗೊಳಿಸುವುದರಲ್ಲಿ ಅನುಮಾನವೇ ಇಲ್ಲ. ಹಾಲಿ ಕೇಂದ್ರದ ಕಾಂಗ್ರೆಸ್ ಸರಕಾರ ದೇಶವನ್ನು ಇನ್ನಷ್ಟೂ ದಿವಾಳಿಯೆಬ್ಬಿಸುವ, ಅಮೇರಿಕಾದ ವ್ಯೂಹಾತ್ಮಕ ಸಮರ ಯೋಜನೆಗೆ ಬದ್ಧವಾಗಿ ಗುಲಾಮತನದಿಂದ ನಡೆಯುತ್ತಿರುವಾಗ ಅದಕ್ಕೆ ಹೊಂದಿಕೊಂಡು ರಾಜ್ಯವೂ ನಡೆಯಲಿದೆ. ಇಲ್ಲಿ ಕಾಂಗ್ರೆಸ್ ಅನುಸರಿಸುತ್ತಿರುವ ನೀತಿಗಳು ತನ್ನ ನೀತಿಗಳನ್ನೇ ಎಂದು ಬಿಜೆಪಿಯು ಘಂಟಾ ಘೋಷವಾಗಿ ಹೇಳಿಕೊಂಡಿದೆ. ಭ್ರಷ್ಟಾಚಾರದ ವಿಷಯದಲ್ಲಂತೂ ಕಾಂಗ್ರೆಸ್ ಪಕ್ಷವು ಬಿಜೆಪಿಯನ್ನು ಎಂದೋ ಮೀರಿಸಿದೆ. ಅದೇ ಬಿಜೆಪಿಗೆ ಸ್ಪೂರ್ತಿ! ಶೋಷಕ ವರ್ಗ ಹಿತದಲ್ಲಿ ಇಬ್ಬರೂ ಒಂದೇ. ಹೀಗಾಗಿ ಪ್ರಸಕ್ತವಾಗಿ ಕಾಂಗ್ರೆಸ್ ಅಪ್ಪಿ ತಪ್ಪಿಯೂ ಬಿಜೆಪಿಗೆ ನಿಜವಾದ ಪರ್ಯಾಯವೇ ಅಲ್ಲ. ಆಗಲು ಸಾಧ್ಯವೂ ಇಲ್ಲ. ಈ ಐದು ವರುಷಗಳಲ್ಲಂತೂ ಕಾಂಗ್ರೆಸ್ ಪಕ್ಷವು ಅದು ಆರ್ಥಿಕ ನೀತಿಗಳಲ್ಲಿಯೂ, ಕೋಮುವಾದದ ವಿಷಯಗಳಲ್ಲಿಯೂ ಸಂಪೂರ್ಣ ನಿಷ್ಕ್ರಿಯತೆಯನ್ನು ತೋರುತ್ತಾ ಬಂದಿದೆ. ಅದೂ ಅಧಿಕೃತ ವಿರೋಧ ಪಕ್ಷವೆಂಬುದನ್ನೇ ಮರೆತಿತ್ತು. ಇದು ಯಾರೋ ನಾಯಕರ ದೌರ್ಬಲ್ಯವೆಂದೋ ಅಥವಾ ಮುಂದೆ ಬರುವ ನಾಯಕರು ಸಮರ್ಥವಾಗಿ ನಿರ್ವಹಿಸುವರೆಂದು ಭಾವಿಸುವುದು ತೀರಾ ಬಾಲಿಶಃ ನಂಬಿಕೆಯಾಗುವುದು. ಮೇಲಾಗಿ ಹೈಕಮಾಂಡ್ ಅದಕ್ಕೆ ಕಿಂಚಿತ್ತಾದರೂ ಅವಕಾಶ ನೀಡೀತೆ? ಆದ್ದರಿಂದಲೇ ರಾಜ್ಯದ ನಿಜವಾದ ಪ್ರಶ್ನೆಗಳ ಬಗ್ಗೆ ಚುನಾವಣಾ ಪ್ರಣಾಳಿಕೆಯು ಬೆನ್ನು ತೋರಿಸಿ ಆಕರ್ಷಕ ಮಾತುಗಳಿಂದ ಜನರ ಕಣ್ಣಿಗೆ ಮಣ್ಣೆರಚಿದೆ.

ಸ್ಥಿರತೆ ಬೇಕಿರುವುದು ಜನತೆಗೆ


ಈಗಲೂ ಅದೇ ಭೂ ಹಾಗೂ ಗಣಿ ಮಾಫಿಯಾ/ಉದ್ಯಮಿಗಳೇ ಇಲ್ಲೂ ಮೇಲುಗೈ ಪಡೆದಿವೆ. ಈಗಲೂ ಅಧಿಕಾರದ ಮೇಲುಗೈಗಾಗಿ ಒಳಗೂ,ಹೊರಗೂ ಹಣಾಹಣಿ ನಡೆಯುತ್ತಿರುವುದು ಗುಟ್ಟೇನಲ್ಲ. ಇಂತಹ ಸುಲಿಗೆಗಾರರರಿಗೆ ಪೂರ್ಣ ಬಹುಮತ ನೀಡುವುದೆಂದರೆ ಏನರ್ಥ? ಅಭಿವೃದ್ಧಿ ಸಾಧನೆಯೆಂಬುದೂ ಎಂತಹುದು? ಸ್ಥಿರತೆಯೆಂಬುದು ಜನತೆಗಿರಬೇಕೇ ಹೊರತು ಸುಲಿಗೆಗಾರರಿಗಲ್ಲ. ಆದ್ದರಿಂದಲೇ ಇಷ್ಟೆಲ್ಲಾ ಅನುಭವ ಇರುವಾಗ ನಮ್ಮ ಪ್ರತಿರೋದ-'ದ ದಿಕ್ಕು ಇರಬೇಕಾದುದು ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಸೋಲಿಸುವುದರತ್ತಲೇ. ನಿಜ, ಸಂದರ್ಭಸಾಧಕ ರಾಜಕಾರಣವೇ ವಿಜೃಂಭಿಸುತ್ತಿರುವಾಗ ಈ ಕೂಡಲೇ ಒಂದು ಪರ್ಯಾಯ ಕಾಣುವುದು ಅಷ್ಟು ಸರಳವಲ್ಲ ಎನ್ನಿಸಬಹುದು. ಆದರೆ ಇಂತಹ ನೀತಿ ಆಧಾರದ ರಾಜಕೀಯ ಹೋರಾಟಗಳೇ ಮುಂದೆ ಜನತೆಯ ನಿಜವಾದ ಪರ್ಯಾಯವನ್ನು ರೂಪಿಸಬಲ್ಲುದು.

ಯುಪಿಎ ಹಠಮಾರಿತನ...

ಪುಟ 7 ರಿಂದ

ಒಂದು ಪರ್ಯಾಯ ಧೋರಣೆಯ ದಿಕ್ಕಿಗಾಗಿ ಜನತಾ ಹೋರಾಟಗಳನ್ನು ಇನ್ನಷ್ಟು ಬಲಪಡಿಸಬೇಕಾಗಿದೆ. ಸಿಪಿಐ(ಎಂ)ನ ಸಂಘರ್ಷ ಸಂದೇಶ ಜಾಥಾಗಳು ಮತ್ತು ಅದು ಮುಂದಿಟ್ಟ ಪರ್ಯಾಯ ಧೋರಣೆಯನ್ನು ಅನುಸರಿಸಿ ಈಗ ಮೇ ತಿಂಗಳ ಉತ್ತರಾರ್ಧದಲ್ಲಿ ಎಲ್ಲ ಕೇಂದ್ರ ಸರಕಾರೀ ಕಚೇರಿಗಳ ಪಿಕೆಟಿಂಗ್ ನಡೆಸಲು ಸಿಪಿಐ(ಎಂ) ಕರೆ ನೀಡಿದೆ. ಈ ಹೋರಾಟ ಒಂದು ಕಾನೂನು ಭಂಗ ಚಳುವಳಿಯ ಸ್ವರೂಪವನ್ನು ಪಡೆಯಲಿದೆ. ಈ ಚಳುವಳಿಯ ಶಕ್ತಿಯಿಂದ ಮಾತ್ರವೇ ಯುಪಿಎ ಸರಕಾರ ಮೇಲೆ ಹೇಳಿದ ಜನ-ವಿರೋಧಿ ಕ್ರಮಗಳಿಗೆ ಕೈಹಾಕದಂತೆ ತಡೆದು ನಿಲ್ಲಿಸಲು ಸಾಧ್ಯ. ಹೀಗೆ ಒಂದು ಉತ್ತಮ ಭಾರತಕ್ಕಾಗಿ, ನಮ್ಮ ವಿಶಾಲ ಜನಸಮೂಹಗಳಿಗೆ ಉತ್ತಮ ಬದುಕಿನ ಸ್ಥಾನಮಾನಗಳಿಗಾಗಿ, ಈ ಸಾಮೂಹಿಕ ಪಿಕೆಟಿಂಗ್ ಕಾರ್ಯಕ್ರಮ ಯಶಸ್ವಿಯಾಗಬೇಕಷ್ಟೇ ಅಲ್ಲ, ಸರಕಾರ ಈ ವಿನಾಶಕಾರಿ ದಾರಿಯಲ್ಲಿ ಮುಂದುವರೆಯದಂತೆ ತಡೆದು ನಿಲ್ಲಿಸಬಲ್ಲ ಶಕ್ತಿಯನ್ನು ಪಡೆದುಕೊಳ್ಳಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ



ಜಿ.ಎನ್. ನಾಗರಾಜ್ 31

ಕಾರ್ಮಿಕ ಚಳುವಳಿಯ ಭಾರೀ ಅಲೆಯೊಂದು ಅಪ್ಪಳಿಸಿತು

ಇಲ್ಲಿ ವಿಧಾನಸಭಾ ಚುನಾವಣೆಗಳ ನಡುವೆ 2013ರ ಮೇ ದಿನಾಚರಣೆ ಮಾಡಲು ಸಿದ್ಧತೆಯಲ್ಲಿ ಕಾರ್ಮಿಕರು ತೊಡಗಿದ್ದಾರೆ. ಈ ಸಂದರ್ಭದಲ್ಲಿ ಅಲ್ಲಿ ಚೀನಾದಲ್ಲಿ 1925 ರ ಮೇ ದಿನದ ಸುತ್ತ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳುಗಳಲ್ಲಿ ಅವರನ್ನು ಹಿಂಸಿಸುತ್ತಿದ್ದ, ಕೊಲ್ಲಲೂ ಆರಂಭಿಸಿದ ಬ್ರಿಟಿಷ್, ಜಪಾನೀ ಸಾಮ್ರಾಜ್ಯಶಾಹಿಗಳ ವಿರುದ್ಧ ಕಾರ್ಮಿಕರು ಸಮರ ಸಾರಿದ ವೀರಗಾಥೆಯನ್ನು ತಿಳಿದುಕೊಳ್ಳೋಣ.

1922 ರ ಫೆಬ್ರುವರಿ ಹತ್ಯಾಕಾಂಡದ ನಂತರ ಇಡೀ ಚೀನಾದಲ್ಲಿ ಕಾರ್ಮಿಕ ಸಂಘಗಳ ಮೇಲೆ ಯುದ್ಧಕೋರ ಪಾಳೆಯಗಾರರ ಹಾಗೂ ಸಾಮ್ರಾಜ್ಯಶಾಹಿಗಳ ಧಾಳಿಯ ಹಿನ್ನೆಲೆಯಲ್ಲಿ ಅನಯುವಾನ್ ಗಣಿ ಪ್ರದೇಶದ ಹೊರತಾಗಿ ಕಾರ್ಮಿಕ ಚಳುವಳಿ ಸ್ಥಗಿತಗೊಂಡಿತ್ತು. ಕೋಮಿಂಟಾಂಗ್ –ಕಮ್ಯುನಿಸ್ಟ್ ಪಕ್ಷಗಳ ಮೈತ್ರಿ, ಕ್ಯಾಂಟನ್ ನಗರದಲ್ಲಿ, ಗ್ವಾಂಗ್ ಡಾಂಗ್ ರಾಜ್ಯದಲ್ಲಿ ಕೋಮಿಂಟಾಂಗ್ ಸರ್ಕಾರದ ಸ್ಥಾಪನೆ ಇದು ಮತ್ತೆ ಕಾರ್ಮಿಕರಿಗೆ ಹುಮ್ಮಸ್ಸು ತುಂಬಿತು. ಕೋಮಿಂಟಾಂಗ್ ಪಕ್ಷದ ಮಹಾಧಿವೇಶನದಲ್ಲಿ ಕಾರ್ಮಿಕರಿಗಾಗಿ ಕಾನೂನುಗಳ ರಚನೆ ಹಾಗೂ ಕಾರ್ಮಿಕರನ್ನು ಸಂಘಟಿಸುವ ಬಗ್ಗೆ ತೀರ್ಮಾನ ಮಾಡಲಾಗಿತ್ತು. ಈ ತೀರ್ಮಾನಗಳು ಕಾರ್ಮಿಕರಿಗೆ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಧೈರ್ಯ ತುಂಬಿದವು.

ಕ್ಯಾಂಟನ್ ನಗರದಲ್ಲಿ ಬ್ರಿಟಿಷ್ ಅಧೀನದಲ್ಲಿದ್ದ ಶಮೀನ್ ಎಂಬ ಪ್ರದೇಶಕ್ಕೆ ಹೋಗುವಾಗ ಬರುವಾಗ ಪ್ರತಿ ಚೀನೀಯರೂ ಗುರುತು ಚೀಟಿ ತೋರಿಸಬೇಕೆಂದು ಬ್ರಿಟಿಷರು ಅವಮಾನಕಾರಿ ನಿಯಮಾವಳಿಗಳನ್ನು ಮಾಡಿದರು. ತಮ್ಮದೇ ದೇಶದ ನಗರದಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುವಾಗ, ಅದರಲ್ಲಿಯೂ ದಿನನಿತ್ಯ ಓಡಾಡಬೇಕಾದ ಕಾರ್ಮಿಕರು ಗುರುತು ತೋರಿಸಬೇಕೇ ಎಂಬ ಪ್ರಶ್ನೆಯನ್ನು ಅಲ್ಲಿಯ ಕಾರ್ಮಿಕ ವರ್ಗ ಎತ್ತಿತು. ಇದು ಕಾರ್ಮಿಕರ ಆರ್ಥಿಕ ಪ್ರಶ್ನೆಯಾಗಿರಲಿಲ್ಲ. ಚೀನಾ ಯಾರಿಗೆ ಸೇರಿದ್ದು ಎಂಬ ಸಾರ್ವಭೌಮತೆಯ ಪ್ರಶ್ನೆಯಾಗಿತ್ತು. ಶಮೀನ್ ಪ್ರದೇಶದ ಕಾರ್ಮಿಕರು ಗುರುತು ಚೀಟಿ ನಿಯಮವನ್ನು ರದ್ದುಪಡಿಸಬೇಕೆಂದು ಮುಷ್ಕರ ನಡೆಸಿದರು. ಒಂದು ತಿಂಗಳ ದೀರ್ಘ ಕಾಲ ಮುಷ್ಕರ ನಡೆಯಿತು. ಕೊನೆಗೆ ಬ್ರಿಟಿಷ್ ಆಡಳಿತಗಾರರು ಮಣಿಯಲೇಬೇಕಾಯಿತು. ಈ ಯಶಸ್ಸು ದೇಶದ ವಿವಿಧ ಭಾಗಗಳಲ್ಲಿ ಕಾರ್ಮಿಕರಲ್ಲಿ ಹೊಸ ಉತ್ಸಾಹವನ್ನು ಮೂಡಿಸಿತು. ಚೀನಾದ ಮಧ್ಯ ಹಾಗೂ ಉತ್ತರ ಭಾಗಗಳಲ್ಲಿ, ಶಾಂಘೈ ನಗರದ ಹೊಗೆಸೊಪ್ಪು ಕಾರಖಾನೆಯಲ್ಲಿ ಕೂಡ ಮುಷ್ಕರಗಳಿಗೆ ನಾಂದಿ ಹಾಡಿತು. ಈ ಎಲ್ಲ ಮುಷ್ಕರಗಳಲ್ಲಿ ಹತ್ತಾರು ಸಾವಿರ ಕಾರ್ಮಿಕರು ಪಾಲಗೊಂಡರು. ಮತ್ತೆ ಕಾರ್ಮಿಕರ ಹೋರಾಟದ ಹೊಸ ಅಲೆಯೊಂದು ಆರಂಭವಾಯಿತು.

ಬೀಜಿಂಗ್‌ನಲ್ಲಿ ಕೂಡ ವಿವಿಧ ಯುದ್ಧ–ಕೋರ ಪಾಲೆಯಗಾರರ ನಡುವೆ ಸಂಘರ್ಷ ನಡೆಯುತ್ತಿದ್ದದರಿಂದ ಅಲ್ಲಿ ಕೂಡ ಹಿಂದೆ 1922 ರ ಮುಷ್ಕರದಲ್ಲಿ ಬಂಧಿಸಲ್ಪಟ್ಟಿದ್ದ ಕಾರ್ಮಿಕರನ್ನು ಬಿಡಿಸಿಕೊಳ್ಳಲು ಸಾಧ್ಯವಾಯಿತು. ಅಂದು ಸ್ಥಗಿತಗೊಂಡಿದ್ದ ರೈಲ್ವೆ ಕಾರ್ಮಿಕ ಸಂಘಗಳ ರಾಷ್ಟ್ರ ಮಟ್ಟದ ಒಕ್ಕೂಟದ ಎರಡನೇ ಸಮ್ಮೇಳನ ನಡೆಯಿತು. ಈ ಸಮ್ಮೇಳನದ ಕರೆಯಂತೆ ದೇಶದ ಅನೇಕ ಕಡೆಗಳಲ್ಲಿ ರೈಲ್ವೇ ಕಾರ್ಮಿಕರ ಮುಷ್ಕರಗಳು ನಡೆದವು.

ಕಮ್ಯುನಿಸ್ಟ್ ಪಕ್ಷದ ನಾಲ್ಕನೇ ಅಧಿವೇಶನ

ಚೀನಾದ ಅಂದಿನ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಿ ಅದರ ಹಿನ್ನೆಲೆಯಲ್ಲಿ ಚಳುವಳಿಯ ರೂಪು ರೇಷೆಗಳನ್ನು ತೀರ್ಮಾನಿಸಿತು. ಅಂದು ಚೀನಾದಲ್ಲಿ ಚೀನೀ ಬಂಡವಾಳಗಾರರನ್ನು ತುಳಿದು ಸಾಮ್ರಾಜ್ಯಶಾಹೀ ಬಂಡವಾಳಗಾರರು ವಿಜೃಂಭಿಸುತ್ತಿದ್ದ ಕಾಲ. ಅಂದು ಚೀನಾದ ಪ್ರಧಾನ ಕೈಗಾರಿಕೆ ಬಟ್ಟೆ ಉತ್ಪಾದನೆ. ಅದರಲ್ಲಿ 1922 –27 ರ ನಡುವೆ ಚೀನಾದ ಬಂಡವಾಳಗಾರರ ಪಾಲು ಶೇ.83 ರಿಂದ 47 ಕ್ಕಿಳಿಯಿತು. ಹೀಗೆ ಅನೇಕ ರಂಗಗಳಲ್ಲಿ ಚೀನೀ ಬಂಡವಾಳಗಾರರಿಗೆ ಹಿನ್ನಡೆಯಾಯಿತು. ಚೀನಾವನ್ನು ಆಳುತ್ತಿದ ಯುದ್ಧಕೋರ ಪಾಳೆಯಗಾರರ ನಡುವೆಯೂ ಪರಸ್ಪರ ಕಾದಾಟಗಳು ಪದೇ ಪದೇ ನಡೆದು ಹಳೆಯ ಪಾಳೇಯಗಾರರು ಸೋತು ಹೊಸ ಪಾಳೆಯಗಾರರು ಅಧಿಕಾರವನ್ನು ಆಕ್ರಮಿಸಿಕೊಂಡ ಕಾಲ ಅದು. ಹೊಸ ಪಾಳೆಯಗಾರರ ಅಧಿಕಾರ ಇನ್ನೂ ಸ್ಥಿರಗೊಂಡಿರಲಿಲ್ಲ. ಈ ಪರಿಸ್ಥಿತಿಯನ್ನು ಬಳಸಿಕೊಳ್ಳಬೇಕು. ಈಗ ಚಳುವಳಿಯ ಹೊಸ ಅಲೆಯ ಕಾಲವೂ ಹೌದು. ಆದ್ದ–ರಿಂದ ಚಳುವಳಿಯನ್ನು ತೀವ್ರಗೊಳಿಸಬೇಕು. ಅದು ಪಕ್ಷದ ಸಂಘಟನಾ ಹಾಗೂ ಪ್ರಚಾರ ಕಾರ್ಯದ ಪರಿಣಾಮಕಾರೀ ಸಾಮರ್ಥ್ಯವನ್ನೇ ಅವಲಂಬಿಸಿದೆ. ತಕ್ಷಣವೇ ಕಾರ್ಯ ಪ್ರವೃತ್ತರಾಗಬೇಕು ಎಂದು ಪಕ್ಷ ತೀರ್ಮಾನಿಸಿತು.

ಯುದ್ಧಕೋರ ಪಾಳೆಯಗಾರರು ಇದೇ ಸಂದರ್ಭದಲ್ಲಿ ಸನ್ ಯಾತ್ ಸೇನ್ ರವರನ್ನು ಮತುಕತೆಗೆ ಬೀಜಿಂಗ್‌ಗೆ ಅಹ್ವಾನಿಸಿದರು. ಇದು ಜನತೆಯಲ್ಲಿ ಹೊಸ ನಿರೀಕ್ಷೆಗಳನ್ನು ಉಂಟುಮಾಡಿತು. ಸನ್ ರವರು ಈ ಅವಕಾಶವನ್ನು ಬಳಸಿಕೊಂಡು ಇಡೀ ಚೀನಾದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ, ಹೊಸ ಸಂವಿಧಾನದ ರಚನೆಗಾಗಿ ಒಂದು ಕಾರ್ಮಿಕರ, ರೈತರ, ಮಧ್ಯಮ ವರ್ಗಗಳ, ಬುದ್ಧಿಜೀವಿಗಳ, ವಾಣಿಜ್ಯ ಮಂಡಳಿಗಳ ರಾಷ್ಟ್ರೀಯ ಸಮಾವೇಶವನ್ನು ಕರೆಯಬೇಕೆಂದು ಒತ್ತಾಯಿಸಿದರು. ಈ ಕರೆ ಉಂಟುಮಾಡಿದ ಸನ್ನಿವೇಶವನ್ನು ಬಳಸಿಕೊಂಡು ಚೀನಾದಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿಗಾಗಿ ವಿಶಾಲ ಜನ ಸಮುದಾಯವನ್ನು ಸೆಳೆಯಲು "ರಾಷ್ಟ್ರೀಯ ಸಮಾವೇಶಕಾಗಿ ಒತ್ತಾಯ ಮಾಡುವ ಸಂಘಗಳನ್ನು ರಚಿಸಲು ತೀರ್ಮಾನಿಸಿತು. ಇವು ಒಂದರ ನಂತರ ಒಂದರಂತೆ ಶಾಂಘೈ, ಗ್ವಾಂಗ್ ಡಾಂಗ್, ಹುನಾನ್, ಮೊದಲಾದ ಅನೇಕ ರಾಜ್ಯಗಳಲ್ಲಿ ರಚನೆಗೊಂಡು ಪ್ರಜಾಪ್ರಭುತ್ವ ಚಳುವಳಿಯ ವಾತಾವರಣವನ್ನು ನಿರ್ಮಿಸಲು ಸಹಾಯ ಮಾಡಿದವು.



ಮಹಾ ಹೋರಾಟಗಳು

ಮೊದಲ ಮಹಾಯುದ್ಧದ ನಂತರ ಅಂ–ದರೆ 1918 ರ ನಂತರ ಚೀನಾದಲ್ಲಿ ವೇಗವಾಗಿ ಬೆಳೆಯುತ್ತಿದ್ದ ಜಪಾನೀ ಕೈಗಾರಿಕೆಗಳು ಅತ್ಯಂತ ಅಮಾನವೀಯವಾಗಿ ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದವು. ಕೊನೆಗೆ ಬಾಲಕ–ಬಾಲಕಿಯರನ್ನು ತರಬೇತಿಗೊಳಿಸಿ ಉಪಯೋಗಿಸಲು ಕಾರ್ಮಿಕರಿಗೆ ಕೆಲಸದ ವಂಚನೆ ಮಾಡಲು ತೀರ್ಮಾನಿಸಿದವು. ಈ ಎಲ್ಲ ಕ್ರೌರ್ಯಗಳ ವಿರುದ್ಧ ಮೊಳೆತಿದ್ದ ಕೋಪ ಈ ಹೊಸ ವಾತಾವರಣದಲ್ಲಿ ಹೊರಗೆ ಬಂದಿತು, ಶಾಂಘೈ ನಗರದಲ್ಲಿದ್ದ ಎಲ್ಲ ಜಪಾನೀ ಕೈಗಾರಿಕೆಗಳ ಕಾರ್ಮಿಕರೂ ಮುಷ್ಕರ ಆರಂಭಿಸಿದರು. ಇದು ಕೂಡ ಬೇರೆ ನಗರಗಳಲ್ಲಿಯೂ ಜಪಾನೀ ಕೈಗಾರಿಕೆಗಳಲ್ಲಿ ಮುಷ್ಕರಕ್ಕೆ ಪ್ರೋತ್ಸಾಹ ನೀಡಿತು. ಕಾರ್ಮಿಕರು ಸಂಘಟನೆಯ ಮಹತ್ವವನ್ನು ಅರಿತುಕೊಂಡು ದೊಡ್ಡ ಸಂಖ್ಯೆಯಲ್ಲಿ ಸಂಘಗಳಿಗೆ ಸೇರುತ್ತಿದ್ದಂತೆ ಮಾಲೀಕ ವರ್ಗ ಭಯಗೊಂಡು ಈ ಸಂಘಗಳನ್ನು ನಿಷೇಧಿಸುವುದು, ಕಾರ್ಮಿಕ ನಾಯಕರನ್ನು ಬಂಧಿಸುವುದು ಇಂತಹ ದಮನಕಾರೀ ಕ್ರಮಗಳನ್ನು ಕೈಗೊಳ್ಳಲಾರಂಭಿಸಿದುವು. ಜಪಾನೀ ಸಮ್ರಾಜ್ಯಶಾಹೀ ಸರ್ಕಾರ ತನ್ನ ಯುದ್ಧ ನೌಕೆಗಳನ್ನು ಚೀನಾದ ತೀರ–ಕ್ಕೆ ಅಟ್ಟಿತು. ಜಪಾನಿನ ಮಂತ್ರಿಯೇ ಚೀನಾಕ್ಕೆ ಎಚ್ಚರಿಕೆ ನೀಡುವಷ್ಟು ದಾರ್ಷ್ಟ್ಯವನ್ನು ತೋರಿಸಿದ.

ಅಖಿಲ ಚೀನಾ ಕಾರ್ಮಿಕ ಸಂಘಗಳ ಒಕ್ಕೂಟದ ಸ್ಥಾಪನೆ ಮತ್ತು ಎರಡನೆಯ ಸಮ್ಮೇಳನ

ಈ ರೀತಿಯ ಕಾರ್ಮಿಕ ಹೋರಾಟಗಳು ಹಾಗೂ ಅವನ್ನು ದಮನ ಮಾಡಲು ಕೈಗೊಂಡ ಕ್ರಮಗಳ ತೀವ್ರಗೊಂಡ ಸಂಘರ್ಷದ ಪರಿಸ್ಥಿತಿಯಲಿ 1925 ರ ಮೇ ದಿನದಂದೇ ಕ್ಯಾಂಟನ್ ನಗರದಲ್ಲಿಯೇ ಚೀನಾದ ಎರಡನೇ ಕಾರ್ಮಿಕ ಸಮ್ಮೇಳನ ಜರುಗಿತು. ಮೊದಲ ಸಮ್ಮೇಳನದಲ್ಲಿ ತೀರ್ಮಾನಿಸಿದಂತೆ ಸಂವಿಧಾನವನ್ನು ಅಂಗೀಕರಿಸಿ ಕಾರ್ಮಿಕ ಸಂಘಗಳ ಒಕ್ಕೂಟವನ್ನು ರಚಿಸಿಕೊಳ್ಳಲಾಯಿತು. ಈ ಸಮ್ಮೇಳನ ಕಾರ್ಮಿಕ ಚಳುವಳಿಯನ್ನು ತೀವ್ರಗೊಳಿಸಲು, ಸಂಘಟನೆಯನ್ನು ವಿಸ್ತರಿಸಲು ಹಲವು ತೀರ್ಮಾನಗಳನ್ನು ಕೈಗೊಂಡಿತು.

ಈ ಸಮ್ಮೇಳನ ನಡೆದ ನಂತರ ಕಾರ್ಮಿಕರ ಹೋರಾಟಗಳು ಮತ್ತಷ್ಟು ಕೇಂದ್ರಗಳಿಗೆ ಹಬ್ಬುತ್ತಿದ್ದಂತೆ ಈ ಚಳುವಳಿಯ ಅಲೆಯನ್ನು ಎಲ್ಲ ರೀತಿಯ ದಮನಕಾರೀ ಕ್ರಮಗಳ ಮೂಲಕ ಮುರಿಯಲೇಬೇಕೆಂದು ವಿದೇಶೀ ಕಂಪನಿಗಳ ಮಾಲೀಕ ವರ್ಗ ತೀರ್ಮಾನಿಸಿದವು. ಶಾಂಘೈಯಲ್ಲಿ ನಡೆ–ಯುತ್ತಿದ್ದ ಮುಷ್ಕರವನ್ನು ಮುರಿಯಲು ವಿಫಲರಾದ ಜಪಾನೀ ಮಾಲೀಕ ವರ್ಗ ಮೇ 15 ರಂದು ಗುಂಡು ಹಾರಿಸಿ ಒಬ್ಬ ಕಾರ್ಮಿಕನನ್ನು ಕೊಲೆಮಾಡಿದ. ಹಲವರು ಕಾರ್ಮಿಕರು ತೀವ್ರವಾಗಿ ಗಾಯಗೊಂಡರು. ಹಾಗೆಯೇ ಮತ್ತೊಂದು ನಗರದಲ್ಲಿಯೂ ಮೇ 28 ರಂದು ಗುಂಡು ಹಾರಿಸಿ ಹಲವು ಕಾರ್ಮಿಕರನ್ನು ಕೊಂದರು.

ಈ ಕ್ರೌರ್ಯಗಳು ಚೀನಾದ ಜನತೆಯನ್ನು ಸಿಟ್ಟಿಗೇಳಿಸಿದವು. ಶಾಂಘೈನ ಮತ್ತಷ್ಟು ಕಾರ್ಮಿಕರು ಮುಷ್ಕರಕ್ಕೆ ಧುಮುಕಿದರು. ವಿದ್ಯಾರ್ಥಿಗಳು ಸಂತಾಪ ಸಭೆಗಳನ್ನು ನಡೆಸುವುದು, ಕಾರ್ಮಿಕ ಕುಟುಂಬಗಳ ಸಹಾಯಕ್ಕಾಗಿ ನಿಧಿಸಂಗ್ರಹಗಳಲ್ಲಿ ತೊಡಗಿದರು. ಈ ವಿದ್ಯಾರ್ಥಿಗಳನ್ನು ಅಲ್ಲಿಯ ಸರ್ಕಾರ ಬಂಧಿಸಿ ಸೆರೆಮನೆಗಟ್ಟಿದರು. ಇವರ ವಿಚಾರಣೆಯನ್ನು ಮೇ 30ಕ್ಕೆ ನಿಗದಿ ಪಡಿಸಲಾಯಿತು.

ಮೇ 30 ರ ಹತ್ಯಾಕಾಂಡ

ಈ ಎಲ್ಲ ಚಳುವಳಿಗಳನ್ನು ಹತ್ತಿಕ್ಕಲು ಇನ್ನೂ ಹಲವು ಕಾನೂನುಗಳನ್ನು ತರುವ ಕ್ರಮಗಳನ್ನು ಕೈಗೊಳ್ಳ ಬೇ–ಕೆಂದು ಶಾಂಘೈ ನಗರದ ವೀದೇಶೀ ಭಾಗಗಳ ಆಡಳಿತ ತೀರ್ಮಾನಿಸಿತು. ಚೀನೀ

ಪುಟ 15 ಕ್ಕೆ

ಯುಗಪ್ರವರ್ತಕ.......

ಪುಟ 2 ರಿಂದ

ಕಾರ್ಮಿಕರು ಸತ್ತು ಬಿದ್ದರು. ಸಾವಿರಾರು ಜನರ ಬಂಧನವಾಯಿತು. ಪವಿತ್ರ ಭಾನುವಾರ ರಕ್ತದ ಭಾನುವಾರವಾಯಿತು.


ಲೆನಿನ್‌ರಿಗೆ ಈ ಸುದ್ದಿ ಮುಟ್ಟಿದಾಗ 'ರಶಿಯಾದಲ್ಲಿ ಕ್ರಾಂತಿ ಆರಂಭವಾಗಿದೆ' ಎಂದುಕೊಂಡು ರಹಸ್ಯವಾಗಿ ಪೀಟರ್ಸ್‌ಬರ್ಗ್ ಬಂದು ಸೇರಿದರು. ಈ ಅವಧಿಯಲ್ಲಿ ರೈತರು, ಕಾರ್ಮಿಕರು 'ಸೋವಿಯೆತ್'ಗಳನ್ನು ರಚಿಸಿಕೊಂಡು ತಮ್ಮದೇ ಆದ ಸರ್ಕಾರವನ್ನು ನಡೆಸಲಾರಂಭಿಸಿದ್ದರು. ಈ ಪ್ರಯತ್ನವನ್ನು ಝಾರ್‌ಚಕ್ರವರ್ತಿ ಭಯಂಕರ ದಬ್ಬಾಳಿಕೆಯಿಂದ ಬಗ್ಗುಬಡಿದರು. ಸೈನ್ಯ ಬಲ ಅಧಿಕವಾಗಿದ್ದುದರಿಂದ ಕಾರ್ಮಿಕರು ಸೋತುಹೋದರು. ಅನೇಕರು ಪ್ರಾಣ ಕಳೆದುಕೊಂಡರು. ಲೆನಿನ್ನರನ್ನು ಬಂಧಿಸಲು ನಡೆಸಲಾದ ಪ್ರಯತ್ನ ಯಶಸ್ವಿಯಾಗಲಿಲ್ಲ. ಕಾರ್ಮಿಕರು ಅವರನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ರಕ್ಷಿಸುತ್ತಿದ್ದರು. ಅಲ್ಲಿಂದ ತಪ್ಪಿಸಿಕೊಂಡ ಲೆನಿನ್ ಸ್ವಾಕ್‌ಹೋಂಗೆ ತೆರಳಿದರು. ಮುಂದೆ ಪ್ಯಾರಿಸ್‌ನಲ್ಲಿ ವಾಸವಾಗಿದ್ದುಕೊಂಡು ರಶಿಯಾದಿಂದ ತಂಡವಾಗಿಬರುತ್ತಿದ್ದ ಪಕ್ಷದ ಸದಸ್ಯರಿಗೆ ರಾಜಕೀಯ ಪಾಠಗಳನ್ನು ಹೇಳುತ್ತಿದ್ದರು.

ಕ್ರಾಂತಿ ಸೋತುಹೋದ ಹಿನ್ನೆಲೆಯಲ್ಲಿ ಪಕ್ಷದ ಸಾವಿರಾರು ಸದಸ್ಯರು ಮತ್ತು ಮುಂದಾಳುಗಳು ಪಕ್ಷದಿಂದ ದೂರ ಸರಿದರು. ಕೆಲವರು ಆಧ್ಯಾತ್ಮವಾದಕ್ಕೆ ಹಿಂತಿರುಗಿದರು. ಈ ಕಾಲವಧಿಯಲ್ಲಿ ಲೆನಿನ್ ಒಂದು ಮಹಾನ್ ಮಾರ್ಕ್ಸ್‌ವಾದಿ ಗ್ರಂಥವನ್ನು ಬರೆದರು. ಅದುವೇ "ಆಧ್ಯಾತ್ಮಿಕವಾದದ ಒಂದು ಭೌತವಾದಿ ವಿಮರ್ಶೆ". (1908)

ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಪದ್ಧತಿಯ ಅತ್ಯುನ್ನತ ಘಟ್ಟ :

ರಶಿಯಾದಲ್ಲಿ 1907 ರಿಂದ 1912 ರ ನಡುವಿನ ಕಾಲಾವಧಿಯಲ್ಲಿ ಸ್ಥಗಿತಗೊಂಡಿದ್ದ ಕಾರ್ಮಿಕ ಚಳುವಳಿ ಮನಃ ಚೇತರಿಸತೊಡಗಿತ್ತು. ಕಾರ್ಮಿಕ ಮುಷ್ಕರಗಳು, ರೈತರ ಕೃಷಿ ಕೂಲಿಗಾರರ ಪ್ರತಿಭಟನೆಗಳು ಹೆಚ್ಚಾದವು. ನಿಷ್ಕ್ರಿಯಗೊಂಡ 'ಸೋವಿಯತ್'ಗಳು ಪುನಃ ಸ್ಥಾಪಿತವಾದವು.

ಇದೇ ಸಮಯದಲ್ಲಿ ಯುರೋಪಿನ ಬಂಡವಾಳಶಾಹಿ ರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಬೆಲ್ಜಿಯಂ, ಇಟಲಿ ಮೊದಲಾದ ರಾಷ್ಟ್ರಗಳಲ್ಲಿ ಬಂಡವಾಳಶಾಹಿ ಪದ್ಧತಿಯು ಸಾಮ್ರಾಜ್ಯಶಾಹಿ ಪದ್ಧತಿಯಾಗಿ ಬೆಳೆದಿತ್ತು. ಈ ರಾಷ್ಟ್ರಗಳು ವಿಶ್ವವನ್ನು ತಮ್ಮೊಳಗೆ ಹಂಚಿಕೊಂಡಿದ್ದವು. ಪುನರ್ ಹಂಚಿಕೊಳ್ಳಲು ಪೈಪೋಟಿ ನಡೆಸುತ್ತಿದ್ದವು. ಮಹತ್ವದ ಈ ಬೆಳವಣಿಗೆಯನ್ನು ವಿಶ್ವದ ಕಾರ್ಮಿಕ ವರ್ಗ ಮತ್ತು ಕಾರ್ಮಿಕ ವರ್ಗದ ಪಕ್ಷಗಳು ಸರಿಯಾಗಿ ಗ್ರಹಿಸಿಕೊಂಡು ಕ್ರಾಂತಿಯ ತಮ್ಮ



ಕಾರ್ಯಕ್ರಮವನ್ನು ರೂಪಿಸಬೇಕೆಂದು ಲೆನಿನರು "ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಪದ್ಧತಿಯ ಅತ್ಯುನ್ನತ ಘಟ್ಟ" ಎಂಬ ಮಹಾ ಗ್ರಂಥವನ್ನು ಬರೆದರು. (1916) ಈ ಗ್ರಂಥದಲ್ಲಿ ಅವರು ಸಾಮ್ರಾಜ್ಯಶಾಹಿ ಯುದ್ಧದಲ್ಲಿ ನಿರತವಾದ ದೇಶಗಳಲ್ಲಿ ದುರ್ಬಲವಾದ ಕೊಂಡಿಯನ್ನು ಜನತೆಯ ಕ್ರಾಂತಿಕಾರಿ ಹೋರಾಟದ ಮೂಲಕ ಧ್ವಂಸಮಾಡಿ ಒಂದೇ ದೇಶದಲ್ಲಿ ಸಮಾಜವಾದಿ ಕ್ರಾಂತಿಯನ್ನು ಯಶಸ್ವಿಗೊಳಿಸಬಹುದೆಂದು ವೈಜ್ಞಾನಿಕವಾಗಿ ಪ್ರತಿಪಾದಿಸಿದರು. ಈ ಗ್ರಂಥವು ಮಾರ್ಕ್ಸ್‌ವಾದಕ್ಕೆ ಲೆನಿನ್ನರು ನೀಡಿದ ಮಹತ್ವದ ಕೊಡುಗೆಯಾಗಿದೆ.

ಅಗಸ್ಟ್ 1914 ರಲ್ಲೇ ಮೊದಲನೆಯ ಮಹಾಯುದ್ಧ ಪ್ರಾರಂಭವಾಗಿತ್ತು. ರಶಿಯಾದ ಝಾರ್ ಸರ್ಕಾರ ಯುದ್ಧದಲ್ಲಿ ಪಾಲ್ಗೊಂಡಿತ್ತು. ಜರ್ಮನಿ ಒಂದು ಕಡೆಯಾದರೆ, ಉಳಿದ ದೇಶಗಳೆಲ್ಲಾ ಇನ್ನೊಂದು ಕಡೆ. ಲೆನಿನ್ ಸ್ವಿಟ್ಜರ್ಲೆಂಡ್‌ನಲ್ಲಿ ಯುದ್ಧ ವಿರೋಧಿ ಪ್ರಚಾರದಲ್ಲಿ ತೊಡಗಿದ್ದರು. ಇದರಿಂದ ಎಚ್ಚೆತ್ತ ರಶಿಯಾ ಸೈನಿಕರು ಸೈನ್ಯಾಧಿಕಾರಿಗಳ ವಿರೋಧವನ್ನು ಲೆಕ್ಕಿಸದೆ, ಸೈನ್ಯವನ್ನು ತ್ಯಜಿಸಿ ಸೋವಿಯೆತ್‌ಗಳನ್ನು ಕಟ್ಟತೊಡಗಿದರು.

ರಶಿಯಾದ ಜನತೆ ಯುದ್ಧದ ಪರಿಣಾಮಗಳಿಂದ ತತ್ತರಿಸಿ ಹೋಗಿತ್ತು. ಝಾರ್ ಚಕ್ರವರ್ತಿಯ ನಿರಂಕುಶ ಆಳ್ವಿಕೆಯ ವಿರುದ್ಧ ಜನತೆಯ ಆಕ್ರೋಶ ಸ್ಫೋಟಗೊಂಡಿತು. ಬೊಲ್ಶೆವಿಕ್ ಪಾರ್ಟಿ ಹೋರಾಟಕ್ಕೆ ನೇತೃತ್ವ ನೀಡಿತು. ಚಕ್ರವರ್ತಿಯ ದೌರ್ಜನ್ಯ ಮಾತ್ರ ನಿಲ್ಲಲಿಲ್ಲ. ಹೋರಾಟದಲ್ಲಿ ಲಕ್ಷಾಂತರ ಮಂದಿ ಸಾವನ್ನಪ್ಪಿದರು. ದಂಗೆ ಸಾರ್ವತ್ರಿಕವಾಯಿತು. ಕ್ರಾಂತಿಯ ಸ್ವರೂಪತಾಳಿತು. 1917ರ ಫೆಬ್ರವರಿಯಲ್ಲಿ ಝಾರ್ ಆಳ್ವಿಕೆ ಪತನವಾಯಿತು. ಚಕ್ರವರ್ತಿ ನಿಕೋಲಸ್‌ರನ್ನು ಜನ ಬಂಧಿಸಿ ಗಲ್ಲಿಗೇರಿಸಿದರು. ಪ್ರಭುತ್ವಾಧಿಕಾರ ಜನರ ಕೈಗೆ ಸೇರಿತು.

1917ರ ನವಂಬರ್ ಕ್ರಾಂತಿ :

ಝಾರ್ ಸಾಮ್ರಾಜ್ಯದ ಪತನದ ನಂತರ ರಶಿಯಾದಲ್ಲಿ ಮೆನ್ಶೆವಿಕರ ಪಾರ್ಟಿ, ಬಂಡವಾಳಗಾರರ ಮತ್ತು ಜಮಿನ್ದಾರರ ಪಾರ್ಟಿಗಳು ಸೇರಿಕೊಂಡು, ಬೊಲ್ಶೆವಿಕರನ್ನು ಹೊರಗಿಟ್ಟು 'ನಡುಗಾಲ ಸರ್ಕಾರ'ವನ್ನು ರಚಿಸಿಕೊಂಡರು. ಹೊಸ ಸರ್ಕಾರ ಯುದ್ಧವನ್ನು ಮುಂದುವರಿಸುವ ನಿರ್ಧಾರ ತೆಗೆದುಕೊಂಡು ಜನತೆಯನ್ನು ಹತಾಶಗೊಳಿಸಿತು. ಲೆನಿನ್ ರಶಿಯಾಕ್ಕೆ ಮರಳಿದರು. ಬೊಲ್ಶೆವಿಕ್ ಪಕ್ಷದ ಮುಖಂಡರು, ಸದಸ್ಯರು, ಸೈನಿಕರು, ಮತ್ತು ಜನತೆ ಲೆನಿನ್ನರಿಗೆ ಭವ್ಯವಾದ ಸ್ವಾಗತ ನೀಡಿದರು.

1917 ಏಪ್ರಿಲ್ 4 ರಂದು ನಡೆದ ಬೊಲ್ಶೆವಿಕ್ ಪಕ್ಷದ ಕೇಂದ್ರ ಸಮಿತಿಯಲ್ಲಿ ಭಾಗವಹಿಸಿದ ಲೆನಿನ್ ರಶಿಯಾದ ರಾಜಕೀಯ ಪರಿಸ್ಥಿತಿಯನ್ನು ಕುರಿತು ವಿಶ್ಲೇಷಿಸಿದರು. ಲೆನಿನ್ನರ ಈ ಲಿಖಿತ ವಿಶ್ಲೇಷಣೆ 'ಏಪ್ರಿಲ್ ಥೀಸಿಸ್' ಎಂದು ಪ್ರಸಿದ್ಧವಾಯಿತು. ಬಂಡವಾಳಗಾರರ ಜಮಿನ್ದಾರರ ಸರ್ಕಾರವನ್ನು ಕಿತ್ತೊಗೆಯಲು ಲೆನಿನ್ ಕರೆ ನೀಡಿದರು. ಸೋವಿಯೆತ್ ಸರ್ಕಾರವೊಂದೇ ನಿಜವಾದ ಜನತಾ ಸರ್ಕಾರ. ಎರಡು ಸರ್ಕಾರಗಳು ಅಧಿಕಾರದಲ್ಲಿರಲು ಸಾಧ್ಯವಿಲ್ಲ ಎಂದು ಘೋಷಿಸಿದರು. ಬೊಲ್ಶೆವಿಕ್ ಪಕ್ಷ ಸೇರಲು ಕಾರ್ಮಿಕರು, ರೈತರು ಮತ್ತು ಸೈನಿಕರ ಪ್ರವಾಹವೇ ಉಕ್ಕಿಬಂತು.

ಇದೇ ಸಮಯದಲ್ಲಿ, ಲೆನಿನ್ನರು ತಮ್ಮ 'ಪ್ರಭುತ್ವ ಮತ್ತು ಕ್ರಾಂತಿ' ಎಂಬ ಇನ್ನೊಂದು ಮಹತ್ವದ ಕೃತಿಯನ್ನು ರಚಿಸಿದರು. (ಸೆಪ್ಟಂಬರ್ 1917) ಈ ಗ್ರಂಥದಲ್ಲಿ ಲೆನಿನ್ ಬಂಡವಾಳಶಾಹಿ ಪ್ರಭುತ್ವದ ಸ್ವರೂಪವನ್ನು, ಸಮಾಜವಾದಿ ಕ್ರಾಂತಿಯೊಂದಿಗೆ ರಚನೆಯಾಗುವ ಕಾರ್ಮಿಕ ವರ್ಗದ ಸರ್ವಾಧಿಕಾರದ ಸ್ವರೂಪವನ್ನು ವಿವರಿಸಿದರು.

ಲೆನಿನ್ ಅವರು ನೇತೃತ್ವದಲ್ಲಿ ಬೊಲ್ಶೆವಿಕ್ ಪಕ್ಷ ಸಮಾಜವಾದಿ ಕ್ರಾಂತಿಯತ್ತ ಮುನ್ನಡೆಯಲು ನಿರ್ಧರಿಸಿತು. ಕಾರ್ಖಾನೆಗಳಲ್ಲಿ ಕಾರ್ಮಿಕರು ಶಸ್ತ್ರಸಜ್ಜಿತರಾಗಿ ಸಿದ್ಧರಾಗಿದ್ದರು. ದಿನನಿತ್ಯ ಹೊಸ ಸೈನಿಕ ತುಕಡಿಗಳು ಬಂದು ಸೇರಿಕೊಳ್ಳುತ್ತಿದ್ದವು. ನವಂಬರ್ 7 ರಂದು (ಹಳೆಯ ಕ್ಯಾಲಂಡರ್ ಪ್ರಕಾರ ಅಕ್ಟೋಬರ್) ರಶಿಯಾದ ಸೋವಿಯತ್‌ಗಳ ಸಮಾವೇಶ ಕರೆಯಲಾಗಿತ್ತು. ಅಷ್ಟರೊಳಗೆ ಹಂಗಾಮಿ ಸರ್ಕಾರ ಅಧಿಕಾರ ಬಿಟ್ಟುಕೊಡಬೇಕೆಂದು ಬೊಲ್ಶೆವಿಕ್ ಪಕ್ಷ ಗಡವು ನೀಡಿತ್ತು. ಹಿಂದಿನ ರಾತ್ರಿಯೇ ಶಸ್ತ್ರಸಜ್ಜಿತ ಕಾರ್ಮಿಕರು ಮತ್ತು ಕೆಲಸಗಾರರು ಅರಮನೆಯನ್ನು ಸುತ್ತುಗಟ್ಟಿದರು. ಹಂಗಾಮಿ ಸರ್ಕಾರ ಹಿಂದಿನ ಝಾರ್ ಸರ್ಕಾರದಂತೆ ಇತಿಹಾಸದ ಕಸದ ಬುಟ್ಟಿ ಸೇರಿತು. ವಿಶ್ವದಲ್ಲಿ ಮೊಟ್ಟಮೊದಲು ದುಡಿಯುವ ಜನರ ಸರ್ಕಾರ ಅಸ್ತಿತ್ವಕ್ಕೆ ಬಂತು. ಮಾನವ ಚರಿತ್ರೆಯಲ್ಲಿ ಹೊಸ ಯುಗವೊಂದು ಆರಂಭವಾಯಿತು. ಲೆನಿನ್ ಸಮಾಜವಾದಿ ರಶಿಯಾದ ಮೊದಲ ಪ್ರಧಾನಿಯಾದರು. ಅವರು ತಮ್ಮ ಬರಹಗಳ ಹಾಗೂ ರಶಿಯಾದ ಸಮಾಜವಾದಿ ಕ್ರಾಂತಿಗೆ ನೇತೃತ್ವ ನೀಡುವ ಮೂಲಕ ಮಾರ್ಕ್ಸ್‌ವಾದದ ಮುನ್ನಡೆಗೆ ಮಹತ್ವದ ಕೊಡುಗೆಯನ್ನು ನೀಡಿದರು.

ದುಡಿಯುವ ಜನರ...

ಪುಟ 2 ರಿಂದ

ಮಾಡುವುದು. ಈ ಕಡೆಯಿಂದ ಉರಿ ಒಟ್ಟುವುದು. ಆ ಕಡೆಯಿಂದ ಪಂಚಾಯ್ತಿ ಮಾಡಿ ಮಡಿಲಿಗೆ ಹಾಕಿಸಿಕೊಳ್ಳುವುದು. ಎಲ್ಲ ಬೆಳೆಯುತ್ತಿರುವ ಬೆಂಗಳೂರಿನ ಜನರ ಅಗತ್ಯಕ್ಕಾಗಿ. 'ಅಭಿವೃದ್ಧಿ'ಗಾಗಿ.

ಬಿದರಹಳ್ಳಿ, ರಾಮಾಪುರ, ಗುಂಡೂರು, ಬೀಳಿಶಿವಾಲು, ಬೈಯಪ್ಪನ ಹಳ್ಳಿ, ಕಾಡು ಸೋಣಪ್ಪನ ಹಳ್ಳಿ, ದೊಡ್ಡ ಗುಬ್ಬಿ, ಚಿಕ್ಕ ಗುಬ್ಬಿ, ಕೆರೆಯಂಗಳ, ರಾಜ ಕಾಲುವೆ, ಗುಂಡು ತೋಪು. ತೋಪು ತೋಪು.

ದೇವಸಂದ್ರ ..ಸೀಗೆಹಳ್ಳಿಯ ಕೆರೆ ಅಂಗಳದಲ್ಲಿ ತಲೆ ಎತ್ತಿದೆ ಶ್ರೀ ಕಾಲೇಜು. ವಿದ್ಯಾದಾನ ಶ್ರೇಷ್ಠ ದಾನ ಎನ್ನುತ್ತಾರೆ ಎ. ಕೃಷ್ಣಪ್ಪನವರು.

ಅಯ್ಯೋ ಕೊಡಲಿ ಬಿಡ್ರಿ ಸಾವಿರ ಪುಟಗಳ ನೂರು ವರದಿ. ತಲೆದಿಂಬು ನೆಮ್ಮದಿಯ ನಿದಿರೆಗೆ. ಕುರ್ಚಿಯ ಕುಶನ್ನು. ಹೋಗಿ ಹೋಗಿ ಮನೆಗೆ.

ಯಾವ ಎ.ಟಿ. ರಾಮಸ್ವಾಮಿ ಸ್ವಾಮಿ. ? ದೇಶಭಕ್ತ ಕಮಲ ಪಕ್ಷದ ಖದರೇ ಅಂಥದ್ದು. ಏನೂ ನಡೆಯದು. 'ಅಭಿವೃದ್ಧಿ' ಕೆಲಸಗಳಿಗೆ ಎಂಥ ಪಕ್ಷ ಬೇಧ. ಅವರು ನಮ್ಮವರೆ 'ಕೈ' ಕುಲುಕಲೇನು ಅಡ್ಡಿ. ಸಂತೋಷ ಹೆಗಡೆ, ಯುವಿ ಸಿಂಗ್... ಏನು ಮಾಡಿಕೊಂಡರು.?


ಗಾರ್ಮೆಂಟ್ಸ್ ಕಾರ್ಖಾನೆ ಕಾರ್ಮಿಕರಾಗಿದ್ದ ಕೆಂಬಾವುಟ ಹಿಡಿದು ದುಡಿಯುವ ಜನರ ಪಕ್ಷ ಸೇರಿಕೊಂಡ ಗೌರಮ್ಮ ಜೊತೆಯಲ್ಲಿ ಬರುವವರಿಗೆ ಏನು ತಾನೆ ಕೊಟ್ಟಾರು. ತಿಳಿ ನೀರು. ನಿಂಬೆ ಹುಳಿ ಪೆಪ್ಪರ ಮೆಂಟ್. ಮಧ್ಯಾಹ್ನ ಹಿಡಿ ಅನ್ನ-ಸಾರು. ಮೊಸರು.

1983 ನೇ ಇಸವಿಯಲ್ಲಿ ನಿವೃತ್ತರಾದ 86 ವರ್ಷದ ನಿವೃತ್ತ ನೌಕರ ಗೋಪಿಯವರ ಹಣೆಯಲ್ಲಿ ವಿಭೂತಿ-ಕುಂಕುಮ. ಆದರೆ ಕೈಯಲ್ಲಿ ಕೆಂಬಾವುಟ. ಸಿಪಿಐ(ಎಂ) ಪಕ್ಷ ಕುಟುಂಬಕ್ಕೆ ತಲಾ 35 ಕೆ.ಜಿ. ಆಹಾರ ಧಾನ್ಯ ಕೊಡಿ ಅಂತ ರಾಷ್ಟ್ರವ್ಯಾಪಿ ಸಹಿ ಸಂಗ್ರಹಕ್ಕೆ ಕರೆ ಕೊಟ್ಟಾಗ ಇಲ್ಲಿ ಅವರೊಬ್ಬರೆ 25 ಸಾವಿರ ಸಹಿ ಮಾಡಿಸಿದ್ದಾರೆ. ಜನರಿಂದ ರೇಷನ್ ಕಾರ್ಡು, ರೇಷನ್ನು ಎರಡನ್ನೂ ಕಿತ್ತು ಕೊಂಡ ಬಿಜೆಪಿ-ಕಾಂಗ್ರೆಸ್ ಎರಡಕ್ಕೂ ಪಾಠ ಕಲಿಸಿ ಅಂತ ಅವರು ಜನರನ್ನು ಕೇಳುತ್ತಾರೆ. ಗೌರಮ್ಮನವರನ್ನು ಜನಪರ ಹೋರಾಟಗಳಲ್ಲಿ ಕಂಡ ಮಹಿಳೆಯವರು ಅವರು ಓಟು ಕೇಳಲು ಬಂದಾಗ ಮುಖ ಅರಳಿಸಿ ಸ್ನೇಹಿತೆಯನ್ನು ಕಂಡಂತೆ ಬಂದು ತಬ್ಬಿಕೊಳ್ಳುತ್ತಾರೆ. ಎಷ್ಟು ಜನ ಅಭ್ಯರ್ಥಿಗಳಿಗೆ ಇಂತಹ ಭಾಗ್ಯ ಉಂಟು.

ಹಿಂದೆ 1983ರ ಚುನಾವಣೆಯಲ್ಲಿ ವರ್ತೂರು ಕ್ಷೇತ್ರದಿಂದ ಎಸ್.ಸೂರ್ಯನಾರಾಯಣ ರಾವ್ ಅವರು ಗೆದ್ದಿದ್ದರು. ಈಗ ಕ್ಷೇತ್ರ ಮೂರು ಭಾಗವಾಗಿದೆ. ಅವರ ಒಂದು ಭಾಗ ಕೆ.ಆರ್.ಪುರ. ಇಲ್ಲಿಂದ ಮತ್ತೊಮ್ಮೆ ದುಡಿಯುವ ಜನರ ಪ್ರತಿನಿಧಿಯನ್ನು ಆರಿಸಿ ಕಳುಹಿಸುವ ಗುರುತರ ಜವಾಬ್ದಾರಿ ಇಲ್ಲಿನ ಕಾರ್ಮಿಕರ ವರ್ಗಕ್ಕಿದೆ. ಜನತೆಗೆ ಇದೆ. ರಿಯಲ್ ಎಸ್ಟೇಟ್ ಎಂಬುದೇ 'ರಾಜಕೀಯ'ವಾಗಿ, ರಾಜಕೀಯ ಎಂಬುದು 'ದಂಧೆ'ಯಾಗಿರುವ ಹೊತ್ತಲ್ಲಿ ಸಿಪಿಐ(ಎಂ) ಜಿಲ್ಲಾ ಮುಖಂಡರೂ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರು ಆದ ಗೌರಮ್ಮನವರ ಜನಪರ ಬದ್ಧತೆ, ಸಿಪಿಐ(ಎಂ) ಪಕ್ಷದ ಜನಪರ ಹೋರಾಟಗಳೇ ಸ್ಪರ್ಧೆ ಆಧಾರ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುರೋಪಿಯನ್ ಒಕ್ಕೂಟದೊಂದಿಗೆ ಒಪ್ಪಂದಕ್ಕೆ ಸಲ್ಲದ ಆತುರ



ವೇದರಾಜ ಎನ್.ಕೆ.

ಯುರೋಪಿಯನ್ ಒಕ್ಕೂಟದೊಂದಿಗೆ ಮುಕ್ತ ವ್ಯಾಪಾರ ಪ್ಪಂದವೊಂದನ್ನು ಮಾಡಿಕೊಳ್ಳಲು ಯುಪಿಎ-2 ಸರಕಾರ ಾತೊರೆಯುತ್ತಿದೆ. ಸಂಸತ್ತಿನ ಅಥವ ಬೇರೆ ಯಾವುದೇ ್ರಜಾಸತ್ತಾತ್ಮಕ ಸಂಸ್ಥೆಯ ಯಾವುದೇ ಪರೀಕ್ಷಣೆಯಿಲ್ಲದೆ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆ ಒಪ್ಪಂದ' ಮಾಡಿಕೊಳ್ಳುವ ಪ್ರಯತ್ನವನ್ನು ನಿಲ್ಲಿಸಬೇಕು ಎಂದು ಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿರುವುದು ಮಾತ್ರವಲ್ಲ, ಾಣಿಜ್ಯ ಇಲಾಖೆ ಸಂಬಂಧಿತ ಸಂಸದೀಯ ಸಮಿತಿಯ ಧ್ಯಕ್ಷರು ಇದನ್ನು ಪರಿಶೀಲಿಸುತ್ತಿರುವ ತಮ್ಮ ಸಮಿತಿ ತನ್ನ ಅಂತಿಮ ವರದಿಯನ್ನು ಸಂಸತ್ತಿಗೆ ಸಲ್ಲಿಸುವ ವರೆಗೆ ಕಾಯಿರಿ, ಒಪ್ಪಂದಕ್ಕೆ ಸಹಿ ಮಾಡಲು ಧಾವಿಸಬೇಡಿ ಎಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಸಿಪಿಐ(ಎಂ) ಈ ಒಪ್ಪಂದಕ್ಕೆ ವ್ಯಕ್ತಪಡಿಸಿರುವ ಆಕ್ಷೇಪ ಹಳ ಗಹನವಾದದ್ದು. ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ) ಇದುವರೆಗಿನ ಭಾರತದ ಒಟ್ಟು ಅನುಭವವೆಂದರೆ ಅವು



ಕೃಪೆ : ದಿ. ಹಿಂದೂ

ದೇಶದ ವ್ಯಾಪಾರ ಸಮತೋಲವನ್ನು, ಅಂದರೆ ಆಮದು ಮತ್ತು ರಫ್ತು ಪ್ರಮಾಣಗಳಲ್ಲಿನ ಅಂತರವನ್ನು ಇನ್ನಷ್ಟು ಕೆಡಿಸಿ ಾರ ಕೊರತೆ' ಎಂಬುದನ್ನು ಇನ್ನಷ್ಟು ಹೆಚ್ಚಿಸಿದೆ. ಉದಾ: ಸಿಂಗಾಪುರದೊಂದಿಗೆ ಎಫ್‌ಟಿಎ ಮಾಡಿಕೊಳ್ಳುವ ಮೊದಲು ಆ ದೇಶದೊಂದಿಗೆ 'ವ್ಯಾಪಾರ ಮಿಗುತೆ' ಇತ್ತು, ಒಪ್ಪಂದದ ನಂತರ ಬಹಳ ಬೇಗನೇ ಅದು 'ವ್ಯಾಪಾರ' ಕೊರತೆಯಾಗಿ ಮಾರ್ಪಟ್ಟಿದೆ.

ಯುರೋಪಿಯನ್ ಒಕ್ಕೂಟದೊಂದಿಗೆ ಮಾಡಿಕೊಳ್ಳ ಬೇಕೆಂದಿರುವ ಈ ಒಪ್ಪಂದ ಇದುವರೆಗಿನ ಎಫ್‌ಟಿಎಗಳಲ್ಲೇ ಅತ್ಯಂತ ಮಹತ್ವಾಕಾಂಕ್ಷೆಯ ಮತ್ತು ಸಮಗ್ರವಾದ ಒಪ್ಪಂದ(ಆಳುವ ವರ್ಗಗಳಿಗೆ) ಎಂದು ಹೇಳಲಾಗಿದೆ. ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ಹಂದರದ ಮೇಲೆ ಗಾಢವಾದ, ಶಾಶ್ವತವಾದ ಪರಿಣಾಮ ಉಂಟು ಮಾಡುವ ಒಪ್ಪಂದ ಇದು. ಬೌದ್ಧಿಕ ಆಸ್ತಿ, ಹೂಡಿಕೆ ಮತ್ತು ಸರಕಾರೀ ಖರೀದಿ ಕುರಿತ ಒಪ್ಪಂದದ ಅಧ್ಯಾಯಗಳು ನಮ್ಮ ದೇಶದ ಆರ್ಥಿಕ ಚಟುವಟಿಕೆಗಳ, ಸುಮಾರಾಗಿ ಎಲ್ಲ, ಕ್ಷೇತ್ರಗಳ ಮೇಲೆ ನಕಾರಾತ್ಮಕ ಪ್ರಭಾವ ಬೀರುವಂತವು-ವಿಶೇಷವಾಗಿ, ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಮೇಲೆ.

- ಬೌದ್ಧಿಕ ಆಸ್ತಿ ರಕ್ಷಣೆ(ಪೇಟೆಂಟ್)ಯ ಮಟ್ಟವನ್ನು ಇದು ವಿಸ್ತರಿಸಬೇಕೆಂದಿದೆ. ಅಂದರೆ ಹೆಚ್ಚಿನ ಪ್ರಮಾಣದ ಔಷಧಿ ಪೇಟೆಂಟ್ ರಕ್ಷಣೆ, ಆಮೂಲಕ ನಮ್ಮ ಆರೋಗ್ಯ ಸೇವೆಗಳ ಮೇಲೆ ದುಷ್ಪರಿಣಾಮ;
- ಬಲವಾದ ಹೂಡಿಕೆದಾರರ ರಕ್ಷಣಾ ವ್ಯವಸ್ಥೆ, ಎಂದ-ರೆ ಉದ್ಯಮಗಳು ಮತ್ತು ಹಣಕಾಸು ಸಂಸ್ಥೆಗಳನ್ನು ರಾಷ್ಟ್ರೀಯ ಹಿತದೃಷ್ಟಿಯಿಂದ ನಿಯಂತ್ರಿಸುವ ಸರಕಾರದ ಸಾಮರ್ಥ್ಯದ ಮೇಲೆ ನಿರ್ಬಂಧ
- ಸರಕಾರೀ ಖರೀದಿಯನ್ನು ವಿದೇಶಿ ಕಂಪನಿಗಳಿಗೂ ತೆರೆಯುವುದರಿಂದ ಈಗಿರುವ ಕನಿಷ್ಟ ಸಾಮಾಜಿಕ ರಕ್ಷಣಾ ಕ್ರಮಗಳಿಗೆ(ಉದಾ: ಪಡಿತರ ವ್ಯವಸ್ಥೆ) ಕುತ್ತು.

ಈ ಒಪ್ಪಂದ ಏರ್ಪಟ್ಟರೆ ಯುರೋಪಿಯನ್ ಒಕ್ಕೂಟದ ಕೃಷಿ ಉತ್ಪನ್ನಗಳನ್ನು ತಂದು ಇಲ್ಲಿ ಸುರುವಲು ಅವಕಾಶವಾಗಿ ನಮ್ಮ ಕೃಷಿ ಉತ್ಪಾದಕರ ಸಂಕಟಗಳು ಇನ್ನಷ್ಟು ಹೆಚ್ಚುತ್ತದೆ. ಆರ್ಥಿಕದ ಬೇರೆ ವಲಯಗಳನ್ನು ಪ್ರತಿನಿಧಿಸುವ ಸಂಘಟನೆಗಳು ಈಗಾಗಲೇ ತಮ್ಮ ಆತಂಕಗಳನ್ನು ವ್ಯಕ್ತಪಡಿಸಿವೆ. ದೇಶದ ಅತಿ ದೊಡ್ಡ ಹಾಲು ಸಹಕಾರೀ ಸಂಸ್ಥೆ ಅಮುಲ್ ಈ ಬಗ್ಗೆ ಆತಂಕ ವ್ಯಕ್ತಪಡಿಸಿದೆ - ಯುರೋಪಿಯನ್ ಒಕ್ಕೂಟದ ಸಬ್ಸಿಡಿ ಪಡೆದ ಡೇರಿ ಉತ್ಪನ್ನಗಳ ಅನಗತ್ಯ ಆಮದಿನಿಂದ ಇವನ್ನವಲಂಬಿಸಿರುವ ಭಾರತದ 8 ಕೋಟಿ ರೈತರ ಬದುಕನ್ನು ಇದು ತೀವ್ರವಾಗಿ ತಟ್ಟಲಿದೆ. ವಾಹನ ತಯಾರಿಕಾ ಉದ್ಯಮದ ಮೇಲೆ ಇದು ದುಷ್ಪರಿಣಾಮ ಬೀರಲಿದೆ ಎಂದು ಆಗಲೇ ಆ ಉದ್ದಿಮೆಯ ವಕ್ತಾರರು ಎಚ್ಚರಿಸಿದ್ದಾರೆ.

ನಮ್ಮ ದೇಶದ ರಫ್ತುದಾರರಿಗೆ ಈ ಒಪ್ಪಂದ ಹೊಸ ಮಾರುಕಟ್ಟೆಗಳನ್ನು ತೆರೆದು ಕೊಡುತ್ತದೆ ಎಂಬುದು ಸರಕಾರದ ದಾವೆ. ಆದರೆ ಇದಕ್ಕೆ ಆಧಾರಗಳಿಲ್ಲ. ಯುರೋಪಿಯನ್ ಒಕ್ಕೂಟ ಈ ಒಪ್ಪಂದವಾದರೆ ಸುಂಕಗಳನ್ನೇನೋ ಇಳಿಸಬಹುದು, ಆದರೆ ಸಬ್ಸಿಡಿಗಳನ್ನು ಜಾಣತನದಿಂದ ಬಳಸಿ ಮತ್ತು ಸುಂ-ಕೇತರ ಕ್ರಮಗಳ ಮೂಲಕ ಭಾರತದ ರಫ್ತುಗಳನ್ನು ತಡೆಯುವುದನ್ನು ಮುಂದುವರೆಸುತ್ತದೆ. ಒಂದು ವೇಳೆ ಇದರಿಂದ ದೇಶದ ರಫ್ತು ಪ್ರಮಾಣ ಹೆಚ್ಚಿದರೂ, ಈ ಒಪ್ಪಂದದ ಪರಿಣಾಮವಾಗಿ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಮದುಗಳನ್ನು ಹೆಚ್ಚಿಸಬೇಕಾಗುತ್ತದೆ.

ಇನ್ನೂ ಮುಖ್ಯವಾದ ಸಂಗತಿಯೆಂದರೆ ಈ ಒಪ್ಪಂದದ ಮೇಲೆ ಮಾತುಕತೆಗಳನ್ನು ನಡೆಸಿರುವ ರೀತಿ- ಅತ್ಯಂತ ಅಪಾರದರ್ಶಕವಾಗಿ ಇದು ನಡೆದಿದೆ. ಇದು ತಟ್ಟುವ ವಿಭಾಗಗಳೊಂದಿಗೆ ಸಾರ್ವಜನಿಕ ಸಮಾಲೋಚನೆಗಳಿಲ್ಲ, ಸಂಸತ್ತಿನ ಉಸ್ತುವಾರಿಯಿಲ್ಲ ಅಥವ ಇದರ ಪರಿಣಾಮಗಳನ್ನು ಎದುರಿಸಬೇಕಾಗಿರುವ ರಾಜ್ಯ ಸರಕಾರಗಳನ್ನೂ ಒಳಗೊಂಡಿಲ್ಲ, ರಾಜಕೀಯ ಪಕ್ಷಗಳೊಂದಿಗಂತೂ ಸಮಾಲೋಚನೆ, ಒಮ್ಮತ ನಿರ್ಮಿಸುವ ಕಿಂಚಿತ್ತೂ ಪ್ರಯತ್ನವೂ ಇಲ್ಲ.

ಈ ಎಲ್ಲ ವಿಷಯಗಳನ್ನು ಸಂಸತ್ತಿನ ಇಲಾಖಾ ಸಂಬಂಧಿ ಸಂಸದೀಯ ಸಮಿತಿ ಪರಿಶೀಲಿಸುತ್ತಿದ್ದರೂ ಅದರ ಅಂತಿಮ ವರದಿಗೆ ಕಾಯಬೇಕಾಗಿಲ್ಲ ಎಂದು ಯುಪಿಎ-2 ಸರಕಾರ ನಿರ್ಧರಿಸಿದಂತಿದೆ. ಈ ಬಗ್ಗೆ ಸಮಿತಿಯ ಸದಸ್ಯರು ಪ್ರಶ್ನೆಗಳನ್ನೆತ್ತಿದ ಪರಿಣಾಮವಾಗಿ ಸಮಿತಿಯ ಅದ-ಕ್ಷರು ಒಪ್ಪಂದಕ್ಕೆ ಸಹಿ ಹಾಕಲು ಧಾವಿಸಬೇಡಿ ಎಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಅದರಲ್ಲಿ ಅವರು ಹೀಗಂದಿದ್ದಾರೆ: "ಸ್ಥಾಯೀ ಸಮಿತಿ ಈ ಪ್ರಶ್ನೆಯನ್ನು ಕೈಗೆತ್ತಿ-ಕೊಂಡಿದೆ ಮತ್ತು ಸಮಿತಿಯ ಎಲ್ಲ ಸದಸ್ಯರೂ, ಸಮಿತಿ ಇದರ ಅಧ್ಯಯನ ನಡೆಸುತ್ತಿರುವುದರಿಂದ ಹಾಗೂ ಬಹಳಷ್ಟು ಮನವಿಪತ್ರಗಳು ಬಂದಿರುವುದರಿಂದ, ಈ ಒಪ್ಪಂದವನ್ನು ಎಲ್ಲ ಸಂಬಂಧಪಟ್ಟವರೊಂದಿಗೆ ಚರ್ಚೆಗಳು ಮತ್ತು ಸಂಸತ್ತಿನ ವಿಶ್ವಾಸವನ್ನು ಪಡೆದ ನಂತರವೇ ಮಾಡಿಕೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ."

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಸರಕಾರದ ಮುಂದೆ ಈ ಆಗ್ರಹಗಳನ್ನು ಇಟ್ಟಿದೆ:

- ಸಂಸದೀಯ ಸ್ಥಾಯೀ ಸಮಿತಿಯ ವರದಿ ಬರುವವರೆಗೆ ಕಾಯಬೇಕು
- ಈ ಪ್ರಶ್ನೆಯ ಮೇಲೆ ಸಂಸತ್ತಿನಲ್ಲಿ ಚರ್ಚೆ ನಡೆಸಬೇಕು
- ಈ ಒಪ್ಪಂದ ತಟ್ಟುವ ವಿಭಾಗಗಳೊಂದಿಗೆ ಸಮಾಲೋಚನೆ ನಡೆಸಬೇಕು
- ಈಗ ನಡೆದಿರುವ ಮಾತುಕತೆಗಳ ಪ್ರಕ್ರಿಯೆಯ ದಸ್ತಾವೇಜುಗಳನ್ನು ಪ್ರಕಟಗೊಳಿಸಿ, ಅವುಗಳ ಆಧಾರದಲ್ಲಿ ಅವುಗಳ ಪರಿಣಾಮಗಳ ಅಧ್ಯಯನ ನಡೆಸಬೇಕು.

ಯುಪಿಎ-2ರ ಭೂಸ್ವಾಧೀನ ಮಸೂದೆ-ಈ ಪರಿಯ 'ಒಮ್ಮತ'!

ಯುಪಿಎ-2 ಸರಕಾರ ಬಹಳ ಸಮಯದಿಂದ ಭೂಸ್ವಾಧೀನ, ಮಸೂದೆಯ ಬಗ್ಗೆ ಮಾತಾಡುತ್ತ, ತನ್ನ ಬೆನ್ನು ತಾನೇ ತಟ್ಟಿಕೊಳ್ಳುತ್ತ ಬಂದಿದೆ. ಕಳೆದ ವಾರ ಈ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳ ಮಧ್ಯೆ ಒಮ್ಮತ ಏರ್ಪಟ್ಟಿದೆ ಎಂದೂ ಪ್ರಕಟಿಸಿತು. ಆದರೆ ಇದು ಜನಗಳನ್ನು ತಪ್ಪುದಾರಿಗೆಳೆಯುವ ಪ್ರಯತ್ನ ಎಂದು ಬೇಗನೇ ಬಯಲಾಗಿದೆ. ಎಡಪಕ್ಷಗಳು ಸರಕಾರದ ಈ ದಾವೆ ತಪ್ಪು ಎಂದು ಹೇಳಿಕೆ ನೀಡಿವೆ. ಈ ಮಸೂದೆಯ ಕೆಲವು ಮೂಲ ಅಂಶಗಳ ಬಗ್ಗೆಯೇ ತಮಗೆ ಒಪ್ಪಿಗೆ ಇಲ್ಲ ಎಂದು ಅವು ಹೇಳಿವೆ.

ಎಡಪಕ್ಷಗಳ ಪ್ರಮುಖ ಆಕ್ಷೇಪವೆಂದರೆ 13 ಕಾನೂನುಗಳಿಗೆ ಈ ಮಸೂದೆಯಲ್ಲಿ ವಿನಾಯ್ತಿ ನೀಡಲಾಗಿದೆ-ಭಾರತೀಯ ರೈಲ್ವೇ ಕಾನೂನು, ರಾಷ್ಟ್ರೀಯ ಹೆದ್ದಾರಿ ಕಾನೂನು, ಭೂಸ್ವಾಧೀನ ಗಣಿ ಮಸೂದೆ, ಕಲ್ಲಿದ್ದಲು ಗರ್ಭಿತ ಪ್ರದೇಶಗಳ ಸ್ವಾಧೀನ ಮತ್ತು ಅಭಿವೃದ್ಧಿ ಕಾನೂನು ಇತ್ಯಾದಿ. ಬಹಳಷ್ಟು ಭೂಸ್ವಾಧೀನ ನಡೆಯುವುದು ಈ ಕಾನೂನುಗಳ ಅಡಿಯಲ್ಲೇ. ಇದರಿಂದಾಗಿ ಈ ಮಸೂದೆ ಕಾನೂನಾದರೆ ಬಹಳೇನೂ ಉಪಯೋಗವಿಲ್ಲದಂತಾಗುತ್ತದೆ. ಸಾರ್ವಜನಿಕ/ಸರಕಾರೀ ಉದ್ದೇಶಗಳಿಗೆ ಭೂಸ್ವಾಧೀನ ಮಾಡಿದರೆ ಸಂಬಂಧಪಟ್ಟವರ ಒಪ್ಪಿಗೆ ಬೇಕಾಗಿಲ್ಲ, ಅವರಿಗೆ ಪರಿಹಾರಗಳನ್ನೂ ಕೊಡಬೇಕಾಗಿಲ್ಲ. ಆದರೆ ಸಾರ್ವಜನಿಕ ಉದ್ದೇಶದ ನಿರೂಪಣೆ ಹೇಗಿದೆಯೆಂದರೆ ಖಾಸಗಿ ಕಂಪನಿಗಳಿಗಾಗಿ ಭೂಸ್ವಾಧೀನ ಮಾಡಿಕೊಂಡರೂ ಅದನ್ನೂ ಸಾರ್ವಜನಿಕ ಉದ್ದೇಶಕ್ಕೆ ಎಂದು ಹೇಳಿದರೆ ಈ ಕಾನೂನಿನಿಂದ ವಿನಾಯ್ತಿ ಸಿಗುತ್ತದೆ, ಅಂದರೆ ಒಪ್ಪಿಗೆ/ಪರಿಹಾರದ 'ತೊಡಕು' ಇರುವುದಿಲ್ಲ. ಗೇಣಿದಾರರು, ಕೃಷಿ ಕಾರ್ಮಿಕರು ಮುಂತಾದ ಇಂತಹ ಸ್ವಾಧೀನ ಕ್ರಮ ತಟ್ಟುವ ಮಂದಿ ಪರಿಹಾರಕ್ಕೆ ಅರ್ಹರೆನಿಸುವುದಿಲ್ಲ. ಈ ಮಸೂದೆಯ ಕೆಲವು ಅಂಶಗಳು ಆದಿವಾಸಿಗಳ ಹಿತಗಳಿಗೆ ವಿರುದ್ಧವಾಗಿದೆ.

ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ, ಸಂಸತ್ತಿನ ಸ್ಥಾಯೀ ಸಮಿತಿ ಪರಿಶೀಲಿಸಿದ್ದ ಮಸೂದೆಗಿಂತ ಸರಕಾರ ಈಗ ಪ್ರಸ್ತುಪಡಿಸುತ್ತಿರುವ ಮಸೂದೆ ಸಂಪೂರ್ಣವಾಗಿ ಭಿನ್ನವಾಗಿದೆ. ಆದ್ದರಿಂದ ಅದನ್ನು ಹಿಂದಿರುಗಿ ಸ್ಥಾಯೀ ಸಮಿತಿಗೆ ಪರಿಶೀಲನೆಗೆ ಕಳಿಸಬೇಕು, ಇಲ್ಲವೇ ಜಂಟಿ ಆಯ್ಕೆ ಸಮಿತಿಗೆ ಒಪ್ಪಿಸಬೇಕು ಎಂದು ಎಡಪಕ್ಷಗಳು ಆಗ್ರಹಿಸಿವೆ.

ಯುಪಿಎ-2 ಸರಕಾರದ 'ಒಮ್ಮತ'ದ ಪರಿಯಿದು!

ಜಗದಗಲ


ಶರತ್‌ಚಂದ್ರ

ವೆನೆಜುವೆಲಾದಲ್ಲಿ ಚವೇಝ್‌ವಾದಕ್ಕೆ ಪುನಃ ಜಯ

ವೆನೆಜುವೆಲಾದಲ್ಲಿ ಚವೇಝ್ ಮರಣದ ಹಿನ್ನೆಲೆಯಲ್ಲಿ ಅಧ್ಯಕ್ಷ ಪದವಿಗೆ ಮರುಚುನಾವಣೆ ನಡೆದಿದ್ದು ಸೋಶಲಿಸ್ಟ್ ಪಕ್ಷದ ನಾಯಕ ನಿಕೊಲಸ್ ಮದುರೊ ಮೊದಲ ಸುತ್ತಿನಲ್ಲೇ ನಿರೀಕ್ಷಿತ ಜಯಗಳಿಸಿದ್ದಾರೆ. ಆದರೆ ವಿಜಯದ ಅಂತರ ನಿರೀಕ್ಷಿತ ಮಟ್ಟದಲ್ಲಿ ಇಲ್ಲ ಎಂಬುದನ್ನು ಗಮನಿಸಲಾಗಿದೆ. ಮದುರೊ ಶೇ. 50.66 ಮತ ಗಳಿಸಿದರೆ, ಅವರ ಪ್ರಮುಖ ಪ್ರತಿಸ್ಪರ್ಧಿ ಹೆನ್ರಿಕ್ ಕೆಪ್ರಿಲೆಸ್ ಶೇ.49.1 ಮತ ಗಳಿಸಿದ್ದಾರೆ. ಮತಗಳ ಅಂತರ 3 ಲಕ್ಷಕ್ಕೂ ಕಡಿಮೆ ಎಂದು ಹೇಳಲಾಗಿದೆ. ವಿರೋಧಿ ಅಭ್ಯರ್ಥಿ ಕೆಪ್ರಿಲೆಸ್ ಚುನಾವಣಾ ಫಲಿತಾಂಶ ಒಪ್ಪಿಕೊಂಡಿಲ್ಲ. ಹಲವು ಕಡೆ ಚುನಾವಣಾ ಅಕ್ರಮಗಳು ನಡೆದಿವೆ ಎಂದಿದ್ದಾರೆ. ಮರು ಎಣಿಕೆ ನಡೆಯಬೇಕು ಎಂದು ಒತ್ತಾಯಿಸಿದ್ದಾರೆ. ನಿಯಮಗಳ ಪ್ರಕಾರ ಚುನಾವಣಾ ಕಮಿಶನ್ ಶೆ.45 ಮತಗಳ ಮರು ಎಣಿಕೆ ನಡೆಸಿ ಅದೇ ಫಲಿತಾಂಶವನ್ನು ಘೋಷಿಸಿದೆ.

ಆದರೆ ಕೆಪ್ರಿಲೆಸ್ ಶೇ.100 ಮರು ಎಣಿಕೆಗೆ ಪಟ್ಟು ಹಿಡಿದಿದ್ದು, ಚುನಾವಣಾ ಕಮಿಶನ್ ಆ ಕೋರಿಕೆಯನ್ನು ತಿರಸ್ಕರಿಸಿದೆ. ವಿರೋಧ ಪಕ್ಷಗಳು ವ್ಯಾಪಕ ಪ್ರತಿಭಟನಾ ಪ್ರದರ್ಶನಗಳನ್ನೂ, ಪ್ರದರ್ಶನದ ಸಂದರ್ಭದಲ್ಲಿ ಹಿಂಸಾತ್ಮಕ ಕೃತ್ಯಗಳನ್ನೂ ನಡೆಸಿವೆ. ಮದುರೊ ಬೆಂಬಲಿಗರೂ ಪ್ರತಿ-ಪ್ರತಿಭಟನಾ ಪ್ರದರ್ಶನಗಳನ್ನೂ ನಡೆಸಿದ್ದಾರೆ. ವ್ಯಾಪಕ ಹಿಂಸಾಚಾರಕ್ಕೆ ಎಡೆ ಮಾಡಿಕೊಡಬಹುದು ಎಂಬ ಆತಂಕದಿಂದ ಮದುರೊ ಮತ್ತು ಆಳುವ ಪಕ್ಷ ಬೆಂಬಲಿಗರಿಗೆ ಶಾಂತಿ ಕಾಪಾಡಿಕೊಳ್ಳುವಂತೆ ಮನವಿ ಮಾಡಿದೆ. ಆದರೆ ವಿರೋಧ ಪಕ್ಷಗಳು ಜನಾದೇಶವನ್ನು ಧಿಕ್ಕರಿಸುವ ತಮ್ಮ ಪ್ರಜಾಪ್ರಭುತ್ವ-ವಿರೋಧಿ ಕೃತ್ಯಗಳನ್ನು ಮುಂದುವರೆಸುತ್ತಿವೆ. ಆದ-ರೆ ಅಂತರ್ರಾಷ್ಟ್ರೀಯ ವೀಕ್ಷಕರ ತಂಡ ಚುನಾವಣೆ ಕ್ರಮಬದ್ಧವಾಗಿಯೂ





ನ್ಯಾಯಯುತವಾಗಿಯೂ ಇತ್ತು ಎಂದು ಹೇಳಿದೆ. ಇಲೆಕ್ಟ್ರಾನಿಕ್ ಮತ ಮತ್ತು ಮತ ಪತ್ರ ಎರಡನ್ನೂ ಬಳಸಿ ತಾಳೆ ಹಾಕುವ ವ್ಯವಸ್ಥೆ ಇರುವ ವೆನೆಜುವೆಲಾದ ವ್ಯವಸ್ಥೆ ಅತ್ಯುತ್ತಮ ಚುನಾವಣಾ ವ್ಯವಸ್ಥೆ ಎಂದು ಕಾರ್ಟರ್ ಸೆಂಟರ್ ಸೇರಿದಂತೆ ಹಲವು ಅಂತರ್ರಾಷ್ಟ್ರೀಯ ವೀಕ್ಷಕರು ಹೇಳಿದ್ದಾರೆ.

ಇದು ಒಂದು ರಾಜಕೀಯ ಅಧಿಕಾರದ ಪದವಿಗೆ ನಡೆದ ಸ್ಪರ್ಧೆಯಲ್ಲಿ ವಿಜಯ ಮಾತ್ರವಲ್ಲ. ಬೊಲಿವಾರಿಯನ್ ಕ್ರಾಂತಿ ಮುಂದುವರಿಕೆಯ ನೀತಿಗೆ ವಿಜಯ ಎಂದು ಅಧ್ಯಕ್ಷ ಮದುರೊ ಅ- ಧ್ಯಕ್ಷೀಯ ಭವನದ ಎಧುರಲ್ಲಿ ಸೇರಿದ್ದ ಲಕ್ಷಾಂತರ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು. ವೆನೆಜುವೆಲಾದ ಜನತೆಯ ಮುಂದೆ ಇದ್ದಿದ್ದು ಎರಡು ಆಯ್ಕೆಗಳು. ಬೊಲಿವಾರಿಯನ್ ಕ್ರಾಂತಿಯ ಮುಂದುವರಿಕೆ ಅಥವಾ ದಿವಾಳಿಕೋರ ನವ-ಉದಾರವಾದಿ ನೀತಿಗಳಿಗೆ ಮರಳುವುದು. ಜನತೆ ಬೊಲಿವಾರಿಯನ್ ಕ್ರಾಂತಿಯ ಮುಂದುವರಿಕೆಯನ್ನು ಆರಿಸಿಕೊಂಡಿದ್ದಾರೆ. ಬೊಲಿವಾರಿಯನ್ ಕ್ರಾಂತಿಯನ್ನು ಇನ್ನಷ್ಟು ಆಳಗೊಳಿಸಿ ಬಡಜನರ ಆಶೋತ್ತರಗಳನ್ನು ಪೂರೈಸುವ, ಕ್ರಾಂತಿಯ ಮಿಲಿಟರಿ ಮತ್ತು ರಾಜಕೀಯ ನಾಯಕತ್ವವನ್ನು ಕ್ರೋಢಿಕರಿಸಿ ಮುನ್ನಡೆಯುತ್ತಾ ಕ್ರಾಂತಿಯನ್ನು ಮುಂದಿನ ಹಂತಕ್ಕೆ ಒಯ್ಯುವ ಜವಾಬ್ದಾರಿ ಬಗ್ಗೆ ಅವರು ಎಚ್ಚರಿಸಿದರು.

ಚವೇಝ್ ಮರಣದ ಹಿನ್ನೆಲೆಯಲ್ಲಿ ಅನುಕಂಪದ ಅಲೆಯಲ್ಲಿ ಮದುರೊ ಶೇ.10-15 ರಷ್ಟು ಅಂತರದಿಂದ ಗೆಲ್ಲುತ್ತಾರೆ ಎಂದು ಹಲವು ಸಮೀಕ್ಷೆಗಳು ಹೇಳಿದ್ದವು. ಹಾಗಾದರೆ ಚವೇಝ್‌ವಾದಕ್ಕೆ ಬೆಂಬಲ ಕಡಿಮೆಯಾಗಿದೆಯೆ? ಇದರ ಬಗ್ಗೆ ಹಲವು ವಿಶ್ಲೇಷಣೆ ಬಂದಿವೆ. ಹಿಂದಿನ ಚುನಾವಣೆಗಿಂತ (ಆಗಿನ ಶೇ.82) ಮತದಾನ ಸಹ ಶೇ.79.2ಕ್ಕೆ ಇಳಿದಿದೆ. ಈ ಮತದಾನದಲ್ಲಿ ಭಾಗವಹಿಸದ ಸುಮಾರು ಶೇ.20 ಜನರಲ್ಲಿ ಬಹುಸಂಖ್ಯಾತರು ಬಡವರು. ಚವೇಝ್‌ವಾದದ ಬೆಂಬಲಿಗರು. ಒಂದು ವಿಶ್ಲೇಷಣೆ ಪ್ರಕಾರ ಸಮೀಕ್ಷೆಗಳು ಮದುರೊ ಭಾರಿ ಅಂತರದಿಂದ ಗೆಲ್ಲುತ್ತಾರೆ ಹೇಳಿದ್ದೇ ಬಹುಸಂಖ್ಯಾತ ಬಡವರು ಮತದಾನದಲ್ಲಿ ಭಾಗವಹಿಸದೆ ಇರುವು[ದಕ್ಕೆ] ಕಾರಣವಾಗಿರಬಹುದು ಎನ್ನ[ಲಾಗಿದೆ]. ಚವೇಝ್ ಅವರ ವ್ಯಕ್ತಿತ್ವ ವರ್ಚಸ್ಸ[ನ್ನು] ಯಾರೂ ಸರಿಗಟ್ಟಲಾರರು ಎಂಬುದು ಸ್ಪ[ಷ್ಟ].

ಇದಲ್ಲದೆ ವಿರೋಧ ಪಕ್ಷಗ[ಳು] ಬಡವರ ಮತ್ತು ಮಧ್ಯಮ ವರ್ಗದ[ವ] ಒಂದು ವಿಭಾಗವನ್ನು ಗೊಂದಲಕ್ಕೆ ಈ[ಡು] ಮಾಡಿರುವ ಸಾಧ್ಯತೆ ಇದೆ. 'ಚವೇರು[ಝ್] ಓಕೆ. ಮದುರೊ ಯಾಕೆ?' ಎಂಬ ಧಾಟಿ[ಯ] ಪ್ರಚಾರವನ್ನು ವಿರೋಧ ಪಕ್ಷ ನಡೆಸಿ[ತು]. ಮದುರೊ ಚವೇಝ್‌ಗೆ ಸರಿಯಾ[ದ] ಉತ್ತರಾಧಿಕಾರಿಯಲ್ಲ. ಚವೇಝ್ ಅ[ವರ] 'ಮಿಶನ್'ಗಳನ್ನು (ಜನಪ್ರಿಯ ಕಲ್ಯಾ[ಣ] ಕಾರ್ಯಕ್ರಮಗಳು) ಮುಂದುವರೆಸುತ್ತಲೇ, ಅಗತ್ಯ ವಸ್ತುಗಳ ಕೊರತೆ, ಹಣದುಬ್ಬ[ರ], ಅಪರಾಧಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳು[ವ] ಮತ್ತು ಕ್ಯೂಬಾ ಮತ್ತಿತರ ಕೆರಿಬಿ[ಯನ್] ದೇಶಗಳಿಗೆ ತೈಲ 'ದಾನ ಮಾಡು[ತ್ತಾ] ಪೋಲು ಮಾಡುವು'ದನ್ನು ನಿಲ್ಲಿಸುವುದಾ[ಗಿ] ವಿರೋಧ ಪಕ್ಷ ಪ್ರಚಾರ ನಡೆಸಿತು. ಅದ[ರ] ಮುಖ್ಯ ಚುನಾವಣಾ ನಾಯಕತ್ವವನ್ನು 'ಸೈಮನ್ ಬೊಲಿವರ್ ಕಮಾಂಡ್' ಎಂದ[ು] ಕರೆಯಲಾಯಿತು! ಚುನಾವಣಾ ಪ್ರಚಾರ[ದ] ಅವಧಿಯಲ್ಲಿ ವಿದೇಶೀ ಕಂಪನಿಗಳು ಆಹಾ[ರ] ವಸ್ತುಗಳು ಸೇರಿದಂತೆ ಅಗತ್ಯ ವಸ್ತುಗ[ಳ] ಬೆಲೆ ಏರಿಕೆ ಆಗುವಂತೆ ಕೊರತೆ ಆಗುವಂ[ತೆ] ನೊಡಿಕೊಂಡವು. ಇವೆಲ್ಲಾ ಸ್ವಲ್ಪ ಪರಿಣಾ[ಮ] ಬೀರಿರಬಹುದು.

ಅಮೆರಿಕನ್ ಸಾಮ್ರಾಜ್ಯಶಾಹಿ, ವಿದೇಶಿ ಕಂಪನಿಗಳು ಮತ್ತು ದೇಶದ ಶ್ರೀಮಂತರ ಸರ್ಕಾರದ ಮೇಲೆ ಆರ್ಥಿಕ, ರಾಜಕೀಯ ದಾಳಿಯನ್ನು ಮುಂದುವರೆಸುವ ಎಲ್[ಲ] ಪ್ರಯತ್ನಗಳನ್ನೂ ನಡೆಸುವ ಬಗ್ಗೆ ಯಾವುದೇ ಸಂಶಯವಿಲ್ಲ. ಕೆಲವು ನೆರೆ ದೇಶಗ[ಳು] ಬಲಪಂಥೀಯ ಗ್ಯಾಂಗುಗಳನ್ನು ಬಳ[ಸಿ] ಮಿಲಿಟರಿ ದಾಳಿ ನಡೆಸುವ ಯೋಜನೆ ಸ[ಹ] ಇದೆ ಎಂದು ವರದಿಯಾಗಿದೆ. ಆದ-ರೆ ಮದುರೊ ಸೋಶಲಿಸ್ಟ್ ಪಕ್ಷ ಮತ್[ತು] ಬಡಜನತೆಯ ಬೆಂಬಲದಿಂದ ಇದನ್[ನು] ದೃಢವಾಗಿ ಎದುರಿಸುತ್ತಾರೆ ಎಂಬುದು ಅಷ್ಟೇ ಖಚಿತ. ಲ್ಯಾಟಿನ್ ಅಮೆರಿಕಾ[ದ] ನೆರೆ ದೇಶಗಳು ಮತ್ತು ಜನತೆ ಸ[ಹ] ಅವರ ಬೆಂಬಲಕ್ಕೆ ಇದ್ದಾರೆ. ಆದ[ರೆ] ಬೊಲಿವಾರಿಯನ್ ಕ್ರಾಂತಿಯನ್ನು ಇನ್ನಷ್ಟು ಆಳಗೊಳಿಸಿ ಬಡಜನರ ಆಶೋತ್ತರಗಳನ್ನು ಪೂರೈಸುವ, ಕ್ರಾಂತಿಯ ಮಿಲಿಟರಿ ಮತ್ತು ರಾಜಕೀಯ ನಾಯಕತ್ವವನ್ನು ಕ್ರೋಢಿಕರಿಸಿ ಮುನ್ನಡೆಯುತ್ತಾ ಕ್ರಾಂತಿಯನ್ನು ಮುಂದಿನ ಹಂತಕ್ಕೆ ಒಯ್ಯುವ ಜವಾಬ್ದಾರಿಯನ್ನು ಮದುರೊ ಮತ್ತು ಸೋಶಲಿಸ್ಟ್ ಪಕ್ಷ ಹೇ[ಗೆ] ನಿಭಾಯಿಸುತ್ತದೆ ಎಂಬುದರ ಮೇಲೆ ಅವಲಂಬಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಲಾಬಿ ಮತ್ತು ಸೂಟ್‌ಕೇಸ್ ರಾಜಕೀಯ

ಮ್ಮ ರಾಜ್ಯ ಹಿಂದೆಂದಿಗಿಂತಲೂ 'ಲಾಬಿ' ುತ್ತು 'ಸೂಟ್ ಕೇಸ್' ರಾಜಕೀಯ ಬಲವಾಗಿದ್ದು ಇದಕ್ಕೆ ಮೂಲ ಕಾರಣ. ಳೆದ ಚುನಾವಣೆಗಿಂತ ಮೊದಲೇ ರೀಯಲ್ ಸ್ಟೇಟ್, ಗಣಿ ಲಾಬಿಗಳು ಈಗಾಗಲೇ ದ್ದ ಖಾಸಗಿ ಶಿಕ್ಷಣ ಲಾಬಿ ಜತೆ ಸೇರಿ–ಂಡು ಅದನ್ನೂ ಮೀರಿ ಬೆಳೆದವು. ಂದಿನ 'ಸಾರಾಯಿ' ಲಾಬಿಯಂತೆ ಇವು ುರೆಯಲ್ಲಿ ಕೆಲಸ ಮಾಡುತ್ತಿಲ್ಲ. ಈ ್ಷೇತ್ರದ ಧಣಿಗಳು ಸ್ವತಃ ಚುನಾವಣೆಯಲ್ಲಿ ್ಪರ್ಧಿಸಿ ಈ ಲಾಬಿಗಳು ಎಂ.ಎಲ್.ಎ.–ುಂತ್ರಿಗಳಾಗುತ್ತಾರೆ. ಈ ಲಾಬಿಗಳ ನೇರ ಾರ್ಯಾಚರಣೆಯಿಂದಾಗಿ ರಾಜಕೀಯ ಮತ್ತು ುನಾವಣೆಗಳಲ್ಲಿ ಹಣ ಮತ್ತು ಅಪರಾಧದ ಾತ್ರ ಹಿಂದೆಂದಿಗಿಂತಲೂ ಹೆಚ್ಚಾಗುತ್ತಾ ಂದಿದೆ. 2013ರ ಚುನಾವಣೆಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದೆ. 2008ರಲ್ಲಿ ... ಅಭ್ಯರ್ಥಿಗಳು ರಿಯಲ್ ಎಸ್ಟೇಟ್ ಾಬಿಯಿಂದ ಮತ್ತು 30 ಅಭ್ಯರ್ಥಿಗಳು ಗಣಿ ಾಬಿಯಿಂದ ಇದ್ದರು. ಈ ಬಾರಿ ರಿಯಲ್ ಎಸ್ಟೇಟ್ ಲಾಬಿಯ ಅಭ್ಯರ್ಥಿಗಳ ಸಂಖ್ಯೆ 75ಕ್ಕೆ ಏರಿದೆ. ಗಣಿ ಲಾಬಿಯ ಅಭ್ಯರ್ಥಿಗಳ ಸಂಖ್ಯೆ 10ಕ್ಕೆ ಇಳಿದಿದೆ ಎಂದು ಒಂದು ವರದಿ ಹೇಳಿದೆ. ಆದರೆ ಗಣಿ ಲಾಬಿಗೆ ಅದರದ್ದೇ ಪಕ್ಷವೇ ಇದೆಯಲ್ಲ!

ಆಸ್ತಿ ಇಮ್ಮಡಿ ಮಾಡಿಕೊಳ್ಳಬೇಕೆ? ಶಾಸಕರಾಗಿ !

ಈ ಚುನಾವಣೆಗಳಲ್ಲಿ ಹಣದ ಬಲ ಮತ್ತು ಪ್ರಮಾಣ ಇನ್ನಷ್ಟು ಹೆಚ್ಚಿದೆ. 10 ಅಭ್ಯರ್ಥಿಗಳ ಸ್ವ–ಘೋಷಿತ ಆಸ್ತಿ 100 ಕೋಟಿ ರೂ. ಗಿಂತ ಹೆಚ್ಚಿದೆ. ಇವರಲ್ಲಿ ಹೆಚ್ಚಿನವರು ಹಾಲಿ ಎಂ.ಎಲ್.ಎ.ಗಳು. ಅತ್ಯಂತ ಹೆಚ್ಚಿನ ಆಸ್ತಿ 911 ಕೋಟಿಗೆ ಜಿಗಿದಿದೆ. ಪೂರ್ಣ ವಿಶ್ಲೇಷಣೆ ಲಭ್ಯವಿಲ್ಲ. ಆದರೂ ಮೊದಲ ಪಟ್ಟಿಯ ವಿಶ್ಲೇಷಣೆ ಪ್ರಕಾರ ಅಭ್ಯರ್ಥಿಗಳಲ್ಲಿ ಸುಮಾರು ಶೇ.60 ಕೋಟ್ಯಾಧಿಪತಿಗಳು, ಶೇ.20 ಅಪರಾಧದ ಕೇಸುಗಳು ಇರುವವರು. 'ಇಲೆಕ್ಷನ್ ವಾಚ್' 2008ರಲ್ಲಿ ಚುನಾಯಿತರಾಗಿ ಈಗ ಮರು–ಚುನಾವಣೆ ಬಯಸಿರುವವರ 179 ಶಾಸಕರ ಆಸ್ತಿ ಹೆಚ್ಚಳದ ನಿರ್ದಿಷ್ಟ ಅಧ್ಯಯನ ನಡೆಸಿದೆ. ಅದರ ಫಲಿತಾಂಶಗಳು ದಂಗು ಬಡಿಸುವಂಥದ್ದು. ಈ 179 ಶಾಸಕರ ಸರಾಸರಿ ಆಸ್ತಿ 2008ರಲ್ಲಿ 10.6 ಕೋಟಿ ಇದ್ದಿದ್ದು, 2013ರಲ್ಲಿ 19.9 ಕೋಟಿ ಆಗಿದೆ ಅಂದರೆ ಶೇ.88ರಷ್ಟು ಹೆಚ್ಚು. ಅತ್ಯಂತ ಹೆಚ್ಚಿನ ಆಸ್ತಿ ಹೆಚ್ಚಳ ಮಾಡಿಕೊಂಡವರು – ಡಿ.ಕೆ.ಶಿವಕುಮಾರ್ (ಕನಕಪುರ –76 ಕೋಟಿ ಯಿಂದ 252 ಕೋಟಿಗೆ), ಪ್ರಿಯಾಕೃಷ್ಣ (ಗೋವಿಂದರಾಜನಗರ – 768 ಕೋಟಿಯಿಂದ 912 ಕೋಟಿಗೆ), ಸಂತೋಷ್ ಲಾಡ್ (62 ಕೋಟಿಯಿಂದ 186 ಕೋಟಿ). ಮೂವರು ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ಪಕ್ಷದವರು ಎಂದು ಗಮನಿಸಬೇಕು.

ಆದರೆ ಸರ್ಕಾರದಲ್ಲಿ ಇರುವುದಕ್ಕೂ ಆಸ್ತಿ ಹೆಚ್ಚಳಕ್ಕೂ ಸಂಬಂಧ ಇಲ್ಲ ಎಂದು ತಿಳಿಯಬೇಕಾಗಿಲ್ಲ. ಮರುಚುನಾವಣೆ ಬಯಸಿರುವ 57 ಕಾಂಗ್ರೆಸ್ ಶಾಸಕರ ಸರಾಸರಿ ಆಸ್ತಿ ಶೇ.60ರಷ್ಟು ಹೆಚ್ಚಿತು (22.7ಕೋಟಿಯಿಂದ 36.4ಕೋಟಿಗೆ). ಮರುಚುನಾವಣೆ ಬಯಸಿರುವ 73 (ಈಗಿನ ವಿಭಜಿತ) ಬಿಜೆಪಿ ಶಾಸಕರ ಸರಾಸರಿ ಆಸ್ತಿ ಶೇ. 132 ರಷ್ಟು (5.2 ಕೋಟಿಯಿಂದ 12.1 ಕೋಟಿಗೆ) ಏರಿತು. ಮರುಚುನಾವಣೆ ಬಯಸಿರುವ 12 ಕೆಜೆಪಿ ಶಾಸಕರ ಸರಾಸರಿ ಆಸ್ತಿ ಶೇ.172 ರಷ್ಟು (1.3 ಕೋಟಿಯಿಂದ 3.6 ಕೋಟಿಗೆ) ಏರಿತು. ಮರುಚುನಾವಣೆ ಬಯಸಿರುವ 2 ಬಿಎಸ್.ಆರ್ ಶಾಸಕರ ಸರಾಸರಿ ಆಸ್ತಿ ಶೇ. 109 ರಷ್ಟು (10.4 ಕೋಟಿಯಿಂದ 21.8 ಕೋಟಿಗೆ) ಏರಿತು. ಮರುಚುನಾವಣೆ ಬಯಸಿರುವ 25 ಜೆಡಿ(ಎಸ್) ಶಾಸಕರ ಸರಾಸರಿ ಆಸ್ತಿ ಶೇ. 198 ರಷ್ಟು (5.8 ಕೋಟಿಯಿಂದ 17.2 ಕೋಟಿಗೆ) ಏರಿತು. ಪಕ್ಷೇತರರು ಹಿಂದೆ ಬಿದ್ದಿಲ್ಲ. ಮರುಚುನಾವಣೆ ಬಯಸಿರುವ 8 ಪಕ್ಷೇತರರ ಶಾಸಕರ ಸರಾಸರಿ ಆಸ್ತಿ ಶೇ. 83 ರಷ್ಟು (4.5 ಕೋಟಿಯಿಂದ 8.2 ಕೋಟಿಗೆ) ಏರಿತು. ಅತ್ಯಂತ ಹೆಚ್ಚಿನ ಶೇಕಡಾವಾರು ಆಸ್ತಿ ಹೆಚ್ಚಳ ಸಾಧಿಸಿದ 5 ಶಾಸಕರಲ್ಲಿ ಮೂವರು ಬಿಜೆಪಿಯವರು. ಇಬ್ಬರು ಕಾಂಗ್ರೆಸ್. ಪ್ರಮುಖ ವಿರೋಧ ಪಕ್ಷಗಳಿಗೆ 'ನ್ಯಾಯಯುತ' ಪಾಲು ಇದೆ ಲೂಟಿಯಲ್ಲಿ!

ರೇಗಾ ಜಾರಿಯಲ್ಲಿ ತೀವ್ರ ಹಿನ್ನಡೆ

ಕಳೆದ ಎರಡು ದಶಕಗಳ ನವ–ಉದಾರವಾದಿ (ಜಾಗತೀಕರಣ–ಉದಾರೀಕರಣ–ಖಾಸಗೀಕರಣದ) ನೀತಿಗಳು ಒಂದು ಕಡೆ ಚಮಚಾ ಬಂಡವಾಳಶಾಹಿಯ ಅಪಾರವಾದ ತ್ವರಿತವಾದ ಬೆಳವಣಿಗೆಗೆ ಕಾರಣವಾಗಿದೆ. ಸಾವಿರಾರು ಕೋಟಿಗಳ ಹಗರಣಗಳು ಹೆಚ್ಚಲು ಮೂಲ ಕಾರಣ ಇದು. ಶ್ರೀಮಂತರ–ಪರವಾದ ಈ ನೀತಿಗಳು ಬಡವರು ಮತ್ತು ಮಧ್ಯಮ ವರ್ಗದ ದುಡಿಯುವ ಜನರ ಎಲ್ಲಾ ಸಬ್ಸಿಡಿಗಳನ್ನು ಸವಲತ್ತುಗಳನ್ನು ರಕ್ಷಣಾ ಕ್ರಮಗಳನ್ನು ಕಿತ್ತು ಹಾಕಿದೆ. ಜನತೆಯ ಚಳುವಳಿ ಮತ್ತು ಚುನಾವಣೆಯ ಒತ್ತಡದಿಂದ ತಂದಿರುವ ಕೆಲವೇ ಜನಪರ ಯೋಜನೆಗಳೂ ಜಾ–ರಿಯಾಗದೆ ನೆನೆಗುದಿಗೆ ಬಿದ್ದಿವೆ. ರೇಗಾ ಜಾರಿ ಹಿಂದೆ ಬಿದ್ದಿದೆ. ಕರ್ನಾಟಕದ 154 ವಿಧಾನಸಭಾ ಕ್ಷೇತ್ರಗಳಲ್ಲಿ ರೇಗಾ ಜಾರಿಯ ಒಂದು ಅಧ್ಯಯನದ ಪ್ರಕಾರ, ಜಾಬ್ ಕಾರ್ಡು ಇರುವ ಕುಟುಂಬಗಳಲ್ಲಿ ಕೆಲಸ ಸಿಕ್ಕಿದವರ ಸಂಖ್ಯೆ 2009ರಲ್ಲಿ ಶೇ.67 ರಿಂದ 2011 ರಲ್ಲಿ ಶೇ.30ಕ್ಕೆ ಕುಸಿದಿದೆ. ಪ್ರತಿ ವಿಧಾನಸಭಾ ಕ್ಷೇತ್ರದ ಮೇಲೆ ರೇಗಾ ಯೋಜನೆ ಮೇಲೆ ಸರಾಸರಿ ಖರ್ಚು 2009ರಲ್ಲಿ 12.95 ಕೋಟಿ ರೂ. ನಿಂದ 2011 ರಲ್ಲಿ 4.74 ಕೋಟಿ ರೂ. ಕ್ಕೆ ಕುಸಿದಿದೆ.

ಮೂರು ವರ್ಷಗಳ ಅಂತಿಮ ಗಡುವಿನ ನಂತರವೂ ಶಿಕ್ಷಣ ಹಕ್ಕು ಕಾನೂನು ಜಾರಿ ಆಗಿಲ್ಲ. ಸರ್ಕಾರಿ ಸಂಖ್ಯೆಗಳ ಪ್ರಕಾರವೇ 54 ಸಾವಿರ ಮಕ್ಕಳು ಸ್ಕೂಲಿಗೆ ಹೋಗುತ್ತಿಲ್ಲ ಎಂದು ಹೈಕೋರ್ಟು ರಾಜ್ಯ ಸರ್ಕಾರಕ್ಕೆ ನೋಟೀಸು ಕೊಟ್ಟಿದೆ. ಶಿಕ್ಷಣ ಹಕ್ಕು ಕಾನೂನು ಜಾರಿ ಮೇಲುಸ್ತುವಾರಿ ನೋಡುವ ವ್ಯವಸ್ಥೆನೇ ಇಲ್ಲ, ಕಾನೂನು ಪ್ರಕಾರ ಖಾಸಗಿ ಸ್ಕೂಲುಗಳಲ್ಲಿ ಶೆ.25 ರಷ್ಟು ಬಡ ಮಕ್ಕಳಿಗೆ ಸೀಟು ಕೊಡುವ ವ್ಯವಸ್ಥೆ ಜಾರಿಯನ್ನು ಖಾಸಗಿ ಸ್ಕೂಲುಗಳೂ ಸರ್ಕಾರವೂ ಗಂಭೀರವಾಗಿ ತೆಗೆದು–ಕೊಂಡೇ ಇಲ್ಲ. ರೂ.2 ಕ್ಕೆ ಅಕ್ಕಿ ಕೊಡುವ ಬಿಜೆಪಿ ಸರ್ಕಾರದ ಪ್ರಮುಖ ಚುನಾವಣಾ ಭರವಸೆಯನ್ನು ಪೂರ್ತಿಯಾಗಿ ಮರೆತು ಬಿಟ್ಟಿದೆ. ●

ಎಸ್‌ಯುಸಿಐ ಕುಚೋದ್ಯದ ಹೇಳಿಕೆಗೆ ಸ್ಪಷ್ಟನೆ:

ಪಿಐ(ಎಂ) ಪ್ರಸಕ್ತ ವಿಧಾನಸಭಾ ುನಾವಣೆಯಲ್ಲಿ ಲೋಕಸತ್ತಾ ಪಕ್ಷವನ್ನು ಬೆಂಬಲಿಸಿರುವುದರ ವಿರುದ್ಧ 'ಸುಸಿ' ಯವರು ಧಾರವಾಡದಲ್ಲಿ ಕಿಡಿಗೇಡಿತನದ ಹೇಳಿಕೆಯನ್ನು ನೀಡಿ ಮತದಾರರಲ್ಲಿ ಗೊಂದಲವನ್ನು ಉಂಟುಮಾಡುವ ಅಕ್ರಮ ಪ್ರಯತ್ನ ಮಾಡಿದ್ದಾರೆ.

ಏಪ್ರಿಲ್ 21 ರ 'ಹಿಂದೂ' ಆಂಗ್ಲ ದಿನಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ತಮ್ಮ ಅನುಕೂಲತೆಗಾಗಿ ತಿರುಚಿ ಲೋಕಸತ್ತಾ ಪಕ್ಷವು ಗುಜರಾತಿನ ನರೇಂದ್ರ ಮೋದಿಯನ್ನು ಪ್ರಧಾನಿ ಮಾಡಲು ಬೆಂಬಲಿಸಿದೆ, ಆದ್ದ–ರಿಂದ ಲೋಕಸತ್ತಾ ಪಕ್ಷವನ್ನು ಬೆಂಬಲಿಸಿದ ಸಿಪಿಐ(ಎಂ) ಸಹ ಮೋದಿ ಪರವಾಗಿದೆ ಎಂದು ಎಸ್‌ಯುಸಿಐ ಮುಖಂಡರು ಕುಚೋದ್ಯದ ಆರೋಪ ಮಾಡಿದ್ದಾರೆ.

ಗುಜರಾತಿನ ನರಹಂತಕ ಮೋದಿ ವಿರುದ್ಧ ...ಐ(ಎಂ) ತೆಗೆದುಕೊಂಡಿರುವಷ್ಟು ...ವಾದ ನಿಲುಮೆಯನ್ನು ಬೇರೆ ಯಾವ ಪಕ್ಷವೂ ತೆಗೆದುಕೊಂಡಿಲ್ಲ ಎಂಬುದು 'ಸುಸಿ' ಸೇರಿದಂತೆ ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಸಿಪಿಐ(ಎಂ) ನ ಕೋಮುವಾದಿ ವಿರೋಧಿ ಧೋರಣೆಗೆ 'ಸುಸಿ' ಯವರ ಸರ್ಟಿಫಿಕೆಟ್ ಬೇಕಾಗಿಲ್ಲ.

ಗುಜರಾತಿನ ಮೋದಿಗೆ ಹತ್ತಿರವಾಗುತ್ತಿರುವವರು ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿಯವರು. ಇತ್ತೀಚೆಗೆ ನರೇಂದ್ರ ಮೋದಿ ಮಮತಾರನ್ನು ಭಾರೀ ಹೊಗಳಿದ್ದಾರೆ. ಮಮತಾ ಅವರ ಕಾಂಗ್ರೆಸನ್ನು ಬಿಜೆಪಿ ನೇತೃತ್ವದ ಎನ್‌ಡಿಎಗೆ ಸೆಳೆದು ಕೊಳ್ಳಲು ಮೋದಿ ಬಲೆ ಬೀಸಿದ್ದಾರೆ. ಎಡಪಕ್ಷಗಳ ವಿರುದ್ಧವಾಗಿ ಪಶ್ಚಿಮ ಬಂಗಾಳದಲ್ಲಿ ಮಮತಾ ಜತೆಯಲ್ಲೇ ಕೈ ಜೋಡಿಸಿರುವ ಎಸ್‌ಯುಸಿಐ ಮಮತಾ ಜತೆಯಲ್ಲಿ ನರೇಂದ್ರ ಮೋದಿಯ ತೆಕ್ಕೆಗೆ ಬಿದ್ದರೆ ಆಶ್ಚರ್ಯವೇನಿಲ್ಲ.

ಇನ್ನು ಲೋಕಸತ್ತಾ ಪಕ್ಷದ ಬಗ್ಗೆ 'ಸುಸಿ' ಆರೋಪದಲ್ಲಿ ಹುರುಳಿಲ್ಲ. ಲೋಕಸತ್ತಾದ ಬೆಂಗಳೂರಿನ ಒಬ್ಬ ಮಹಿಳಾ ಅಭ್ಯರ್ಥಿ ತನ್ನ 'ಫೇಸ್‌ಬುಕ್' ನಲ್ಲಿ ನರೇಂದ್ರ ಮೋದಿ ಭಾಷಣವನ್ನು ಹಾಕಿರುವುದು ನಿಜ. ಆ ಮಹಿಳಾ ಅಭ್ಯರ್ಥಿ ಮೋದಿಯನ್ನು ಸಮರ್ಥಿಸಿ ಬಹಿರಂಗವಾಗಿ ಮಾತನಾಡಿದ್ದು ಸಹ ನಿಜವೆಂದು ಆ ಪಕ್ಷದವರೇ ಹೇಳಿಕೊಂಡಿದ್ದಾರೆ. ಈ ಕುರಿತು ಲೋಕಸತ್ತಾ ಪಕ್ಷದ ಮುಖಂಡರು ಕ್ರಮ ಜರಗಿಸಿದ್ದಾರೆ. ಪಕ್ಷದ ಧೋರಣೆ ವಿರುದ್ಧ ದಾಖಲಿಸಿದ ತಮ್ಮ ಹೇಳಿಕೆಗಳನ್ನು ತೆಗೆದು ಹಾಕಲು ಆದೇಶಿಸಲಾಗಿದೆ.

ಯಾವುದೇ ಒಂದು ಪಕ್ಷದ ಒಬ್ಬ ಸದಸ್ಯ ಅಥವಾ ಮುಖಂಡ ವ್ಯಕ್ತಿಗತವಾಗಿ ಕೋಮುವಾದಿ ವಿಚಾರವನ್ನು ಹೊಂದಿದ್ದರೆ ಅದನ್ನು ಪಕ್ಷಕ್ಕೆ ಆರೋಪಿಸುವುದು ನ್ಯಾಯವಲ್ಲ ಎಂಬುದನ್ನು 'ಸುಸಿ' ಯವರು ತಿಳಿಯಬೇಕು. ಉದಾಹರಣೆಗೆ ಕಾಂಗ್ರೆಸ್ ನಲ್ಲಿ ಯಾರಾದರೂ ಒಬ್ಬ ಮುಖಂಡನಿಗೆ ಮೋದಿ ಬಗ್ಗೆ ಒಳ್ಳೆಯ ಅಭಿಪ್ರಾಯವಿದ್ದರೆ ಇಡೀ ಕಾಂಗ್ರೆಸ್ ಪಕ್ಷ ಕೋಮುವಾದಿ ಎಂದು ಆರೋಪಿಸಲಾಗದು. ಎಡಪಕ್ಷಗಳನ್ನು ವಿರೋಧಿಸುವ ಆತುರದಲ್ಲಿ 'ಸುಸಿ' ಈ ರೀತಿ ಕುಚೋದ್ಯದ ಹೇಳಿಕೆ ನೀಡುವುದನ್ನು ನಿಲ್ಲಿಸಲಿ.

ಕಾರ್ಮಿಕ ಚಳುವಳಿಯ...

ಪುಟ 15 ಕ್ಕೆ

ಬಂಡವಾಳಗಾರರ ವ್ಯಾಪಾರ ವ್ಯವಹಾರ ಆಮದು ರಫ್ತುಗಳ ಮೇಲೆ ವಿಪರೀತ ಸುಂಕಗಳನ್ನು ವಿಧಿಸಲು, ಅವರ ಶೇರು ಮಾರುಕಟ್ಟೆಯನ್ನು ನಿರ್ಬಂಧಿಸಲು, ಹಾಗೂ ಪತ್ರಿಕೆಗಳ ಮೇಲೂ ಬಿಗಿ ಕಾನೂನುಗಳನ್ನು ಹೇರಲು ಕೆಲ ಪ್ರಸ್ತಾಪಗಳನ್ನು ಈ ವಿದೇಶಿ ನಿಯಂತ್ರಣದ ಪ್ರದೇಶಗಳ ನಗರ ಸಭೆಯಲ್ಲಿ ಜೂನ್ ಎರಡರಂದು ಮಂಡಿಸಲು ಸಿದ್ಧತೆ ನಡೆಸಿದರು.

ಈ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಕೇವಲ ಕಾರ್ಮಿಕ ಹೋರಾಟಕ್ಕೆ ಇದನ್ನು ಸೀಮಿತಗೊಳಿಸದೆ ವಿಶಾಳ ಸ್ವರೂಪ ನೀಡಿ ಎಲ್ಲ ಜನರನ್ನೂ ಒಳಗೊಳ್ಳಬೇಕೆಂದು ಮೇ 30 ರಂದು ಈ ವಿದೇಶೀ ಭಾಗದಲ್ಲಿ ಸಾಮ್ರಾಜ್ಯಶಾಹೀ ವಿರೋಧೀ ಪ್ರತಿಭಟನೆಗೆ ಕರೆ ನೀಡಿತು. ಅಂದು ಅಲ್ಲಿ ಪ್ರತಿಭಟನೆ ನಡೆಸುತಿದ್ದ ಜನರ ಮೇಲೆ ಗುಂಡಿನ ಮಳೆಗರೆದು ಒಂದು ಡಜನ್‌ಗೂ ಹೆಚ್ಚು ಜನರನ್ನು ಕೊಲ್ಲಲಾಯಿತು. 50 ಕ್ಕೂ ಹೆಚ್ಚು ಜನ ಗಾಯಗೊಂಡರು. ಇದು ಚೀನಾದ ಹೋರಾಟಗಳ ಚರಿತ್ರೆಯಲ್ಲಿ ಮೇ ಹತ್ಯಾಕಾಂಡ ಎಂದೇ ಹೆಸರಾಗಿದೆ. ಈ ಹತ್ಯಾಕಾಂಡ ಹಿಂದಿನಂತೆ ಕಾರ್ಮಿಕ ಚಳುವಳಿಯನ್ನು ಕುಗ್ಗಿಸುವುದಕ್ಕೆ ಬದಲಾಗಿ ವಿಶ್ವದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿಯೇ ಅತ್ಯಂತ ದೀರ್ಘವಾದ ಹಾಗೂ ಸಮರಧೀರ ಮುಷ್ಕರಕ್ಕೆ ಹಾಗೂ ಸಾಮ್ರಾಜ್ಯಶಾಹಿಗಳ ಸೊಕ್ಕಡಗಿಸುವುದಕ್ಕೆ ಕಾರಣವಾಯಿತು. ●

JANASHAKTHI KANNADA VARA PATRIKE MAY 05, 2013 Price : Rs. 10/- RNI No. KARKAN /2006/17926 Posted on every Satu[...]
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-28[...]

ಮೋಸ ಮಾಡೋರು ನಾವಲ್ಲ... ಸುಳ್ಳು ಹೇಳೋರು ನಾವಲ್ಲ...

(ಆನೇಕಲ್ ಕ್ಷೇತ್ರದಲ್ಲಿ ಸಿಪಿಐ(ಎಂ) ಪ್ರಚಾರ) ವರದಿ– ಬಿ. ರಾಜಶೇಖರ ಮೂರ್ತಿ.

ಅದೊಂದು ಕಾಲವಿತ್ತು. ಅನೇಕಲ್ ತಾಲ್ಲೂಕಿನ ಒಂದು ಭಾಗ ಬನ್ನೇರುಘಟ್ಟದ ವಿಶಾಲವಾದ ದಟ್ಟಾರಣ್ಯ. ದೊಡ್ಡ ದೊಡ್ಡ ಬಂಡೆ ಕಲ್ಲುಗಳು. ಕಾಡಿಗೆ ಹೋಗಿ ಕಣ್ಣು ಹಾಯಿಸಿದರೆ ಸಾಕು ಕೈ ಅಳತೆಯಷ್ಟರಲ್ಲಿರುವ ಪೊದೆಗಳಿಂದ ಎದ್ದು ಓಡಿ ಹೂಗುವ ಮೊಲಗಳು. ಆಗ ಲೆಕ್ಕ–ಕ್ಕೆ ಸಿಗದಷ್ಟು ಆನೆಗಳು. ಹುಲಿ–ಸಿಂಹಗಳು ಸೇರಿದಂತೆ ಕಾಡಿನಲ್ಲಿ ವಾಸವಿರತಕ್ಕ ಎಲ್ಲಾ ಪ್ರಾಣಿ ಪಕ್ಷಿಗಳ ಆಶ್ರಯತಾಣವಾಗಿತ್ತು. ಕಾಲ ಕಾಲಕ್ಕೆ ಮಳೆಯೂ ಇತ್ತು. ತಾಲ್ಲೂಕಿನಾದ್ಯಂತ ಕೆರೆ ಕಟ್ಟೆಗಳು ತುಂಬಿ ತುಳುಕುತ್ತಿದ್ದವು. ಅತ್ತ ಕಾಡಿನಲ್ಲಿ ಆರಣ್ಯ ಸಂಪತ್ತು ಸಮೃದ್ಧವಾಗಿದ್ದರೆ, ಇತ್ತ ವಿಶೇಷವಾಗಿ ಕೃಷಿಕರು–ಕೃಷಿಕೂಲಿಕಾರರು ಕೃಷಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದರು. ಆನೇಕಲ್ ತರಕಾರಿ, ರೇಷ್ಮೆ, ಹಾಲು ಉತ್ಪನ್ನದಲ್ಲಿ ಹೆಸರುವಾಸಿಯಾಗಿತ್ತು. ಈ ಪ್ರದೇಶ 'ರಾಗಿ ಕಣಜವೆಂದೇ' ಪ್ರಸಿದ್ಧವಾಗಿತ್ತು. ತರಕಾರಿ ಮತ್ತಿತರ ಆಹಾರ ಉತ್ಪನ್ನ ಬೆಂಗಳೂರು–ಬಾಂಬೆ ಸೇರಿದಂತೆ ವಿದೇಶಕ್ಕೂ ರವಾನೆಯಾಗುತ್ತಿತ್ತು. ಈ ಮಧ್ಯೆಯೂ ಭೂಮಾಲೀಕರ ಪಾಳೆಗಾರಿ ದರ್ಪಗಳಿಗೆ ಕಡಿಮೆಯೇನು ಇರಲಿಲ್ಲ. ಜಾತಿ–ಅಸ್ಪೃಶ್ಯತೆಯ ಆಚರಣೆಗಳು, ದೌರ್ಜನ್ಯಗಳು–ಕೊಲೆ ಸುಲಿಗೆಗಳು ಎಗ್ಗಿಲ್ಲದೇ ಜರುಗುತ್ತಿದ್ದವು. ಇದರಿಂದಾಗಿಯೇ ಇಲ್ಲಿ ಡಾ. ಅಂಬೇಡ್ಕರ್ ವಿಚಾರಧಾರೆಯಲ್ಲಿ ಜನ ಚಳುವಳಿಗಳು ಹುಟ್ಟಿಕೊಂಡಿದ್ದವು. ರಾಜ್ಯ–ಕ್ಕೆ ಮಾದರಿಯಾಗಬಹುದಾಗಿದ್ದಂತಹ ಜನಾಂದೋಲನಗಳು ಮತ್ತು ಜನನಾಯಕರು ಈ ತಾಲ್ಲೂಕಿನಿಂದಲೂ ಬೆಳೆದು ಬಂದಿದ್ದರು. ಕೆಳ ಮಟ್ಟದ ಜನರಲ್ಲಿ ಜಾಗೃತಿಯೂ ಮೂಡತೊಡಗಿತ್ತು. ಈ ಸಂದರ್ಭದಲ್ಲೇ ವಿವೇಕಾನಂದರ ಹೆಸರಿನಲ್ಲಿ ದಾಪುಗಾಲಿಟ್ಟು ನೆಲೆಯೂರಿದ್ದ ಸಂಘಪರಿವಾರ ತನ್ನ ಕೋಮು ಕೆನ್ನಾಲಿಗೆಯನ್ನು ಹಳ್ಳಿ ಪಟ್ಟಣಗಳಿಗೆಲ್ಲಾ ಹಬ್ಬಿಸಿ ಜಾತಿವಾರು ಕೋಮುಗಲಭೆಗಳಿಗೆ ಎಡೆಮಾಡಿತು. ತನ್ನ ಮೂಲಭೂತವಾದದ ಅನುಕರಣೆಗಳನ್ನು ವಿಸ್ತರಿಸತೊಡಗಿತು. ಸಂಘಪರಿವಾರದ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಹಿಡಿತ ಸಾಧಿಸಿತು.

ಇದರಿಂದಾಗಿಯೇ ಬಿಜೆಪಿ ಕಳೆದ 4 ಬಾರಿಯಿಂದಲೂ ಶಾಸಕ ಸ್ಥಾನವನ್ನು ತನ್ನಡಿಯೇ ಉಳಿಸಿಕೊಳ್ಳಲು ಸಾಧ್ಯವಾಗಿರುವುದು. ಹೆಸರಿಗೆ ಮೀಸಲು ಕ್ಷೇತ್ರವಾಗಿದ್ದರೂ ಎಲ್ಲಾ ಪ್ರಾಬಲ್ಯಗಳು ಮೇಲ್ಜಾತಿಯ ದಣಿಗಳ ಕೈಯಲ್ಲಿಯೇ ಇವೆ. ಅನೇಕಲ್ ಬೆಂಗಳೂರು ಜಿಲ್ಲೆಯೇ ಆಗಿರುವುದರಿಂದ, ಬೆಂಗಳೂರಿನ ಸೆರಗಿನಲ್ಲಿಯೇ ಇರುವುದರಿಂದ ಇಲ್ಲಿನ ಭೂಮಿಯ ಬೆಲೆ ಚಿನ್ನದ ದರಕ್ಕಿಂತ ಹೆಚ್ಚಿದೆ. ಇಂತಹ ಚಿನ್ನದ ಭೂಮಿಯನ್ನು ಹೊಂದಿರುವವರಲ್ಲಿ ಹೆಚ್ಚಿನವರು ಇಲ್ಲಿನ ಮೇಲ್ಜಾತಿಯವರೇ ಆಗಿದ್ದಾರೆ. ಹೀಗಾಗಿ ಇಲ್ಲಿ ನಡೆಯುವುದು ಪ್ರಧಾನವಾಗಿ ಮೇಲ್ಜಾತಿಗಳ ನಾಯಕರ ಕಾರುಬಾರು ಮಾತ್ರ.

ಇಂತಹವರ ಕಾರುಬಾರಿನಿಂದಲೇ ಸಂಪತ್ಭರಿತ ಕಾಡು ಇಂದು ಬರಿದಾಗಿದೆ.



ಪ್ರಾಣಿ – ಪಕ್ಷಿಗಳನ್ನು ನೋಡಲು ಕೂಡಿ ಹಾಕಿರುವ ಬನ್ನೇರುಘಟ್ಟದ ನ್ಯಾಷನಲ್ ಪಾರ್ಕ್‌ಗೆ ಹೋಗಬೇಕು. ಅಲ್ಲಿಯೂ ಅವು ಸೊರಗುತ್ತಿವೆ. ರೈತರು–ಕೃಷಿಕೂಲಿಕಾರರು ಬಿಕಾರಿಗಳಾಗುತ್ತಿದ್ದಾರೆ. ಯುವಕರು ನಿರುದ್ಯೋಗದಿಂದ ಹತಾಶರಾಗಿದ್ದಾರೆ. ಯುವಕರು ಉಳ್ಳವರ ಆಸ್ತಿಗಳ ರಕ್ಷಕರಾಗಿದ್ದಾರೆ. ಭವಿಷ್ಯಶೂನ್ಯರಾಗಿದ್ದಾರೆ. ಇಲ್ಲೇ ಹುಟ್ಟಿ ಬೆಳೆದ ಜನಕ್ಕೀಗ ವಾಸಿಸಲು ಮನೆ ನಿವೇಶನಗಳಿಲ್ಲ. ಕುಡಿಯುವ ನೀರು ಇಲ್ಲ. ಹೀಗೆ ಬಹುತೇಕ ಜನತೆ ದಟ್ಟ ದರಿದ್ರರಾಗಿದ್ದಾರೆ. ಇದು ಮೇಲ್ನೋಟಕ್ಕೆ ಕಾಣುವುದು. ಆನೇಕಲ್ ತಾಲ್ಲೂಕಿನ ಒಳಗಿಳಿದು ನೋಡಿದರೆ ಇನ್ನೂ ದಾರುಣ ವಾಸ್ತವದ ಒಡಲಾಳ ಬಿಚ್ಚಿಕೊಳ್ಳುತ್ತದೆ.

ಆನೇಕಲ್‌ನ ಕ್ಷೇತ್ರಕ್ಕೆ ಕಾಲಿಟ್ಟರೆ ಗೊತ್ತಾಗುತ್ತದೆ. ತಾಲ್ಲೂಕಿನ ಮುಕ್ಕಾಲು ಪಾಲು ಭೂಮಿ ಇಡಿ ಇಡಿಯಾಗಿ ರಿಯಲ್ ಎಸ್ಟೇಟ್ ದಂಧೆಗೆ ತುತ್ತಾಗಿದೆ. ಜೊತೆಗೆ ಮೀಟರ್ ಬಡ್ಡಿ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಎಲ್ಲಿ ನೋಡಿದರೂ ಪಾಳು ಬಿದ್ದಿರುವ ಜಮೀನಿಗೆ ಕಾಂಪೌಂಡುಗಳು. ಗಗನದೆತ್ತರಕ್ಕೆ ನಿಂತಿರುವ ಕಟ್ಟಡಗಳು. ಕಾಮಗಾರಿಯಲ್ಲಿರುವ ಕಟ್ಟಡಗಳು. ಸ್ಥಳೀಯವಾಗಿ ಭೂಮಿಯ ಮೇಲೆ ಸ್ವಾಧೀನದಲ್ಲಿರುವ ದಲಿತರು, ದುರ್ಬಲರು, ದುರ್ಬಲ ಮಹಿಳೆಯರು, ವಿಧವೆಯರ ಹೆಸರುಗಳಿಗೆ ವಿಭಾಗ ಪತ್ರಗಳು ಆಗದೆ ಇರುವ ಕಾರಣಕ್ಕೆ ಮತ್ತು ಸ್ಥಳೀಯ ಕಂದಾಯ ಇಲಾಖೆಯ ಭ್ರಷ್ಟಾಚಾರದಿಂದಾಗಿ ಮತ್ತು ತಾತ ಮುತ್ತಾತಂದಿರ ಹೆಸರಿನಲ್ಲಿರುವ ಕಾರಣಕ್ಕೆ ವರ್ಗಾವಣೆ ಅಗದೆ ಲೋಪವನ್ನು ಹುಡುಕಿ ಸ್ಥಳೀಯ ಭೂಗಳ್ಳ ಕಮೀಷನ್ ಏಜೆಂಟರು ಕಡಿಮೆ ಬೆಲೆಗೆ ಈ ದುರ್ಬಲರಿಂದ ಭೂಮಿಯನ್ನು ಕಿತ್ತುಕೊಳ್ಳುತ್ತಿದ್ದಾರೆ.

ಕೇವಲ ಐದು ಹತ್ತು ವರ್ಷಗಳ ಹಿಂದೆ ಕೃಷಿಯಿಂದ ಹಸಿರಾಗಿದ್ದ ಆನೇಕಲ್ ಇಂದು ಬರಡು ಭೂಮಿಯಂತೆ ಕಾಣುತ್ತಿದೆ. ಕುಡಿಯುವ ನೀರಿಗಾಗಿ ಹಾಹಾಕಾರ. ಬೋರ್‌ವೆಲ್‌ನಿಂದ ನೀರು ಪಡೆಯಲು ಕನಿಷ್ಟ 1,500 ಅಡಿಯಷ್ಟು ಆಳಕ್ಕಿಳಿದರೂ ನೀರು ದಕ್ಕುವುದು ಕಷ್ಟ. ಅಲ್ಲೊಬ್ಬ ವಯೋವೃದ್ಧರನ್ನು 'ಏನು ಸ್ವಾಮಿ ಅನೇಕಲ್ಲಿನ ಭೂಮಿಯನ್ನೆಲ್ಲಾ ಹೊರಗಿನಿಂದ ಬರುವ ಶ್ರೀಮಂತರಿಗೆ ಮೀಸಲಿರಿಸಿದ್ದೀರಿ' ಎಂದು ಕೇಳಿದರೆ ಅವರು 'ನೋಡಿ ಸ್ವಾಮಿ ನಮ್ಮ ಒಟ್ಟು 24 ಗ್ರಾಮ ಪಂಚಾಯಿತಿಗಳಲ್ಲಿ 2 ಬಿಟ್ಟು ಉಳಿದೆಲ್ಲಾ ಗ್ರಾಮ ಪಂಚಾಯಿತಿಗಳಲ್ಲಿನ ಭೂಮಿಯೆಲ್ಲಾ ಹಿಂಗೆ ಅಗಿರೋದು' ಎಂದು ಹೇಳುತ್ತಾರೆ.

ಭವಿಷ್ಯದ ಬೆಂಗಳೂರು ಆನೇಕಲ್‌ಗೆ ಸ್ವಾಗತ: ಭೂದಂಧೆಕೋರರ ಸಂಚು

ಅನೇಕಲ್‌ಗೆ ಕಾಲಿಟ್ಟರೆ ಇಂತಹ ದೊಡ್ಡ ದೊಡ್ಡ ಕಟೌಟ್‌ಗಳು ಕಾಣಸಿಗುತ್ತವೆ. ರಿಯಲ್ ಎಸ್ಟೇಟ್ ಬಿಲ್ಡರ್‌ಗಳು ಗ್ರಾಹಕರನ್ನು ಆಕರ್ಷಿಸಲು ತಾಲ್ಲೂಕಿನಾದ್ಯಂತ ನಿಲ್ಲಿಸಿರುವ ಬೃಹತ್ ಗಾತ್ರದ ನಾಮಫಲಕಗಳು. ಜಾಗತಿಕ ಬಂಡವಾಳದ ಆಕರ್ಷಣೆಯಾಗಿರುವ ಆನೇಕಲ್‌ನಲ್ಲಿ ಎಲೆಕ್ಟ್ರಾನಿಕ್ ಸಿಟಿ, ವೀರಸಂದ್ರ, ಬೊಮ್ಮಸಂದ್ರ, ಜಿಗಣಿ, ಅತ್ತಿಬೆಲೆ ಸೇರಿ 5 ಕೈಗಾರಿಕಾ ಪ್ರದೇಶಗ[...] ಸಾವಿರಾರು ಎಕರೆಯಲ್ಲಿ ವಿಸ್ತರಿಸಿಕೊಂಡಿರ[...] ಈ ಕೈಗಾರಿಕಾ ಪ್ರದೇಶಗಳು [...] ಭೂಮಿಯನ್ನೆಲ್ಲಾ ಕಬಳಿಸಿ ಬೃಹದಾಕಾರವ[...] ಬೆಳೆದು ನಿಂತಿವೆ. ಇಂತಹ ಬೆಳವಣಿಗೆಗ[...] ಸಾವಿರಾರು ರೈತರು ತಮ್ಮ 2–3 [...]ರೆ ಭೂಮಿ ಕಳೆದು ಕೊಂಡು ಇಂ[...] ಒಂದು ನೀವೇಶನಕ್ಕೂ ಆಸರೆ ಇಲ್ಲ[...] ನಿರ್ಗತಿರಾಗಿದ್ದಾರೆ. ಸ್ಥಳೀಯ [...] ಯುವಕರು ಈ ಕೈಗಾರಿಕಾ ಪ್ರದೇಶಗ[...] ಕಾಲಿಡಲು ಅನರ್ಹರಾಗುತ್ತಿದ್ದಾರೆ. [...] ಇರುವ ಗಾರ್ಮೆಂಟ್ಸ್, ಆಟೋ ಮೊಬೈ[...] ಎಲೆಕ್ಟ್ರಾನಿಕ್, ಸಾಫ್ಟ್‌ವೇರ್, ಗ್ರಾನೈ[...] ಉದ್ಯಮಗಳ 2ಲಕ್ಕೂ ಮೀರಿ ಕಾರ್ಮಿಕ[...] ದುಡಿಯುತ್ತಿದ್ದಾರೆ. ಇವರಲ್ಲಿ ಹೊರ ರಾ[...] ಮತ್ತು ಹೊರ ಜಿಲ್ಲೆಗಳಿಂದ ಉದ್ಯೋ[...] ಅರಿಸಿ ಬಂದವರು ಶೇ. 80ಕ್ಕಿಂತ ಹೆಚ್ಚಿದ್ದಾ[...] ಇಲ್ಲಿನ ಸ್ಥಳಿಯ ಯುವಕರಿಗೆ ಉದ್ಯೋಗದ [...] ಆದ್ಯತೆ ಇಲ್ಲ. ಇಲ್ಲಿನ ಬಹುತೇಕ ಕಾರ್ಮಿಕ[...] ನಾಗರೀಕ ಸೌಲಭ್ಯವಿಲ್ಲದೇ ವಿಲಿ ವಿ[...] ಒದ್ದಾಡುವಂತಾಗಿದೆ. ಸಂಘಟನೆಗಳನ[...] ಕಟ್ಟಿಕೊಂಡು ಹಕ್ಕುಗಳಿಗಾಗಿ ಮುಂದಾದ[...] ಗೂಂಡಾಗಳನ್ನು, ಅಂಧಾಭಿಮಾನದ [...] ಮತ್ತು ಭಾಷಾ ಸಂಘಟನಾ ವೇದಿಕೆಗಳ[...] ಮುಂದಿಟ್ಟಿಕೊಂಡು ಕಾರ್ಮಿಕ ಹಕ್ಕುಗಳ[...] ಚಿವುಟಿ ಹಾಕಲಾಗುತ್ತಿದೆ. ಗುತ್ತಿಗೆ ಕಾರ್ಮಿ[...] ಪದ್ಧತಿ ವ್ಯಾಪಕವಾಗಿದ್ದು ಕಾರ್ಮಿಕರ[...] ಸರಿಯಾಗಿ ವೇತನವನ್ನು ಕೊಡದೆ ವಂಚ[...] ಮಾಡಲಾಗುತ್ತಿದೆ. ಇದರಲ್ಲಿ ಸ್ಥಳೀಯ[...] ಮಾಲಿಕರ ಮತ್ತು ರಾಜಕಾರಣಿಗಳ ಹಿತಾ[...] ಅಡಗಿದೆ. ದುಬಾರಿ ಬಾಡಿಗೆ ಮ[...] ಬೆಲೆ ಏರಿಕೆ. ದುಬಾರಿ ಆರೋಗ್ಯ ವೆ[...] ಮುಂತಾದ ಸಮಸ್ಯೆಗಳು ಕಾರ್ಮಿಕರ[...] ಕಿತ್ತು ತಿನ್ನುತ್ತಿವೆ. ಕೈಗಾರಿಕೆಗಳು ಬೆಳೆದರ[...] ಸಾಮಾನ್ಯ ಜನತೆಗೆ ಉದ್ಯೋಗ ಮ[...] ವೇತನ ಭದ್ರತೆ ಇಲ್ಲದೆ ಬದುಕಿನ ಬವಣೆಗ[...] ಹೆಚ್ಚುತ್ತಿವೆ. ಇನ್ನೊಂದೆಡೆ ಕೃಷಿ ಅವಸಾನ[...] ಅಂಚಿನಲ್ಲಿದೆ. ಇನ್ನೂ ಸರ್ಕಾರ[...] ಕೂಡ ವಿವಿಧ ಹೆಸರಿನಲ್ಲಿ ಭೂ ಸ್ವಾಧೀ[...] ಪಡಿಸಿಕೊಳ್ಳುತ್ತಿದೆ. 30–40 ವರ್ಷಗಳಿಂ[...] ಬಗರ್‌ಹುಕುಂ ಸಾಗುವಳಿ ಮಾಡಿಕೊಂಡ[...] ಬರುತ್ತಿದ್ದವರನ್ನು ಒಕ್ಕಲೆಬ್ಬಿಸುತ್ತಿದೆ.

ಹೀಗೆ ಹಗಲು ದರೋಡೆ ಮಾಡ[...] ಅನುವು ಮಾಡಿಕೊಟ್ಟದ್ದು ಇದ[...] ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ[...] ಬಿಜೆಪಿಯಿಂದ 4 ಬಾರಿ ಶಾಸಕರಾ[...] ಇಂದು ಕೋಟ್ಯಾಧಿಪತಿಯಾಗಿರು[...] ಎ. ನಾರಾಯಣಸ್ವಾಮಿ ಮತ್ತು ಅವ[...] ಪಟಾಲಂಗಳು. ದಲಿತರ ನಡುವೆ ಜಾ[...] ಹೆಸರು ಹೇಳಿಕೊಂಡು, ಇವರ ಬಾಲಬುಡಕ[...] ಕೈ ಖರ್ಚಿಗೆ ಹಣ ನೀಡಿ ಇಡೀ ಅನೇಕಲ್[...] ದಲಿತ ಹಿಂದುಳಿದ ಬಡ ಯುವಜನರನ[...] ನಾರಾಯಣ ಸ್ವಾಮಿಯಂತಹವರು ತಮ[...] ಕೈವಶದಲ್ಲಿಟ್ಟುಕೊಂಡಿದ್ದಾರೆ. ಶಾಸ[...] ಮತ್ತು ಸಚಿವರೂ ಆದ ಎ. ನಾರಾಯಣ[...] ಸ್ವಾಮಿ ಇಲ್ಲಿನ ಮೇಲ್ಜಾತಿಯ ಭೂದಂ[...]

ಪುಟ 4

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**